60 ನೇ ಸ್ವಾತಂತ್ರ್ಯೋತ್ಸವ

ಕರ್ನಾಟಕ ಸರ್ಕಾರದ ಪ್ರಾಥಮಿಕ ಶಿಕ್ಷಣ ಇಲಾಖೆ

# ಶಿಕ್ಷಣ ವಾರ್ತೆ

ಎಲ್ಲರೂ ಕಲಿಯೋಣ
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಬೆಳೆಯೋಣ

ಸಂಪುಟ - 7 ಸಂಚಿಕೆ - 3 ಆಗಸ್ಟ್ - 2007 ಆಂತರಿಕ ಪ್ರಸಾರ





ನಾಳಿನ ವೀರ ಮಹಿಳೆಯರು ನಾವು
ಹೊಸ ನಾಡೊಂದನು ಕಟ್ಟುವೆವು



ಕೊಪ್ಪಳ ಜಿಲ್ಲಾ ಶೈಕ್ಷಣಿಕ ವರದಿ .......



# ಚಿತ್ರಸುದ್ದಿ

60ನೇ ಸ್ವಾತಂತ್ರ್ಯೋತ್ಸವ ಸಮಾರಂಭವನ್ನು ಸೆಂಟ್ರಲ್ ಜೈಲ್ ಪರಪ್ಪನ ಅಗ್ರಹಾರ ಶಾಲೆಯಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಲಾದಾನಿಗಳು ಮತ್ತು ಡಾ.ಸುಭಾಷ್ ಭರಣಿ ಪ್ರತಿಷ್ಠಾನದ ರಾಜ್ಯ ನಿರ್ದೇಶಕರಾದ ಕೆ.ವೆಂಕಟಸ್ವಾಮಿ, ರಾಯಸಂದ್ರ, ನಿರ್ದೇಶಕ ಪಿ.ವಿ.ಜಗದೀಶ್, ಕರ್ನಾಟಕ ಕಾರಾಗೃಹಗಳ ಉಪ ಮಹಾನಿರೀಕ್ಷಕ ಎಸ್.ಜಯರಾಮಯ್ಯ, ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಶಿಕ್ಷಕರಾದ ಸಿ. ಸಿದ್ದಪ್ಪ, ಮುಖ್ಯ ಅಧೀಕ್ಷಕರಾದ ವಿ.ಎಸ್.ರಾಜ, ಸಹಾಯಕ ಅಧೀಕ್ಷಕ ಲಿಂಗರಾಜು, ಗ್ರಾ.ಪಂ.ಸದಸ್ಯರಾದ ಎಸ್.ಮುನಿರಾಜು, ವಿ.ಬಾಬು, ಮುಖ್ಯ ಶಿಕ್ಷಕಿ ಶ್ರೀಮತಿ ಭಾಗ್ಯಮ್ಮ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

– ಸಿ.ಸಿದ್ದಪ್ಪ,ಶಿಕ್ಷಕ



ಬೆಂಗಳೂರಿನ ನಿವಾಸಿಗಳಾದ ಜೋಸೆಫ್‌ಬಾಬುರವರಿಂದ ದಾನರೂಪದಲ್ಲಿ ಪಡೆದ ಸುಮಾರು 6 ಸಾವಿರ ಬೆಲೆಯ ಉಚಿತ ಬ್ಯಾಗ್ ಹಾಗೂ ನೋಟ್ ಪುಸ್ತಕಗಳನ್ನು ವಿತರಿಸುವ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು ಸ.ಕಿ.ಪ್ರಾ. ಶಾಲೆ ಹೊಸಗುಳದ ಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಹನುಮಂತಪ್ಪ ಹಾಗೂ ಸತೀಶ್ಚಂದ್ರ ಪಾಟೀಲ, ಗ್ರಾಮಸ್ಥರಾದ ಮಾಲಾ ಎಂ. ಪಾಟೀಲ ಆಗಮಿಸಿ ಕಾರ್ಯಕ್ರಮವು ಸಂಭ್ರಮದಿಂದ ನಡೆಯಲು ಸಹಕರಿಸಿದರು.

– ಮಹಾಂತೇಶ ಬೋಗಾರ,
ಶಿಕ್ಷಕರು, [illegible]



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಸರೊಳ್ಳಿ, ಹಳಿಯಾಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಇಲ್ಲಿ ದಿನಾಂಕ 14.07.2007 ರಂದು ಮಕ್ಕಳಲ್ಲಿ "ಪರಿಸರ ಪ್ರಜ್ಞೆ" ಕಾರ್ಯಕ್ರಮದ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.) ರವರ ಸಹಯೋಗದೊಂದಿಗೆ ಶಾಲಾ ಮಕ್ಕಳಿಗೆ ಪರಿಸರ ಕುರಿತು ಪ್ರಬಂಧ, ಚಿತ್ರಕಲೆ, ಪರಿಸರ ಗೀತೆ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಆಕರ್ಷಕ ಬಹುಮಾನಗಳನ್ನು ಹಂಚಲಾಯಿತು.

"ಪರಿಸರ ಪ್ರಜ್ಞೆ" ಕಾರ್ಯಕ್ರಮದ ಉದ್ಘಾಟನೆಯನ್ನು ಶಾಲಾವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ನೆರವೇರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು ಮತ್ತು ಶಾಲೆಯ ಮಕ್ಕಳು ಉತ್ಸಾಹದಿಂದ ಭಾಗವಹಿಸಿದರು. 'ಪರಿಸರ ಪ್ರಜ್ಞೆ' ಕುರಿತು ಶಾಲೆಯ ಮುಖ್ಯೋಪಾಧ್ಯಾಪಕಿ ಶ್ರೀಮತಿ ಜನಟಾ ರುಬಾರಿಯೋ ಉಪನ್ಯಾಸ ನೀಡಿದರು.

– ಮುಖ್ಯೋಪಾಧ್ಯಾಪಕರು



ಆನಂದದಾಯಕ ಕಲಿಕೆಗೆ ಅಗತ್ಯವಾದ ಚಟುವಟಿಕೆಗಳಿಗೆ ಪೂರಕವಾದ ಚೈತನ್ಯ ಕೊಠಡಿ ಹಾಗೂ ಚೈತನ್ಯ ಚಪ್ಪರದಡಿಯಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಟ್ಟೇತಿಮ್ಮನಹಳ್ಳಿ ಚಿಕ್ಕಮಗಳೂರು ತಾಲ್ಲೂಕು ಇಲ್ಲಿಯ ಕಂದಮ್ಮಗಳೊಂದಿಗೆ ಶಾಲಾ ಮುಖ್ಯ ಶಿಕ್ಷಕರಾದ ಹೆಚ್. ಕೆ. ಓಂಕಾರಪ್ಪ, ಸಹ ಶಿಕ್ಷಕರಾದ ವಿ.ಡಿ.ಬಲರಾಮಶೆಟ್ಟಿಯವರೊಂದಿಗೆ ಈ ಬಗ್ಗೆ ಮಾರ್ಗದರ್ಶಿಗಳಾದ ಎಸ್.ಆರ್. ಓಂಕಾರಪ್ಪ ಶಿಕ್ಷಣ ಸಂಯೋಜಕರು ಹಾಗೂ ಕಳಸಾಪುರ ಕ್ಲಸ್ಟರ್‌ನ ಸಿ.ಆರ್.ಪಿ.ಗಳಾದ ಎಸ್.ಎನ್. ರಾಜಶೇಖರಗೌಡ ಉಪಸ್ಥಿತರಿದ್ದರು.

– ಮುಖ್ಯೋಪಾಧ್ಯಾಪಕರು



**ಪ್ರಧಾನ ಸಂಪಾದಕರು**

**ಜಿ.ಕುಮಾರ ನಾಯಕ,** ಆಯುಕ್ತರು, ಸಾ.ಶಿ.ಇ.

**ಕಾರ್ಯನಿರ್ವಾಹಕ ಸಂಪಾದಕರು**

**ವಂದಿತಾ ಶರ್ಮ** ರಾಜ್ಯಯೋಜನಾ ನಿರ್ದೇಶಕರು, ಸ.ಶಿ.ಅ.

**ಎ.ಕೆ.ಮೋನಪ್ಪ,** ಅಪರ ಆಯುಕ್ತರು, ಧಾರವಾಡ.

**ಜಿ.ಎಲ್.ಚಂದ್ರಶೇಖರಯ್ಯ,** ಅಪರ ಆಯುಕ್ತರು, ಗುಲ್ಬರ್ಗಾ.

**ಸದಸ್ಯರು**

**ಡಿ.ಎಸ್.ರಾಜಣ್ಣ,** ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾಮಂಡಳಿ

**ಟಿ. ಎಂ. ಕುಮಾರ್,** ನಿರ್ದೇಶಕರು ಪ್ರಾಥಮಿಕ ಶಿಕ್ಷಣ

**ಚಿದ್ರೆ ಶಂಕರಯ್ಯಸ್ವಾಮಿ,** ನಿರ್ದೇಶಕರು, ಪ್ರೌಢಶಿಕ್ಷಣ

**ಮೀರ್ ಒಬೇದುಲ್ಲಾ,** ನಿರ್ದೇಶಕರು, ಈಶಾನ್ಯವಲಯ

**ಹಫೀಜುಲ್ಲಾ ಷರೀಫ್,** ನಿರ್ದೇಶಕರು, ಅಪರ ಆಯುಕ್ತರ ಕಚೇರಿ ಧಾರವಾಡ

**ಉಷಾದೇವಿ,** ನಿರ್ದೇಶಕರು, ಇತರೆ ಪರೀಕ್ಷೆಗಳು

**ಈಶ್ವರಭಟ್,** ನಿರ್ದೇಶಕರು, ಸ.ಶಿ.ಅ.

**ಎಸ್.ನಜಾಘುಲ್ಲಾ ಬೇಗ್,** ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.

**ಎ.ಎ.ಕುಟಿನೋ,** ನಿರ್ದೇಶಕರು, ಅಲ್ಪ ಸಂಖ್ಯಾತ ಭಾಷೆಗಳು.

**ಜಿ. ನಂಜುಂಡೇಶ್ವರ,** ಸಹನಿರ್ದೇಶಕರು, ಆಡಳಿತ, ಸಾ.ಶಿ.ಇ.

**ಎನ್. ವಿ. ಸುಬ್ಬಣ್ಣ,** ಮುಖ್ಯಲೆಕ್ಕಾಧಿಕಾರಿ, ಸ.ಶಿ.ಅ.

**ನಿತ್ಯಾನಂದಾರಾಧ್ಯ,** ಸ.ಕಾ.ಅ., ಸ.ಶಿ.ಅ.

**ಅಧ್ಯಕ್ಷರು,** ಕ.ರಾ.ಪ್ರಾ.ಶಾ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಸ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಮಾ.ಶಿ.ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಮು.: ಮ.ಪೂ.ಕಾ.ಪ್ರಾಂ. ಸಂಘ

**ಸಲಹಾ ಸಮಿತಿ**

**ಡಾ|| ಎಸ್. ಶ್ರೀಕಂಠಸ್ವಾಮಿ,** ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು.

**ಡಾ|| ನಿರಂಜನಾರಾಧ್ಯ,** ಸಂಶೋಧನಾಧಿಕಾರಿಗಳು, ಎನ್.ಎಲ್.ಎಸ್.ಐ.ಯು.,ಬೆಂಗಳೂರು

**ಪ್ರೊ|| ಗಣೇಶ್‌ಭಟ್,** ಎಂ.ಇ.ಎಸ್. ಮಹಾವಿದ್ಯಾಲಯ, ಬೆಂಗಳೂರು.

**ಡಾ|| ಸಿ. ಜಿ. ವೆಂಕಟೇಶ್‌ಮೂರ್ತಿ,** ಆರ್.ಐ.ಇ.,ಮೈಸೂರು

**ಪ್ರೊ|| ಎ.ವಿ. ಗೋವಿಂದರಾವ್,** (ನಿವೃತ್ತ ಪ್ರಾಂಶುಪಾಲರು), ಮೈಸೂರು.

**ಹೆಚ್. ಕುಮಾರಸ್ವಾಮಿ,** ಡಯಟ್, ಮಂಗಳೂರು.

**ಸಹಸಂಪಾದಕರು**

**ಕೆ.ಜಿ. ಕಲಾವತಿ**

**ಕಲಾವಿದ : ಜಿ.ಕೆ. ಶಿವಣ್ಣ**

**ತಾಂತ್ರಿಕ ಬಳಗ : ಸಿ. ಬೋರಯ್ಯ, ಸರಸ್ವತಿ**

**ಆತ್ಮೀಯ ಶಿಕ್ಷಕರೇ,**

ನಿಮ್ಮ ಶಾಲೆಗಳಲ್ಲಿ, ಗ್ರಾಮಗಳಲ್ಲಿ 61ನೇ ಸ್ವಾತಂತ್ರ್ಯೋತ್ಸವವನ್ನು ಮಕ್ಕಳೊಂದಿಗೆ ಆಚರಿಸಿದ್ದೀರಿ. ಈ ಸ್ವಾತಂತ್ರ್ಯದ ಬೆಲೆಯನ್ನು ಮಕ್ಕಳಿಗೆ ಅರ್ಥ ಮಾಡಿಸುವಲ್ಲಿ ನಿಮ್ಮ ಪ್ರಯತ್ನ ಮಾಡುವಿರಲ್ಲವೆ? ಕೇವಲ 60 ವರ್ಷಗಳ ಹಿಂದೆ ಪರಕೀಯರ ಆಡಳಿತದಲ್ಲಿದ್ದ ಕಹಿನೆನಪನ್ನು ಇಂದಿಗೂ ಕಣ್ಣಿಗೆ ಕಟ್ಟಿದಂತೆ ಹೇಳುವ ಹಿರಿಯರಿದ್ದಾರೆ. ಅವರನ್ನು ಗುರುತಿಸಿ, ಶಾಲೆಯಲ್ಲಿ ಮಕ್ಕಳಿಗೆ ಪರಿಚಯಿಸಿ, ಸ್ವಾತಂತ್ರ್ಯ ಗೀತೆಗಳನ್ನು ಮಕ್ಕಳಿಗೆ ಹೇಳಿ ಕೊಡಿ, ಹಾಡಲು ಉತ್ತೇಜಿಸಿ. ಅಂದಿನ "ಕದಂ ಕದಂ ಬಡಾಯೆ ಜಾ...." "ವಂದೇ ಮಾತರಂ...." ಮುಂತಾದ ಗೀತೆಗಳು ನೀಡುತ್ತಿದ್ದ ಸ್ಫೂರ್ತಿಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ತಪ್ಪು ಮಾಡುವುದು ಮಕ್ಕಳ ಸಹಜಗುಣ. ಇದನ್ನು ತಿದ್ದಬೇಕೇ ಹೊರತು, ಶಿಕ್ಷಿಸುವ ಹಕ್ಕು ಪೋಷಕರಿಗಾಗಲೀ, ಶಿಕ್ಷಕರಿಗಾಗಲೀ ಇಲ್ಲ. ಇದು ಗೊತ್ತಿದ್ದೂ ಅನೇಕ ಶಿಕ್ಷಕರು ಅಮಾನವೀಯವಾಗಿ ಮಕ್ಕಳನ್ನು ಶಿಕ್ಷಿಸುತ್ತಿರುವುದು ಘಟಿಸುತ್ತಲೇ ಇದೆ. ಈ ಶಿಕ್ಷೆ ವಾಚ್ಯ ಇರಬಹುದು. ದೈಹಿಕ ಇರಬಹುದು ಅಥವಾ ಮಾನಸಿಕ ಇರಬಹುದು. ಇಂತಹ ಶಿಕ್ಷೆಗಳಿಂದ ಮಗುವನ್ನು ತಿದ್ದಬಹುದು ಎಂದು ಭಾವಿಸಿದ್ದರೆ, ನಿಜಕ್ಕೂ ಅವರು ಮೂರ್ಖರೇ. ಶಿಕ್ಷೆಗಳು ಯಾವಾಗಲೂ ಧನಾತ್ಮಕ ಪರಿಣಾಮವನ್ನೇ ನೀಡುವುದಿಲ್ಲ. ಶಿಕ್ಷಕರ ದುರ್ಬಲ ಮನಸ್ಸಿಗೆ, ಪಾಶವೀಯ ಪ್ರವೃತ್ತಿಗೆ, ನಿರ್ದಯ ಮನೋವೃತ್ತಿಗೆ, ಅಜ್ಞಾನಕ್ಕೆ ಅವರು ಶಿಕ್ಷಿಸುವ ರೀತಿಯೇ ಕನ್ನಡಿ, ಕೆಲವು ಬಾರಿ ಮಕ್ಕಳು ಮಾಡಿದ ತಪ್ಪಿಗೂ, ಅವರಿಗೆ ಕೊಡುವ ಶಿಕ್ಷೆಗೂ ಸಂಬಂಧವೇ ಇರುವುದಿಲ್ಲ. ಯಾವುದೋ ಮಾನಸಿಕ ಒತ್ತಡದಿಂದ ಅವರಿಗೆ ಬಿಡುಗಡೆ ಬೇಕಾದಾಗ ಮುಗ್ಧ ಮಕ್ಕಳನ್ನು ಶಿಕ್ಷಿಸುವ ಶಿಕ್ಷಕರೂ ಇದ್ದಾರೆ. ಕೆಲವು ಬಾರಿ ಇದು ಅಭ್ಯಾಸವೂ ಹೌದು. ಮೇಷ್ಟ್ರು ಎಂದರೆ ಹೊಡೆಯದಿದ್ದರೆ ಬೆಲೆ ಇಲ್ಲ ಎಂಬ ತಪ್ಪು ಕಲ್ಪನೆ !


ಇತ್ತೀಚಿನ ದಿನಗಳಲ್ಲಿ ನಡೆದ ಇಂತಹ ಅಮಾನವೀಯ ಘಟನೆಗಳು ನಮ್ಮನ್ನು ದಿಗ್ಭ್ರಾಂತರನ್ನಾಗಿ ಮಾಡಿದೆ. ಇಂದಿನ ನಾಗರೀಕ ದಿನಗಳಲ್ಲೂ ನಡೆದ ಈ ಕರಾಳ ಕೃತ್ಯಗಳು ನಾವೆಲ್ಲ ತಲೆತಗ್ಗಿಸುವಂತೆ ಮಾಡಿವೆ. ಮಕ್ಕಳ ಹಕ್ಕಿನ ಪ್ರಶ್ನೆ ಬಂದಾಗ, ಇಂತಹ ಶಿಕ್ಷೆಗಳಿಗೆ ನ್ಯಾಯಾಲಯ ಪ್ರತಿ ಶಿಕ್ಷೆ ನೀಡಿದ ಅನೇಕ ಸಂದರ್ಭಗಳಿವೆ. ಶಿಕ್ಷಕರನ್ನು ಪೂಜ್ಯರು, ಗೌರವಾನ್ವಿತರು ಎಂದು ಪೂಜಿಸುವ ಸಮಾಜದಲ್ಲಿ ಇಂತಹ ಒಂದು ಕರಾಳ ಮುಖವೂ ಇದೆ ಎಂಬುದು ವಾಸ್ತವವೂ ಆಗಿದೆ. ಬೋಧನೆಯಲ್ಲಿ ವೈಜ್ಞಾನಿಕ ಕ್ರಮವನ್ನು ಅನುಸರಿಸುವ ಸಲುವಾಗಿ ಶಿಕ್ಷಕರಿಗೆ ನೀಡುವ ತರಬೇತಿಯಲ್ಲಿ ಮಕ್ಕಳನ್ನು ಶಿಕ್ಷಿಸಬೇಕೆಂದು ಶಿಕ್ಷಣ ತಜ್ಞರಾಗಲೀ, ಇಲಾಖೆಯಾಗಲೀ ಎಲ್ಲಿಯೂ ಹೇಳಿಲ್ಲ. ಶಿಕ್ಷಕರ ಅಪರಾಧಿ ಪ್ರವೃತ್ತಿ ಸಾಬೀತಾದಲ್ಲಿ, ಕಠಿಣ ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂಬ ಎಚ್ಚರಿಕೆ ಎಲ್ಲರಿಗೂ ಇರಲಿ.

ಪ್ರತಿರೋಧಿಸುವ ಶಕ್ತಿಯಾಗಲೀ, ಮನಸ್ಸಾಗಲೀ, ಸಂಪ್ರದಾಯವಾಗಲೀ ಇಲ್ಲದಿರುವುದನ್ನೇ ಅಸ್ತ್ರವಾಗಿಸಿಕೊಂಡು ನಮ್ಮ ಸಮಾಜ ವಿಕೃತ ಸಂಸ್ಕೃತಿಯನ್ನು ಬೆಳಸಿಕೊಂಡು ಬರುತ್ತಿದೆ. ಅದು ಹೆಣ್ಣುಭ್ರೂಣಗಳ ಹತ್ಯೆಯಾಗಿರಬಹುದು, ಲೈಂಗಿಕ ದೌರ್ಜನ್ಯ ಆಗಬಹುದು, ಸ್ತ್ರೀ ಶೋಷಣೆ ಆಗಬಹುದು ಅಥವಾ ಮುಗ್ಧ ಕಂದಮ್ಮಗಳ ಮೇಲೆ ಪ್ರಹಾರ ಆಗಬಹುದು. ಇದನ್ನು ನ್ಯಾಯಾಲಯ ಶಿಕ್ಷಿಸುತ್ತದೆ, ಸಮಾಜ ಧಿಕ್ಕರಿಸುತ್ತದೆ, ಇಲಾಖೆ ದಂಡಿಸುತ್ತದೆ.

ಆದ್ದರಿಂದ, ಶಿಕ್ಷಕರೇ, ನಿಮ್ಮ ಸ್ವಾತಂತ್ರ್ಯದ ದುರುಪಯೋಗ ಮಾಡಿಕೊಳ್ಳುವ ಮುನ್ನ ಸಾವಿರಸಲ ನೆನಪಿಸಿಕೊಳ್ಳಿ, ಮಕ್ಕಳನ್ನು ಶಿಕ್ಷಿಸುವ ಹಕ್ಕು ನಿಮಗಿಲ್ಲ, ವಿವಿಧ ಹಿನ್ನೆಲೆಯಿಂದ ಬಂದಿರುವ ಮಕ್ಕಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗಬೇಡಿ. ಮಕ್ಕಳನ್ನು ಪ್ರೀತಿಯಿಂದ ತಿದ್ದಿ. ತಾಯಿಯಂತೆ ಅಕ್ಕರೆಯಿಂದ ನೋಡಿ. ನಿಮ್ಮ ಒಳ್ಳೆಯ ಮಾತುಗಳು, ಸ್ನೇಹಸಿಂಚನದಿಂದ ಮಕ್ಕಳ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡಿ. ನಿಮ್ಮ ಪ್ರಯತ್ನದಲ್ಲಿ ಖಂಡಿತ ಯಶಸ್ಸು ನಿಮ್ಮದಾಗುತ್ತದೆ. ಆದರ್ಶಶಿಕ್ಷಕರನ್ನು ಮಕ್ಕಳು ಜೀವಮಾನಪರ್ಯಂತ ತಮ್ಮ ಹೃದಯ ಮಂದಿರದಲ್ಲಿಟ್ಟು ಆರಾಧಿಸುತ್ತಾರೆ. ನೀವುಗಳು ಅಂತಹ ಆರಾಧ್ಯಮೂರ್ತಿಗಳಾಗಬೇಕೆಂಬುದೇ ನನ್ನ ಹಾರೈಕೆ.

ಆಯುಕ್ತರು

# ಸ್ವಾಗತ – ವಿದಾಯ




## ಶ್ರೀ ಎಲ್. ಕೆ. ಅತೀಕ್ ಭಾ.ಆ.ಸೇ.

ಇದುವರೆಗೆ ಸರ್ವಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರಾಗಿದ್ದ ಮಾನ್ಯ ಶ್ರೀ ಎಲ್. ಕೆ. ಅತೀಕ್ ಭಾ.ಆ.ಸೇ.ರವರು ದೆಹಲಿಯ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ನಿರ್ದೇಶಕರಾಗಿ ವರ್ಗಾವಣೆಯಾದ ಪ್ರಯುಕ್ತ ದಿನಾಂಕ 10.8.07 ರಂದು ಹುದ್ದೆಯಿಂದ ಬಿಡುಗಡೆ ಹೊಂದಿರುತ್ತಾರೆ. ಇದುವರೆಗೆ ಅವರು ಸಲ್ಲಿಸಿದ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತಾ ಶಿಕ್ಷಣ ವಾರ್ತೆ ಅವರಿಗೆ ಶುಭವಿದಾಯವನ್ನು ಕೋರುತ್ತದೆ.

## ಶ್ರೀಮತಿ ವಂದಿತಾಶರ್ಮ ಭಾ.ಆ.ಸೇ.



ದೂರಶಿಕ್ಷಣ ಅಭಿವೃದ್ಧಿ ಕೇಂದ್ರ (EDC)ದ ದೇಶೀಯ ಯೋಜನೆಯ ನಿರ್ದೇಶಕರಾಗಿದ್ದ ಶ್ರೀಮತಿ ವಂದಿತಾಶರ್ಮರವರು ವರ್ಗಾವಣೆ ಹೊಂದಿ, ಸರ್ವಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರಾಗಿ ದಿನಾಂಕ 20.8.07ರಂದು ಕರ್ತವ್ಯಕ್ಕೆ ವರದಿಮಾಡಿಕೊಂಡಿರುತ್ತಾರೆ. ಶಿಕ್ಷಣ ಇಲಾಖೆಯ ವಿವಿಧ ಯೋಜನಾ ಕಾರ್ಯಕ್ರಮಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಶ್ರೀಮತಿ ವಂದಿತಾಶರ್ಮರವರನ್ನು ಶಿಕ್ಷಣವಾರ್ತೆ ಆತ್ಮೀಯವಾಗಿ ಬರಮಾಡಿಕೊಳ್ಳುತ್ತದೆ. ಹಾಗೂ ಅವರಿಗೆ ನೂತನ ಹುದ್ದೆಯಲ್ಲಿ ಸರ್ವ ಯಶಸ್ಸು ಹಾರೈಸುತ್ತದೆ.




## ಓದಿನ ಮನೆ

*** ಗುಬ್ಬಚ್ಚಿ ಗೂಡು**
ಪ್ರಕಾಶಕರು : ಕೋಮಾರಮನೆ ಪ್ರಕಾಶನ,
ಬೀಗಾರ, ಅಂಚೆ ವಜ್ರಳ್ಳಿ,
ತಾ. ಯಲ್ಲಾಪುರ (ಉ.ಕ)

*** ಚಿಂವ್ ಚಿಂವ್**
ಪ್ರಕಾಶಕರು :ರಾಘವೇಂದ್ರ ಪ್ರಕಾಶನ
ಅಂಬಾರಕೊಡ್ಲ,
ತಾ.ಅಂಕೋಲ (ಉ.ಕ.)



**ಈ ಎರಡು ಪುಸ್ತಕಗಳ ಲೇಖಕರು – ತಮ್ಮಣ್ಣ ಬೀಗಾರ, ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಹಲಗೇರಿ, ಸಿದ್ಧಪುರ (ಉ.ಕ)ಜಿಲ್ಲೆ**

ಮಕ್ಕಳಿಗಾಗಿ ಬರೆದ ಈ ಕವನ ಸಂಕಲನಗಳಲ್ಲಿ ಪ್ರಾಸಬದ್ಧ ಕವಿತೆಗಳು, ಕಥನ ಗೀತೆಗಳು ಮೈದುಂಬಿ ಮೂಡಿದೆ. ಈ ಗೀತೆಗಳನ್ನು ಅಭಿನಯ ಗೀತೆಗಳಾಗಿ ಶಾಲಾ ವೇದಿಕೆಯ ಮೇಲೆ ಸೂಕ್ತವಾಗಿ ಬಳಸಬಹುದಾಗಿದೆ.




## ಯೋಗಾಸನಗಳು

ಸಿ.ರಾಮಸ್ವಾಮಿ, ಎಂ.ಎ.ಬಿ.ಪಿ.ಎಡ್. ಯೋಗನಿರ್ದೇಶಕರು
ಶ್ರೀ ವಾಣಿಬಾಲಕಿಯರ ಪ್ರೌಢಶಾಲೆ, ರಾಜಾಜಿನಗರ, ಬೆಂಗಳೂರು–10
ಮೊ: 9448245699

### ಮಯೂರಾಸನ :

ಸ್ಥಿತಿ : ವಜ್ರಾಸನದಲ್ಲಿ ಕೂರಬೇಕು

1. ಎರಡೂ ಮಂಡಿಗಳ ಮೇಲೆ ನಿಂತು ನಿಧಾನವಾಗಿ ಮುಂದೆ ಬಾಗಿ ಎರಡೂ ಹಸ್ತಗಳನ್ನು ಜೋಡಿಸಿ ಮಂಡಿಯ ಮುಂಭಾಗದಲ್ಲಿ ನೆಲಕ್ಕಿಡಬೇಕು.



ಬೆರಳುಗಳು ಮಂಡಿಯ ದಿಕ್ಕಿನಲ್ಲಿರಬೇಕು. ಮೊಳಕೈಗಳು ನೇರವಾಗಿದ್ದು ಮುಂದೆ ನೋಡಬೇಕು. 2. ರೇಚಕದೊಡನೆ ಎರಡೂ ಮೊಳಕೈಗಳನ್ನು ಮಡಿಸುತ್ತ ಹೊಟ್ಟೆಯನ್ನು ಸಡಿಲಗೊಳಿಸಿ ಬೆನ್ನನ್ನು ಬಾಗಿಸಿ ಎರಡೂ ಮೊಳಕೈಗಳನ್ನು ಜೋಡಿಸಿ ಹೊಟ್ಟೆಗೆ ವತ್ತಿಡಬೇಕು. 3. ಪೂರಕದೊಡನೆ ದೇಹದ ಭಾರವನ್ನು ಮೊಳಕೈಗಳ ಮೇಲೆ ಹೊರಿಸುತ್ತ ಎರಡೂ ಮಂಡಿಗಳನ್ನು ನೆಲದಿಂದ ಮೇಲೆತ್ತಿ ಕಾಲುಗಳನ್ನು ನೇರಗೊಳಿಸಬೇಕು. ತುದಿಗಾಲು ಮಾತ್ರ ನೆಲದ ಮೇಲಿರಲಿ ಮುಂದೆ ನೋಡುತ್ತಿರಬೇಕು. ಮಿತವಾದ ಉಸಿರಾಟವನ್ನು ಹೊಂದಿರಬೇಕು. 4. ಪೂರಕದೊಡನೆ ಹೊಟ್ಟೆಯನ್ನು ಬಿಗಿಗೊಳಿಸಿ ದೇಹದ ಸಂಪೂರ್ಣ ಭಾರವನ್ನು ಎರಡೂ ಮೊಳಕೈಗಳ ಮೇಲೆ ಹೊರಿಸುತ್ತ ಕೈ ಬೆರಳುಗಳನ್ನು ಬಿಗಿಗೊಳಿಸಿ ನೆಲಕ್ಕೆ ಒತ್ತುತ್ತ ತುದಿಗಾಲನ್ನು ನೆಲದಿಂದ ನಿಧಾನವಾಗಿ ಮೇಲೆತ್ತಬೇಕು. ದೇಹ ಭೂಮಿಗೆ ಸಮಾನಾಂತರವಾಗಿರಬೇಕು.

**ಪರಿಣಾಮ** : ವಿಶೇಷವಾಗಿ ಹೊಟ್ಟೆಯಲ್ಲಡಗಿರುವ ಕರುಳು, ಕಿಡ್ನಿ, ಲಿವರ್, ಜಠರಗಳನ್ನು ಚೆನ್ನಾಗಿ ಪಳಗಿಸಿ ಇವುಗಳಲ್ಲಿರುವ ರೋಗ ನೋವು ತೊಂದರೆಗಳನ್ನು ಹೋಗಲಾಡಿಸಿ, ಆರೋಗ್ಯ ಸ್ಥಿತಿಯಲ್ಲಿಡಲು ಸಹಕಾರಿಯಾಗಿದೆ. ರಕ್ತದ ಒತ್ತಡವು ತಲೆಯ ಕಡೆ ಹರಿಯುವುದರಿಂದ ಮುಖದಲ್ಲಿರುವ ಸೂಕ್ಷ್ಮಾಂಗಗಳಿಗೆ ಆರೋಗ್ಯವನ್ನು ಒದಗಿಸುತ್ತದೆ. ಸಕ್ಕರೆ ಖಾಯಿಲೆ ತಹಬಂದಿಗೆ ಬರುತದೆ.

### ಬಕಾಸನ :

ಸ್ಥಿತಿ : ಸಮಸ್ಥಿತಿಯಲ್ಲಿ ನಿಲ್ಲಬೇಕು. 1) ತುದಿಗಾಲ ಮೇಲೆ ಕೂರಬೇಕು, ಮಂಡಿಗಳನ್ನು ತೆರೆದಿಡಬೇಕು. 2) ಮಿತವಾದ ಉಸಿರಾಟದೊಂದಿಗೆ ಎರಡೂ ತೋಳುಗಳನ್ನು ಮಂಡಿಗಳ ಮಧ್ಯದಿಂದ ತೆಗೆದುಕೊಂಡು ಎರಡೂ ಮೊಳಕೈಗಳು ಕ್ರಮವಾಗಿ ಮಂಡಿಗಳ ಕೆಳಗೆ ಬರುವಂತೆ ಅಳವಡಿಸಬೇಕು. 3) ರೇಚಕದೊಡನೆ ಎರಡು ಹಸ್ತಗಳನ್ನು ಮಂಡಿಗಳ ನೇರ ದಲ್ಲಿ ನೆಲಕ್ಕೆ ಒತ್ತಿಡಬೇಕು. ಬೆರಳುಗಳನ್ನು ಅಗಲಿಸಿಡಬೇಕು. 4) ಪೂರಕದೊಡನೆ ದೇಹದ ಭಾರವನ್ನು ಮುಂದೆ ಬಾಗಿಸುತ್ತ ಎರಡೂ ಕೈಗಳಿಗೆ ಹಂಚಬೇಕು. ಪಾದಗಳನ್ನು ಜೋಡಿಸಬೇಕು ಮುಂದೆ ನೋಡಬೇಕು ಮಿತವಾದ ಉಸಿರಾಟದೊಂದಿಗೆ ದೇಹದ ಭಾರವನ್ನು ಎರಡು ಕೈಗಳಮೇಲೆ ಹೊರಿಸಬೇಕು ನಂತರ ಕ್ರಮ ವಾಗಿ ಕಾಲುಗಳನ್ನು ಕೆಳಗಿಳಿಸುತ್ತ ನಿಧಾನವಾಗಿ ಹಿಂತಿರುಗಿ ಸ್ಥಿತಿಗೆ ಬರಬೇಕು.




**ಪರಿಣಾಮ :** ಕೈ ಬೆರಳು, ಹಸ್ತ, ಮೊಳಕೈ, ತೋಳು, ಭುಜಗಳಿಗೆ ಹೆಚ್ಚಿನ ಶಕ್ತಿಯನ್ನು ಒದಗಿಸುತ್ತದೆ. ಮನಸ್ಸಿನ ಏಕಾಗ್ರತೆಯನ್ನುಂಟು ಮಾಡುತ್ತದೆ. ಹೃದಯಕ್ಕೆ ಧೈರ್ಯವನ್ನು ತುಂಬಿ ಹೃದಯದ ಬಡಿತವು ಸಮಪ್ರಮಾಣದಲ್ಲಿರುವಂತೆ ಸಹಾಯ ಮಾಡುತ್ತದೆ.

ವಿ.ಸೂ.: ಈ ಆಸನಗಳ ಅಭ್ಯಾಸವು ಸೂಕ್ಷ್ಮವಾಗಿರಬೇಕು. ನಿಧಾನವಾಗಿ ಪ್ರಯತ್ನಿಸಬೇಕು ಮಿತವಾದ ಉಸಿರಾಟವಿರಬೇಕು, ಮುಖದ ಮುಂಭಾಗದಲ್ಲಿ ಮೃದುವಾದ ವಸ್ತ್ರವಿದ್ದರೆ ಒಳ್ಳೆಯದು.

### ಟಿಟ್ಟಿಭಾಸನ

ಸ್ಥಿತಿ : ಸಮಸ್ಥಿತಿಯಲ್ಲಿ ನಿಲ್ಲಬೇಕು. 1)ಪೂರಕದೊಡನೆ ಎರಡು ಕಾಲುಗಳನ್ನು ಒಂದು ಅಡಿಯಷ್ಟು ಅಗಲವಿಟ್ಟು ಎರಡೂ ಕೈಗಳನ್ನು ಎದೆಯ ಮುಂದೆ ಚಾಚಬೇಕು. 2) ರೇಚಕದೊಡನೆ ಸಂಪೂರ್ಣ ಮುಂದೆ ಬಾಗಿ ಎರಡೂ ಕಾಲುಗಳ ಮಧ್ಯದಿಂದ ಎರಡೂ ಹಸ್ತಗಳನ್ನು ಕ್ರಮವಾಗಿ ತೊಡೆಗಳ ಹಿಂದೆ ಅಳವಡಿಸಿ ಬೆರಳುಗಳು ಹಿಮ್ಮಡಿಗೆ ತಾಗುವಂತೆ ಹಸ್ತವನ್ನು ನೆಲಕ್ಕೆ ಒತ್ತಿಡಬೇಕು. 3) ಪೂರಕದೊಡನೆ ಎರಡೂ ಮೊಳಕಾಲುಗಳನ್ನು ಮಡಿಸುತ್ತ ಕ್ರಮವಾಗಿ ಎರಡು ಭುಜದ ಮೇಲೆ ದೇಹದ ಭಾರವನ್ನು ಒರಗಿಸಬೇಕು. ಕೈಗಳೆರಡನ್ನೂ ಒಲಗೊಳಿಸಿ ದೇಹದ ಭಾರವನ್ನು ಹೊರುವಂತೆ ಸ್ಥಿರಗೊಳಿಸಬೇಕು. 4) ಮಿತವಾದ ಉಸಿರಾಟದೊಂದಿಗೆ ಉಪಾಯವಾಗಿ ಎರಡೂ ಪಾದಗಳನ್ನು ನೆಲದಿಂದ ಮೇಲಕ್ಕೆತ್ತುತ್ತ ಮಂಡಿಗಳನ್ನು ನೇರಗೊಳಿಸಲು ಪ್ರಯತ್ನಿಸಿ ಇದು ಕಠಿಣವಾದರೆ ಪುನರಾವರ್ತಿಸಿ, ನಂತರ ಕೆಲಕ್ಷಣಗಳು ನೆಲಸಿದ್ದು ಕ್ರಮವಾಗಿ ಹಿಂತಿರುಗಿ ಸ್ಥಿತಿಗೆ ಮರಳಬೇಕು.



**ಪರಿಣಾಮ** : ತೋಳುಗಳಿಗೆ ಹೆಚ್ಚು ಶಕಿಯನ್ನು ಒದಗಿಸುತದೆ. ಹೊಟ್ಟೆಯನ್ನು ಕುಗ್ಗಿಸುತದೆ. ಒಳ ತೊಡೆಯ ನೋವನ್ನು ನಿವಾರಿಸುತ್ತದೆ. ಮನಸ್ಸಿಗೆ ಧೈರ್ಯವನ್ನು ನೀಡುತ್ತದೆ. ಏಕಾಗ್ರತೆಯನ್ನು ಸ್ಥಿರಪಡಿಸುತ್ತದೆ. ಕಿಬ್ಬೊಟ್ಟೆ ಕರಗಿ ಸಿಂಹಕಟಿ, ಬಯಸುವವರಿಗೆ ಸಹಕಾರಿಯಾಗುತ್ತದೆ. ಸದಾಕಾಲ ದೇಹದ ಆರೋಗ್ಯ ಸಮಸ್ಥಿತಿಯಲ್ಲಿರುತ್ತದೆ.

**ಅಷ್ಟಾಂಗಯೋಗದ ಯಮದಲ್ಲಿರುವುವು ಅಹಿಂಸೆ, ಸತ್ಯ, ಅಸ್ತೇಯ ಅಪರಿಗ್ರಹ ಹಾಗೂ ಬ್ರಹ್ಮಚರ್ಯ ಸೂತ್ರಗಳು.**

## ಬ್ರಹ್ಮಚರ್ಯ

ಯಮದ ಐದನೆಯ ಅಂಗ ಬ್ರಹ್ಮಚರ್ಯ : ಹಿಂದೂ ಧರ್ಮದಲ್ಲಿ ಜೀವನವನ್ನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ತ, ಸನ್ಯಾಸ ಎಂದು ನಾಲ್ಕು ಆಶ್ರಮಗಳನ್ನಾಗಿ ವಿಭಾಗಿಸಿದೆ. ಬಾಲ್ಯದಲ್ಲಿ ಬ್ರಹ್ಮಚಾರಿಯಾಗಿ ವಿದ್ಯಾಭ್ಯಾಸವನ್ನು ಕಲಿಯಬೇಕು. ಮನಸ್ಸು ಮತ್ತು ದೇಹದ ಮೇಲೆ ಹಿಡಿತವನ್ನು ಸಾಧಿಸಿ ಸಂಯಮದಿಂದ ವಿದ್ಯಾಭ್ಯಾಸವನ್ನು ಮಾಡಬೇಕು. ಮನಸ್ಸು ಬ್ರಹ್ಮದಲ್ಲಿ ಅಂದರೆ ವಿದ್ಯೆಯಲ್ಲಿ ನೆಟ್ಟಿರಬೇಕು ಎಂದು ಅರ್ಥ. ಶಾಲಾ ವಿದ್ಯಾರ್ಥಿಗಳು ಪಾಲಿಸಬೇಕಾದದ್ದು ಇಂದ್ರಿಯಗಳ ಬ್ರಹ್ಮಚರ್ಯ ತನ್ನ ಇಂದ್ರಿಯಗಳನ್ನು ಸ್ವೇಚ್ಛಾಚಾರಕ್ಕೆ ಬಿಡದೆ ಶುದ್ಧ ಮನಸ್ಸಿನಿಂದ ತನ್ನ ಹಿಡಿತದಲ್ಲಿಟ್ಟುಕೊಂಡು ಇಂದ್ರಿಯಗಳ ಸದ್ಬಳಕೆ ಮಾಡಿಕೊಂಡು ಗುರುವಿನ ಮೂಲಕ ವಿದ್ಯಾಭ್ಯಾಸಕ್ಕೆ ಸದುಪಯೋಗ ಪಡೆಯುವುದಾಗಿದೆ. ಒಳ್ಳೆಯದನ್ನು ನೋಡಬೇಕು, ಒಳ್ಳೆಯದನ್ನು ಕೇಳಬೇಕು, ಒಳ್ಳೆಯದನ್ನು ಮಾತನಾಡಬೇಕು, ಓದಬೇಕು, ಶುದ್ಧವಾದುದ್ದನ್ನು ತಿನ್ನಬೇಕು, ಹವಾಗುಣಕ್ಕನುಗುಣವಾಗಿ ಶುದ್ಧ ಉಡುಪನ್ನು ಧರಿಸಬೇಕು ಚರ್ಮವನ್ನು ಶುಚಿಯಾಗಿಡಲು ಸ್ನಾನಾದಿಗಳಿಂದ ಶುದ್ಧವಾಗಿಡಬೇಕು. ಇವು ಬ್ರಹ್ಮಚರ್ಯಕ್ಕೆ ಸಹಾಯಕವಾಗುತ್ತವೆ.

ಗಾಂಧೀಜಿ ನುಡಿ : ದೇವರು, ಪೂರ್ಣಸ್ವಾತಂತ್ರ್ಯಕ್ಕೆ ಸಂಪೂರ್ಣ ಸಮರ್ಪಣೆಯನ್ನಷ್ಟೇ ಅಪೇಕ್ಷಿಸುತ್ತಾನೆ.



# "ಮಕ್ಕಳು ಕೇವಲ ವಿದ್ಯಾವಂತರಾಗದೆ – ಗುಣವಂತರಾಗಬೇಕು"

ಮಂಡ್ಯ ಜಿಲ್ಲೆಯ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿರುವ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯ ಹಾಗೂ ಇತರೆ ಸನಿವಾಸ ಶಾಲಾ/ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ 2007–08ನೇ ಸಾಲಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವನ್ನು ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿತ್ತು. ಶ್ರೀ ಅನ್ನಪೂರ್ಣೇಶ್ವರೀ ಭವನದಲ್ಲಿ ನಡೆದ ಈ ಕಾರ್ಯಕ್ರಮದ ಮೊದಲಿಗೆ ಶ್ರೀಮಠದ ವಟುಗಳಿಂದ ವೇದಘೋಷ, ಪ್ರಮೀಳಾದೇವಿ ಸಂಗಡಿಗರ ಪ್ರಾರ್ಥನೆ, ಪ್ರಾಚಾರ್ಯರಾದ ವಿದ್ವಾನ್ ಸಿ. ನಂಜುಂಡಯ್ಯರವರು ಅತಿಥಿಗಳ ಪರಿಚಯ ಮಾಡಿ ಸ್ವಾಗತ ಭಾಷಣ ಮಾಡಿದರು.

ಈ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟನೆ ನೆರವೇರಿಸಿ ಮಾತನಾಡಿದ, ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಜಿ. ಕುಮಾರನಾಯಕರವರು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶ್ರೀಮಠದ ಸಾಧನೆ ಎಲ್ಲರ ಅಭಿವಂದನೆಗೆ ಪಾತ್ರವಾಗಿದೆ. ಮೂರು ಸಾವಿರ ಮಂದಿ ವಿದ್ಯಾರ್ಥಿಗಳಿಗೆ ಸಂಸ್ಕೃತ ವೇದಾಗಮ ಶಿಕ್ಷಣವನ್ನು ಉಚಿತವಾಗಿ ಕಲಿಸುತ್ತಿರುವುದು ಎಲ್ಲರೂ ಸಂಸ್ಕಾರವಂತರಾಗಲು ಕಾರಣವಾಗಿದೆ ಎಂದರು. ವೇದ–ವೇದಾಂತ–ಅಲಂಕಾರ ಶಾಸ್ತ್ರಗಳಲ್ಲಿ ವಿದ್ವತ್ಪದವಿ ಪಡೆದ 25 ಮಂದಿ ಯುವ ವಿದ್ವಾಂಸರನ್ನು ಪುರಸ್ಕಾರ ನೀಡಿ ಗೌರವಿಸಿದರು.

ಕರ್ಮವೀರ ಸಾಪ್ತಾಹಿಕದ ಸಂಪಾದಕರಾದ ಬಾಬುಕೃಷ್ಣಮೂರ್ತಿ ರವರು ಮಾತನಾಡಿ ಅನೇಕ ಸಂಸ್ಕೃತಿಗಳು ನಾಶವಾಗಿದ್ದರೂ ಕೂಡ ಧರ್ಮ, ಋಷಿ ಮೂಲವಾದ ಸಂಸ್ಕೃತಿ ಅಜರಾಮರವಾಗಿದೆ. ನಮ್ಮ ಸಂಸ್ಕೃತಿಯ ಮೂಲ ಆಕರವಾದ ಸಂಸ್ಕೃತ ಭಾಷೆಯನ್ನು ಎಲ್ಲರೂ ಇಲ್ಲಿ ಕಲಿಯುತ್ತಿರುವ ಬಗ್ಗೆ ಸಂತಸಪಟ್ಟರು.

ವಿಶೇಷ ಉಪನ್ಯಾಸ ನೀಡಿದ ಸುಪ್ರಸಿದ್ಧ ವಿದ್ವಾಂಸರಾದ ಡಾ॥ ರಾಮಚಂದ್ರಭಟ್ಟ ಕೋಟೆಮನೆರವರು ಮೆಕಾಲೆ ಶಿಕ್ಷಣ ಪದ್ಧತಿಯ ಬದಲಾವಣೆ ಅತ್ಯಗತ್ಯವಾಗಿದ್ದು ಇದರ ಪರಿಹಾರಕ್ಕಾಗಿ ಋಷಿ ಸಂಸ್ಕೃತಿ ಬೆಳೆಯಬೇಕು. ಇದಕ್ಕಾಗಿ ಸಂಸ್ಕೃತಾಧ್ಯಯನ ಮುಖ್ಯ ಎಂದರು.

ಗೌರಿಬಿದನೂರು ಮಾನ್ಯ ಶಾಸಕರಾದ ಶಿವಶಂಕರರೆಡ್ಡಿಯವರು ಮಾತನಾಡುತ್ತಾ ಸ್ವಾಮೀಜಿಯವರ ಅವಿರತ ಪರಿಶ್ರಮದಿಂದಾಗಿ ಶಿಕ್ಷಣ–ಆರೋಗ್ಯ–ಸಾಂಸ್ಕೃತಿಕ ರಂಗದಲ್ಲಿ ಕ್ರಾಂತಿ ನಡೆಯುತ್ತಿದೆ ಎಂದರು.

ಅಧ್ಯಕ್ಷತೆಯನ್ನುವಹಿಸಿದ್ದ ಮಂಡ್ಯ ಜಿಲ್ಲಾಧಿಕಾರಿ ಗಳಾದ ಎನ್. ಮಂಜುನಾಥ ಪ್ರಸಾದ್‌ರವರು ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿದರು. ಎಲ್ಲಾ ಆಹ್ವಾನಿತ ಗಣ್ಯವ್ಯಕ್ತಿಗಳಿಗೆ ಅತಿಥಿಗಳಿಗೆ ಶ್ರೀಗಳವರು ಶಾಲು ಹೊದಿಸಿ ಫಲತಾಂಬೂಲ ನೀಡಿ ಗೌರವಿಸಿದರು.

ಶ್ರೀಮಠದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮಿಗಳು, ಶ್ರೀನಿರ್ಮಲಾನಂದನಾಥ ಸ್ವಾಮಿಗಳು ಹಾಗೂ ಆಡಳಿತಾಧಿಕಾರಿಗಳಾದ ಸಿ. ಹನುಮೇಗೌಡ, ಎಂ.ಚಂದ್ರ ಶೇಖರಯ್ಯ, ರಾಜ್ಯ ಒಕ್ಕಲಿಗ ಸಂಘದ ನಿರ್ದೇಶಕರಾದ ಯಲಚವಾಡಿ ನಾಗರಾಜು, ಮಂಡ್ಯ ಶಿಕ್ಷಣಾಧಿಕಾರಿಗಳಾದ ಜಿ.ಪಿ. ಲಿಂಗರಾಜು, ನಾಗಮಂಗಲ ಬಿ.ಇ.ಓ.ಸೋಮ ಶೇಖರಯ್ಯ, ನಿವೃತ್ತ ಪ್ರಾಚಾರ್ಯರಾದ ಎನ್. ತಮ್ಮಣ್ಣಗೌಡ, ಜೆ.ಎನ್.ರಾಮಕೃಷ್ಣೇಗೌಡ, ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ಅತ್ಯಾಕರ್ಷಕ ಮನರಂಜನಾ ಕಾರ್ಯಕ್ರಮಗಳು ನಡೆದವು. ಅಧ್ಯಾಪಕರಾದ ಎಂ.ಎಸ್.ಜಗನ್ನಾಥ ವಂದಿಸಿದರು.

**– ಸಿ. ನಂಜುಂಡಯ್ಯ**
ಪ್ರಾಚಾರ್ಯರು



# ಪಂಜರದ ಹಕ್ಕಿ

– ಡಾ|| ವಿಜಯಾ ಜೋಷಿ
ಮಕ್ಕಳ ಮನಶ್ಶಾಸ್ತ್ರಜ್ಞೆ, ಸ್ಯಾನ್‌ಹೋಸೆ, ಕ್ಯಾಲಿಫೋರ್ನಿಯಾ.

ಕ್ಯಾಲ್‌ಟ್ರೈನ್ ಸ್ಯಾನ್‌ಫ್ರಾನ್ಸಿಸ್ಕೋ ಕಡೆ ಹೊರಟು ಕೆಲವೇ ನಿಮಿಷಗಳಾಗಿದ್ದವಷ್ಟೇ. ಅಷ್ಟರಲ್ಲಿ ರೈಲ್ವೇ ಸೆಕ್ಯುರಿಟಿ ಆಫೀಸರ್‌ಗಳು ಒಬ್ಬ ಹದಿಹರಯದ ಬಾಲಕನನ್ನು ಹಿಡಿದು, ಸ್ಟೇಷನ್ನಿನೊಳಗೆ ಕರೆತಂದರು. ಹುಡುಗ ಕೊಸರಾಡುತ್ತಿದ್ದ. ನನ್ನನ್ನು ಸಾಯಲು ಬಿಡಿ ಎಂದು ಕಿರಿಚುತ್ತಿದ್ದ. ಅಷ್ಟರಲ್ಲಿ ವೈದ್ಯರು ಬಂದರು. ಬಾಲಕನಿಗೆ ಅವರು ನೀಡಿದ ಇಂಜೆಕ್ಷನ್ ಪರಿಣಾಮವಾಗಿ ಬಾಲಕ ನಿದ್ರಿಸಿದ. ಆತನ ಜೇಬಿನಲ್ಲಿದ್ದ ಶಾಲಾ ಐ.ಡಿ.ಯಿಂದ ಅವನ ಹೆಸರು ವಿಕ್ಟರ್ ಎಂದೂ, ಸಾಂಟಾಕ್ಲಾರಾದ ಮೌಂಟನ್‌ವ್ಯೂ ಶಾಲೆಯ 8ನೇ ತರಗತಿಯ ವಿದ್ಯಾರ್ಥಿ ಎಂದೂ ತಿಳಿಯಿತು. ಕೆಲವೇ ಕ್ಷಣಗಳಲ್ಲಿ ಆತನ ತಂದೆ ಮೈಕೇಲ್ ಪಿಂಟೋ ಸ್ಟೇಷನ್ನಿಗೆ ಬಂದು, ತನ್ನ ಮಗನನ್ನು ಗುರುತಿಸಿದ. ಅದೃಷ್ಟವಶಾತ್ ರಕ್ಷಣಾದಳದವರು ಹುಡುಗನ ಚಹರೆಯನ್ನು ಗಮನಿಸುತ್ತಿದ್ದುದರಿಂದ, ಹುಡುಗ ಆತ್ಮಹತ್ಯೆಗೆ ಪ್ರಯತ್ನಿಸುವ ಮುನ್ನವೇ ಅವರ ಕೈಗೆ ಸಿಕ್ಕಿದ್ದ. ತಂದೆ ಅಶ್ರುಪೂರಿತ ಕಣ್ಣುಗಳಿಂದ ರಕ್ಷಣಾದಳದವರಿಗೆ ಧನ್ಯವಾದಗಳನ್ನು ಸಮರ್ಪಿಸಿ ಮಗನನ್ನು ಕರೆದೊಯ್ದ.

ವಿಕ್ಟರ್ ಮೌನವಾಗಿದ್ದ. ಅವನ ಪ್ರಯತ್ನ ಸಫಲವಾಗದುದಕ್ಕೆ ಅವಮಾನ, ಕೋಪಗಳಿಂದ ಜರ್ಜರಿತನಾದವನಂತೆ ಕಂಡುಬರುತ್ತಿದ್ದ. ಮೈಕೇಲ್‌ಪಿಂಟೋ ತಲೆ ಮೇಲೆ ಆಕಾಶವೇ ಕಳಚಿಬಿದ್ದಂತಾಗಿತ್ತು.

ಕೈತುಂಬ ಸಂಬಳ ಬರುವ ಇಂಜಿನಿಯರ್ ಹುದ್ದೆ, ಸಾಕಷ್ಟು ಸ್ಥಿತಿವಂತ ಸಹ. ಪತ್ನಿಯೂ ಯಾವುದೋ ಬಿಸಿನೆಸ್‌ನಲ್ಲಿ ಪಾರ್ಟ್‌ನರ್ ಆಗಿ, ಇಡೀ ದಿನ ಬ್ಯುಸಿಯಾಗಿರುತ್ತಿದ್ದಳು. ಇರುವ ಏಕೈಕ ಮಗ ವಿಕ್ಟರ್ ಓದಿನಲ್ಲಿ ಜಾಣ, ಶಾಲೆಯಲ್ಲಿ ನೆರೆಹೊರೆಯಲ್ಲಿ ಆತನ ನಡವಳಿಕೆ ಬಗ್ಗೆ ಉತ್ತಮ ಅಭಿಪ್ರಾಯವಿತ್ತು. ಬರಬರುತ್ತ ವಿಕ್ಟರ್‌ನಲ್ಲಿ ಬದಲಾವಣೆ ಕಾಣಿಸಲಾರಂಭಿಸಿತು. ಶಾಲೆಯಲ್ಲಿ ಶಿಕ್ಷಕರಿಂದ ದೂರು ಬರಲಾರಂಭಿಸಿತು. ತರಗತಿಯ ಶಿಕ್ಷಕರನ್ನು ಯದ್ವಾತದ್ವಾ ಪ್ರಶ್ನಿಸಿ, ಬೈಸಿಕೊಳ್ಳುತ್ತಿದ್ದ. ಯಾರೇ ಪ್ರಶ್ನೆ ಕೇಳಲಿ, ಇವನು ಕೈಮೇಲೆತ್ತುತ್ತಿದ್ದ. ಉಳಿದ ವಿದ್ಯಾರ್ಥಿಗಳನ್ನು ಗಮನಿಸಲೂ ಆಗದಂತೆ ಕಿರಿಕಿರಿ ಮಾಡುತ್ತಿದ್ದ ವಿಕ್ಟರ್. ಏನೇ ಹೇಳಿದರೂ ಕೇಳುತ್ತಿರಲಿಲ್ಲ. ಶಿಕ್ಷಕರು ಕಂಪ್ಲೆಂಟ್ ಪುಸ್ತಕದಲ್ಲಿ ಬರೆದು ಕಳಿಸಿದಾಗ, ತಂದೆಗೆ ತಲೆ ತಗ್ಗಿಸುವಂತಾಯಿತು. ಆದರೆ ವಿಕ್ಟರ್ ಬದಲಾಗಲಿಲ್ಲ. ದಿನೇದಿನೇ ಆತನ ವರ್ತನೆ ವಿಪರೀತವಾಯಿತು. ಶಾಲೆಯ ಸಹಪಾಠಿಗಳು ಆತನ ಮೇಲೆ ಆಕ್ರೋಶಗೊಂಡರು. ತರಗತಿಯ ಶಿಕ್ಷಕರಿಗೆ ಅವನನ್ನು ಶಿಕ್ಷಿಸದೆ ಬೇರೆ ದಾರಿಯೇ ಇರಲಿಲ್ಲ. ಒಳ್ಳೆಯ ಮಾತುಗಳು, ಮುಖ್ಯ ಶಿಕ್ಷಕಿಯರಲ್ಲಿ ದೂರು – ಊಹ್ಞೂ–ಯಾವುದಕ್ಕೂ ಅವನು ಜಗ್ಗಲಿಲ್ಲ. ಆದಿನ ಶಾಲೆಗೆ ಬಂದವನೇ ಮುಂದುಗಡೆಯ ಬೆಂಚಿನಲ್ಲಿ ಕೂರುವುದಾಗಿ ಹಟಹಿಡಿದ. ಆದರೆ ಉಳಿದ ಮಕ್ಕಳು ಅವನಿಗೆ ಅವಕಾಶ ಕೊಡಲಿಲ್ಲ. ಅವನು ಮುಂದುಗಡೆ ಕುಳಿತರೆ, ಉಳಿದವರಿಗೆ ಪಾಠಕೇಳಲೂ ಬಿಡುವುದಿಲ್ಲವೆಂಬುದು ಅವರ ಅಳಲು. ಶಿಕ್ಷಕಿ ಉಳಿದವರ ಮಾತಿಗೆ ಬೆಲೆಕೊಟ್ಟರು. ವಿಕ್ಟರ್‌ನನ್ನು ಅವನಿದ್ದ ಜಾಗದಲ್ಲೇ ಇರುವಂತೆ ತಿಳಿಸಿದರು. ಸಮಾಧಾನವಾಗದ ವಿಕ್ಟರ್ ಆ ದಿನವೆಲ್ಲಾ ಮುಖ ಊದಿಸಿಕೊಂಡೇ ಕುಳಿತಿದ್ದ. ಮಾರನೇ ದಿನ ಶಾಲೆಗೆಂದು ಹೊರಟವನು ಸೀದಾ ಹೋಗಿದ್ದು ಕ್ಯಾಲಿಫೋರ್ನಿಯಾ ರೈಲ್ವೇ ಸ್ಟೇಷನ್ ಕಡೆಗೆ. ಅದೃಷ್ಟ ಚೆನ್ನಾಗಿತ್ತು. ಸಾವಿನ ದವಡೆಯಿಂದ ಕ್ಷಣಮಾತ್ರದಲ್ಲಿ ಪಾರಾಗಿದ್ದ.

ಮಾರನೇ ದಿನವೇ ಮೈಕೇಲ್‌ಗೆ ಶಾಲೆಯಿಂದ ಕರೆ ಬಂದಿತು. ಮುಖ್ಯ ಶಿಕ್ಷಕಿಯವರು ಮೈಕೇಲ್‌ಗೆ ಶಾಲಾ ಮಕ್ಕಳ ಮನಶ್ಶಾಸ್ತ್ರಜ್ಞೆಯ ಪರಿಚಯ ಮಾಡಿಸಿದರು. ಮೈಕೇಲ್‌ಗೆ ಅಚ್ಚರಿ, ತನ್ನ ಮಗ ಮಾಡಿದ ತಪ್ಪಿಗೆ ತನಗೇಕೆ ಪರೀಕ್ಷೆ ಎಂದು. ಆದರೆ ಮನಶ್ಶಾಸ್ತ್ರಜ್ಞೆ ಮೈಕೇಲ್‌ನನ್ನು ಪ್ರಶ್ನಿಸುತ್ತಾ ಹೋದಂತೆ, ಆತನಿಗೆ ತನ್ನ ತಪ್ಪಿನ ಅರಿವು ತಂತಾನೇ ಆಯಿತು.

ಮನಶ್ಶಾಸ್ತ್ರಜ್ಞೆ ವಿಕ್ಟರ್‌ಗೆ ಹೇಳಿಕಳಿಸಿದಾಗ, ಅಲ್ಲಿ ತಂದೆ ಇರುವುದನ್ನು ನೋಡಿ ಹಿಂದೆ ಸರಿದ. ಮನಶ್ಶಾಸ್ತ್ರಜ್ಞೆ ತಂದೆಯನ್ನು ಕೊಠಡಿಯಿಂದ ಆಚೆ ಇರುವಂತೆ ಸನ್ನೆ ಮಾಡಿ, ವಿಕ್ಟರ್‌ನಿಗೆ ಒಳಗೆ ಬರುವಂತೆ ತಿಳಿಸಿದಾಗ, ಯಾವ ಅಳುಕೂ ಇಲ್ಲದೆ ಬಂದ. ಆತನನ್ನು ಎರಡುಮೂರು ಬಾರಿ ಸಂದರ್ಶನ ಮಾಡಿದಾಗ, ಆತ ವ್ಯಕ್ತಪಡಿಸಿದ ಭಾವನೆ ಅಸಹಜವೇನಾಗಿರಲಿಲ್ಲ. ನಾನು ಎಲ್ಲರಂತೆ ಆಡುವುದಕ್ಕೆ, ಓಡಾಡುವುದಕ್ಕೆ ನನಗೆ ಮನೆಯಲ್ಲಿ ಆಗಲೀ ಹೊರಗಡೆ ಆಗಲೀ ಸ್ವಾತಂತ್ರ್ಯವಿಲ್ಲ. ಅಪ್ಪ ಎಂದರೆ ಬಹಳ ಪ್ರೀತಿ ಇರುವ ನಾನು ಅವರೊಡನೆ ಜಗಳವಾಡುವುದೂ ಇಷ್ಟವಿಲ್ಲ. ಎಲ್ಲಾದಕ್ಕೂ ಅವರಿಷ್ಟದಂತೇ ನಡೆದುಕೊಳ್ಳುವುದು ನನಗೆ ತುಂಬ ಕಷ್ಟವಾಗಿದೆ. ನನಗೆ ಸ್ನೇಹಿತರೊಡನೆ ಆಡಬೇಕು, ಹಾಡಬೇಕು, ಕುಣಿಯಬೇಕು ಎಂದೆಲ್ಲ ಆಸೆ ಇದೆ. ಆದರೆ ನಾನು ಮನೆಯ ಗೇಟಿನಿಂದ ಒಂದು ಕ್ಷಣವೂ ಹೊರಗೆ ಬರಬಾರದು. ನಮ್ಮ ತಾಯಿ ಈ ವಿಷಯದಲ್ಲಿ ತಂದೆಗೆ ಏನೂ ಹೇಳುವುದಿಲ್ಲ. ನನ್ನನ್ನು ಯಾರೂ ಲೆಕ್ಕಕ್ಕೆ ಇಟ್ಟಿಲ್ಲ. ತರಗತಿಯಲ್ಲಿ ಸಹ ನಾನು ಕೆಲಸಕ್ಕೆ ಬಾರದ ಮುಠ್ಠಾಳನಂತೆ ಕುಳಿತಿರಬೇಕು. ಇದು ನನ್ನ ಕೈಲಿ ಸಾಧ್ಯವಿಲ್ಲ – ಎಂದು ವಿಕ್ಟರ್ ತನ್ನ ಅಂತರಂಗವನ್ನು



ತಂದೆಯ ಬೆಂಗಾವಲಿನಲ್ಲಿಯೇ ಹೋಗಬೇಕು. ಶಾಲೆಯ ಬೆಲ್ ಹೊಡೆಯಲು ಕೆಲವೇ ಕ್ಷಣಗಳಿರುವಾಗ ಅವನನ್ನು ಶಾಲೆಗೆ ಕಾರಿನಲ್ಲಿ ಕರೆತರುತ್ತಿದ್ದ. ಸಂಜೆ ಕೊನೆಯ ಬೆಲ್‌ಗೆ ಮೊದಲೇ ಕಾದಿದ್ದು, ಮಗ ಆಚೆ–ಈಚೆ ನೋಡಲೂ ಆಸ್ಪದವಿಲ್ಲದಂತೆ, ಕಾರಿನಲ್ಲಿ ಕುಳ್ಳಿರಿಸಿ ಮನೆಗೆ ಕರೆದೊಯ್ಯುತ್ತಿದ್ದ. ತನ್ನ ಸ್ನೇಹಿತರಿಗೆ 'ಬ್ಯಾ' ಹೇಳಲೂ ಅವಕಾಶಕೊಡುತ್ತಿರಲಿಲ್ಲ. ಇದು ವಿಕ್ಟರನ ವ್ಯಕ್ತಿತ್ವ ವಿಕಸನಕ್ಕೆ ಮಾರಕವಾಗುತ್ತ ಹೋಯಿತು. ಮನೆಗೆ ಹೋದಮೇಲೂ ತಂದೆ ಮಗನ ಪಾಲಿಗೆ ಶನಿಯಂತೆ ಕಾಡುತ್ತಿದ್ದ. ಒಂದು ಕ್ಷಣವೂ ಅತ್ತಿತ್ತ ಹೊರಳಾಡಲು ಬಿಡದೆ, ಓದುವಂತೆ ಒತ್ತಾಯಿಸುತ್ತಿದ್ದ. ತನಗಿಷ್ಟವಾದ ಒಂದು ಹಾಡನ್ನು ಗುನುಗಲೂ ಅವಕಾಶವಿಲ್ಲ. ಹೀಗೆ ಪಂಜರದ ಪಕ್ಷಿಯಂತೆ ವಿಕ್ಟರ್ ಚಡಪಡಿಸಲು ಪ್ರಾರಂಭಿಸಿದ. ತನ್ನ ಸ್ನೇಹಿತರು ತನ್ನ ಪ್ರತಿಭೆಯನ್ನು ಗುರುತಿಸಲೂ ಅವಕಾಶವಿಲ್ಲದಾಗ, ವಿಕ್ಟರ್‌ನ ವ್ಯಕ್ತಿತ್ವ ತಾನಾಗಿಯೇ ಮೇಲೆ ಬರಲು ಪ್ರಯತ್ನಿಸಿತು. ಬೇಡಬೇಡವೆಂದರೂ ಎದ್ದು ನಿಲ್ಲುತ್ತಿದ್ದ ವಿಕ್ಟರ್, ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳಲು ಅವಕಾಶ ಸಿಗದಾದಾಗ, ನಿರಾಸೆ, ಭ್ರಮನಿರಸನ ಸಹಜ. ಇದನ್ನು ತಡೆದುಕೊಳ್ಳುವ ಶಕ್ತಿಯಾಗಲೀ, ಭರವಸೆಯಾಗಲೀ ಆ ಪುಟ್ಟ ಹೃದಯಕ್ಕಿರಲಿಲ್ಲ. ಆಗ ಆತ ಕಂಡುಕೊಂಡ ದಾರಿ ಆತ್ಮಹತ್ಯೆ. ಹಾಗಾದರೂ ತನ್ನ ಎಲ್ಲ ಸ್ನೇಹಿತರು ತನ್ನನ್ನು ಗುರುತಿಸುತ್ತಾರೆ ಎಂಬ ಆಸೆಯೂ ಕೂಡ.

ಬಿಚ್ಚಿದ. ಮನಶ್ಶಾಸ್ತ್ರಜ್ಞೆ ವಿಕ್ಟರ್‌ಗೆ ಹೇಳಿದಳು–ನೋಡು, ಇನ್ನು ಕೆಲವೇ ದಿನಗಳಲ್ಲಿ ನೀನು ಬದಲಾವಣೆ ನೋಡುತ್ತೀಯಾ. ನಿನ್ನ ತಂದೆಗೆ ನಾನು ಹೇಳುತ್ತೇನೆ. ಆದರೆ ನೀನೂ ಸಹ ಹೇಳಿದಂತೆ ಕೇಳಬೇಕು. ಹೀಗೆಲ್ಲ ದುಡುಕಬಾರದು. ಆತ್ಮಹತ್ಯೆ ನಿನ್ನ ಸಮಸ್ಯೆಗೆ ಪರಿಹಾರವಲ್ಲ. ಇದರಿಂದ ನಿನ್ನ ಗೌರವಕ್ಕೆ, ನಿನ್ನ ತಂದೆ–ತಾಯಿಯ ಗೌರವಕ್ಕೆ ಧಕ್ಕೆ ಉಂಟಾಗುವುದು ನಿನಗಿಷ್ಟವೇ ? ಎಂದಾಗ ಇಲ್ಲವೆಂದು ಗೋಣು ಅಲ್ಲಾಡಿಸಿದ ವಿಕ್ಟರ್.

ಮೈಕೇಲ್ ಸ್ಥಿತಿವಂತ. ತನ್ನ ಮಗ ಹತ್ತರಲ್ಲಿ ಒಂದಾಗುವುದು ಅವನಿಗಿಷ್ಟವಿಲ್ಲ. ಅಸಾಧಾರಣವಾದುದನ್ನು ಸಾಧಿಸುವಂತಾಗಬೇಕೆಂದು ಅವನಿಚ್ಛೆ. ಈ ಇಚ್ಛೆಯ ಮಾಯೆಯಲ್ಲಿ ಮೈಕೇಲ್ ತನಗರಿವಿಲ್ಲದೇ ತಪ್ಪುದಾರಿಯಲ್ಲಿದ್ದ. ಮಗನ ಮೇಲೆ ಇಪ್ಪತ್ತಾನ್ನಾಲ್ಕು ಗಂಟೆಯೂ ಕಣ್ಣಿರಿಸುತ್ತಿದ್ದ. ಅವನು ಎಲ್ಲಿಗೆ ಹೋದರೂ

ತನ್ನ ತಪ್ಪಿನ ಅರಿವಾದಾಗ ಮೈಕೇಲ್ ಶಿಕ್ಷಕಿಗೆ ಇನ್ನು ಮುಂದೆ ಹೀಗಾಗಲು ಅವಕಾಶ ನೀಡುವುದಿಲ್ಲವೆಂದು ಭರವಸೆ ನೀಡಿದ. ತನ್ನ ಮಗನ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯಾಗದಂತೆ ಮನಶ್ಶಾಸ್ತ್ರಜ್ಞೆ ಆತನಿಗೆ ನೀಡಿದ ತಿಳುವಳಿಕೆಯ ಪರಿಣಾಮವಾಗಿ, ಒಂದು ಸುಂದರ ಹೂ ಸ್ವಚ್ಛಂದವಾಗಿ ಅರಳಲು ಸಾಧ್ಯವಾಯಿತು.

ಇಂಗ್ಲಿಷ್‌ನಿಂದ ಕನ್ನಡಕ್ಕೆ : **ಕೆ.ಜಿ.ಕಲಾವತಿ**



### ಶಾಲಾ ಮಕ್ಕಳ ವೈದ್ಯಕೀಯ ಸಪಾಸಣೆ

**ಧಾರವಾಡ** – ಹುಬ್ಬಳ್ಳಿ ನಗರದ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 31.7.2007ರಂದು ಡಾ॥ ಗಿಡ್ಡಣ್ಣನವರ ನೇತೃತ್ವದಲ್ಲಿ ಶಾಲಾ ಮಕ್ಕಳ ವೈದ್ಯಕೀಯ ತಪಾಸಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು 220 ವಿದ್ಯಾರ್ಥಿಗಳು ತಪಾಸಣೆಗೆ ಒಳಗಾದರು. ಈ ಸಂದರ್ಭದಲ್ಲಿ ಪೋಷಕರು, ಇಲಾಖೆಯ ಅಧಿಕಾರಿಗಳು, ಗ್ರಾಮಸ್ಥರು ಭಾಗವಹಿಸಿ ವೈದ್ಯಕೀಯ ಮಾರ್ಗದರ್ಶನ ಪಡೆದರು. ವಿದ್ಯಾರ್ಥಿಗಳು ಮತ್ತು ಪೋಷಕರು ಆರೋಗ್ಯವನ್ನು ಕಾಪಾಡಿಕೊಳ್ಳುವ ಸುಲಭ ಮಾರ್ಗವನ್ನು ಕಿವರ್ಸ್ ವೈದ್ಯಾಧಿಕಾರಿಗಳು ತಿಳಿ ಹೇಳಿದರು. ಶಾಲೆಯ ಮುಖ್ಯೋಪಾಧ್ಯಾಯರು ಎಲ್ಲರನ್ನೂ ವಂದಿಸಿದರು.

**– ಎನ್. ಎಸ್. ಖಾನಾಗೌಡರ**
ಸಮನ್ವಯಾಧಿಕಾರಿಗಳು, ಬಿ.ಆರ್. ಸಿ. ಹುಬ್ಬಳ್ಳಿ

---



**ಬಾಗಲಕೋಟೆ** – ಬಾದಾಮಿ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆಯಲ್ಲಿ 60ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಳ ವೈವಿಧ್ಯಮಯವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳು ನಮ್ಮ ನಾಗರೀಕತೆ, ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಉಡುಪುಗಳನ್ನು ಧರಿಸಿ ದೇಶಭಕ್ತಿ ಗೀತೆಗಳನ್ನು ಹಾಡಿದರು. ಶಾಸಕರಾದ ಎಂ. ಕೆ. ಪಟ್ಟಣಶೆಟ್ಟಿಯವರು ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಪ್ರಕಾಶಪವಾರ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶಿಕ್ಷಕರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

**– ಮಾಲ ಎನ್. ಹೊಸಮನಿ,** ಮು.ಶಿ.
ಸ.ಹಿ.ಪ್ರಾ. ಶಾಲೆ, ಬಾದಾಮಿ


---



**ಚಿಕ್ಕಬಳ್ಳಾಪುರ** – ಗುಡಿಬಂಡೆ ತಾಲ್ಲೂಕಿನಲ್ಲಿ "ಪರಿವರ್ತನೆ" ಎಂಬ ಒಂದು ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ, ಶಾಲೆಯಿಂದ ಹೊರಗುಳಿದ ಮತ್ತು ಶಾಲೆಯನ್ನು ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತಂದು ಆ ಮಕ್ಕಳು ಶಾಲೆಯಲ್ಲಿಯೂ ಉಳಿದು ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಮಾಡುವುದು. ಈ ಕಾರ್ಯಕ್ರಮ ತಾಲ್ಲೂಕಿನಲ್ಲಿ ಯಶಸ್ವಿಕಂಡಿತು. ಮುಖ್ಯ ವಾಹಿನಿಗೆ ಬಂದ ಕುಮಾರಿ ಅನಿತಾರವರಿಗೆ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿರವರು ಸಮವಸ್ತ್ರ ಹಾಗೂ ಪುಸ್ತಕವನ್ನು ವಿತರಿಸಿದರು. ಒಟ್ಟು 11 ಮಕ್ಕಳನ್ನು ಮುಖ್ಯ ವಾಹಿನಿಗೆ ತರಲಾಗಿದೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಜಿ.ವಿ. ಶ್ರೀರಾಮರೆಡ್ಡಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಗುವನ್ನು ನಿರಂತರವಾಗಿ ಶಾಲೆಗೆ ಕಳುಹಿಸುವಂತೆ ಪೋಷಕರಿಗೆ ತಿಳಿಸಿದರು.

– **ಕೆ. ವೆಂಕಟೇಶ್** ಸಮನ್ವಯಾಧಿಕಾರಿಗಳು
ಕ್ಷೇತ್ರ ಸಂಪನ್ಮೂಲ ಕೇಂದ್ರ, ಗುಡಿಬಂಡೆ

---



**ಬೆಂಗಳೂರು ದಕ್ಷಿಣ ಜಿಲ್ಲೆ** – ವಲಯ 04ರಲ್ಲಿ ಇರುವ ಸ.ಹಿ.ಪ್ರಾ. ಶಾಲೆ ಮುನ್ನೆಕೊಳಾಲ, ಬೆಂಗಳೂರು ಈ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗಾಗಿ ಇದೇ ಊರಿನ ದಾನಿಗಳಾದ ಬಾಬುರೆಡ್ಡಿಯವರು ಸುಮಾರು ರೂ. 60,000 ಬೆಲೆ ಬಾಳುವಷ್ಟು ಪುಸ್ತಕಗಳು ಹಾಗೂ ಕ್ರೀಡಾ ವಿದ್ಯಾರ್ಥಿಗಳಿಗೆ ಸುಮಾರು ರೂ. 20,000 ಬೆಲೆಯಷ್ಟು ಕ್ರೀಡಾ ಕಪ್ಪ್‌ಗಳನ್ನು ನೀಡಿರುತ್ತಾರೆ. ಮಕ್ಕಳ ಆರೋಗ್ಯ ದೃಷ್ಟಿಯಿಂದ ಪ್ರತಿದಿನ ಶಾಲಾ ವಿದ್ಯಾರ್ಥಿಗಳಿಗೆ ಶುದ್ಧೀಕರಿಸಿದ 4 ಕ್ಯಾನ್ ನೀರನ್ನು ನೀಡುತ್ತಿದ್ದಾರೆ.

**– ಶಾರದಮ್ಮ, ಮು.ಶಿ.**
ಸ.ಹಿ.ಪ್ರಾ. ಶಾಲೆ ಮುನ್ನೇಕೊಳಾಲ, ದ.ವ–4

**ಬೆಂಗಳೂರು ದಕ್ಷಿಣ:** ಬಸವನಗುಡಿ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಸಮುದಾಯದ ಸಹಕಾರದಿಂದ ನಡೆಯುತ್ತಿದೆ. ಜೂನ್ 1, 2007 ರಿಂದ ಅದಮ್ಯ ಚೇತನದ ಮೂಲಕ ಮಧ್ಯಾಹ್ನದ ಊಟದ ವ್ಯವಸ್ಥೆ ನಡೆಯುತ್ತಿದೆ, ಜುಲೈ ಮಾಹೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಓದಿನಲ್ಲಿ ಮುಂದಿರುವ ವಿದ್ಯಾರ್ಥಿಗಳಿಗೆ ಎಸ್.ಬಿ.ಐ. ವತಿಯಿಂದ ವಿದ್ಯಾರ್ಥಿಗಳಿಗೆ 5 ಸಹಸ್ರ ರೂ.ಗಳ ಪುಸ್ತಕಗಳನ್ನು ಕೊಡಿಸಲಾಯಿತು, ರವಿಚಂದ್ರನ್ Inter tech communication ಇವರ ಕುಟುಂಬದಿಂದ 17 ಸಹಸ್ರ ರೂ.ಗಳ ಮೌಲ್ಯದ ಪುಸ್ತಕಗಳನ್ನು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಕೊಡಿಸಲಾಯಿತು, ದಿನಾಂಕ 21.7.07 ರಂದು ಮಾನ್ಯ ಅನಂತಕುಮಾರ್ (ಸಂಸದರ ಸದಸ್ಯರ ನಿಧಿಯಿಂದ) ರವರಿಂದ ಬೋರ್‌ವೆಲ್ ಹಾಕಿಸುವ ಕೆಲಸಕ್ಕೆ ನಾಂದಿಪೂಜೆ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪ್ರಾಂಶುಪಾಲರು, ಉಪಪ್ರಾಂಶುಪಾಲರು ಉಪಸ್ಥಿತರಿದ್ದರು.

**– ಆರ್. ಸೀತಾಲಕ್ಷ್ಮಿ**
ಉಪಪ್ರಾಂಶುಪಾಲರು





**ಬಾಗಲಕೋಟೆ:** ಬಾದಾಮಿ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆ ಕಡಲಗೊಂಬಾ ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್. ಎಸ್. ರಮೇಶ್ ನಿವೃತ್ತ ಸುಬೇದಾರರು ಊಟದ ತಟ್ಟೆಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಹಾಗೂ ರಮೇಶ್ ಮಡಹಳ್ಳಿ ಪ್ರಥಮ ದರ್ಜೆ ಸಹಾಯಕರು ಸಮವಸ್ತ್ರ ಹಾಗೂ ಪೆನ್ನುಗಳನ್ನು ನೀಡಿದ್ದಾರೆ. ಅಡಪದ್‌ರವರು ಒಂದು ಫ್ಯಾನ್, ತಾಯಪ್ಪ ದೊಡ್ಡಮನಿ, ಲಕ್ಷಾಣಿಯವರು, ಹನುಮಂತ ವ್ಯಾಪಾರಿ, ಶಂಕರಗೌಡ, ದಂಡನ್ನವರ ಇನ್ನೂ ಅನೇಕರು ಸೇರಿ ಶಾಲೆಗೆ ಬಂದು ರೇಡಿಯೋ ನೀಡಿರುತ್ತಾರೆ, ಕ್ರೀಡಾಪಟುಗಳಿಗೆ ನಿಕ್ಕರ್, ಮತ್ತು ಬನೀಯನ್ ಕೊಡಿಸಿರುತ್ತಾರೆ. ಹಾಗೂ ಲೆಕ್ಕನಗೌಡ ದಂಡನ್ನವರ ಶಾಲೆಗೆ ಗೇಟ್ ಹಾಗೂ ಕಂಪ್ಯೂಟರ್ ಕೊಠಡಿಗೆ ವಿದ್ಯುತ್ ಸೌಕರ್ಯ ಮಾಡಿಸಿದ್ದಾರೆ. ಕೊಡುಗೆಯ ಕಾರ್ಯಕ್ರಮದಲ್ಲಿ ಇನ್ನೂ ಅನೇಕ ದಾನಿಗಳು, ಗ್ರಾಮಸ್ಥರು ಶಿಕ್ಷಣ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಹಿತವಚನವನ್ನು ಹೇಳಿದರು. ಮುಖ್ಯ ಶಿಕ್ಷಕರು ವಂದಿಸಿದರು.

**– ಮುಖ್ಯೋಪಾಧ್ಯಾಯರು**



**ಉತ್ತರ ಕನ್ನಡ ಜಿಲ್ಲೆ :** ಹಳಿಯಾಳ ತಾಲ್ಲೂಕಿನ ಸ.ಹಿ.ಪ್ರಾ.ಶಾಲೆ ಚಿಕ್ಕಹಳ್ಳಿಯಲ್ಲಿ 60ನೇ ಸ್ವಾತಂತ್ರ್ಯ ದಿನಾಚಾರಣೆಯನ್ನು ಆರಿಸಲಾಯಿತು. ಗ್ರಾಮಸ್ಥರು ಸುಮಾರು 10,000 ಗಳಷ್ಟು ಹಣ ಖರ್ಚುಮಾಡಿ ಧ್ವನಿವರ್ಧಕ, ಹಾಗೂ ಟೇಪ್ ರೆಕಾರ್ಡ್ ಅನ್ನು ಶಾಲೆಗೆ ದಾನವಾಗಿ ನೀಡಿದ್ದಾರೆ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕರಾದ ಪ್ರಸನ್ನ ಗಾವಂಕರ್, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು. ವಿದ್ಯಾರ್ಥಿಗಳು ದೇಶಭಕ್ತಿಗೀತೆಗಳನ್ನು ಹಾಡಿದರು. ಶಾಲೆಯ ಮುಖ್ಯ ಶಿಕ್ಷಕರು ಎಲ್ಲರನ್ನೂ ವಂದಿಸಿದರು.

**– ಜಿ.ಪ್ರಸನ್ನ ಗಾಂವಕರ್**
ಶಿಕ್ಷಣ ಸಂಯೋಜಕರು, ಹಳಿಯಾಳ



**ಮಧುಗಿರಿ :** ಶಿರಾ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆ ಕುಂಚಿಗನಹಳ್ಳಿ ಮತ್ತು ಸ.ಕಿ.ಪ್ರಾ. ಶಾಲೆ ಕೆಂಚಪ್ಪನಹಳ್ಳಿಯ ಶಾಲಾ ವಿದ್ಯಾರ್ಥಿಗಳಿಗೆ ಮೈಸೂರು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀಶ್ರೀಶ್ರೀ ಪರಹಿತಾನಂದ ಸ್ವಾಮಿ ಮಹಾರಾಜ್‌ರವರು ಆಶ್ರಮದ ವತಿಯಿಂದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಗಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ತಟ್ಟೆ ಮತ್ತು ಲೋಟವನ್ನು ವಿತರಿಸಿದರು. ವಿತರಣಾ ಸಮಾರಂಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹಾಗೂ ಸಿ.ಆರ್.ಪಿ.ಗಳು ಹಾಜರಿದ್ದರು. ಗ್ರಾಮಸ್ಥರು, ಶಿಕ್ಷಣ ಇಲಾಖೆಯ ಅಧಿಕಾರಿಗಳೂ, ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಶಾಲೆಯ ಮುಖ್ಯಸ್ಥರು ಎಲ್ಲರನ್ನೂ ವಂದಿಸಿದರು.

**– ಹೆಚ್. ಹೆಚ್. ಗೌಡ**
ಸಮೂಹ ಸಂಪನ್ಮೂಲ ವ್ಯಕ್ತಿ, ದೊಡ್ಡ ಅಗ್ರಹಾರ, ಶಿರಾ, ತಾ॥



ದಿನಾಂಕ 27.06.2007ರಂದು ಸ॥ ಹಿ॥ ಪ್ರಾ॥ ಶಾಲೆ ಸುದ್ದಗುಂಟೆಪಾಳ್ಯ ಬೆಂ. ದಕ್ಷಿಣ ವಲಯ – 3 ಈ ಶಾಲೆಯಲ್ಲಿ ಮಾನ್ಯ ರಾಮಲಿಂಗಾರೆಡ್ಡಿಯವರು ಶಾಸಕರು ಜಯನಗರ ಕ್ಷೇತ್ರ ಇವರ ಅಧ್ಯಕ್ಷತೆಯಲ್ಲಿ ಉಚಿತ ನೋಟ್ ಪುಸ್ತಕ ವಿತರಣೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯ ಉದ್ಘಾಟನಾ ಸಮಾರಂಭ ನಡೆಯಿತು.

ಶಾಲೆಗೆ ದಾನಿಗಳಿಂದ ವಸ್ತು ರೂಪದಲ್ಲಿ ಈ ಕೆಳಕಂಡ ವಸ್ತುಗಳನ್ನು ಸಂಗ್ರಹಿಸಲಾಯಿತು.

**ದಾನಿಗಳ ಹೆಸರು ಸಂಗ್ರಹಿಸಿದ ವಸ್ತುಗಳು**

ಶ್ರೀ ರಾಮಲಿಂಗಾರೆಡ್ಡಿಯವರು, ಶಾಸಕರು, ಜಯನಗರ ಕ್ಷೇತ್ರ ಪುಸ್ತಕಗಳು, ಗಣಿತಪೆಟ್ಟಿಗೆ, ನೀರಿನ ಡ್ರಮ್, 30 ಡೆಸ್ಕ್‌ಗಳು.

ಶ್ರೀ ಕೃಷ್ಣಮೂರ್ತಿ ಎಸ್. ಆರ್., ಎಸ್.ಜಿ. ಪಾಳ್ಯ
ಅಡಿಗೆ ಮನೆ, ಮಹಡಿಯ ಮೆಟ್ಟಿಲು.

ಶ್ರೀ ವೆಂಕಟೇಶ್ ಎಸ್.ಕೆ., ನಗರ ಸಭಾ ಸದಸ್ಯರು, ವಾರ್ಡ್‌ನಂ. 63
ಧ್ವಜಸ್ತಂಭ, ಮಕ್ಕಳಿಗೆ ಬಟ್ಟೆ.

ಶ್ರೀ ಹೆಚ್. ಮಂಜುನಾಥ್, ಲಾರ್ಡ್ಸ್ ಗ್ರೂಪ್ಸ್, ಎಸ್. ಜಿ.ಪಾಳ್ಯ
ವಿದ್ಯುತ್, ಶೌಚಾಲಯ ದುರಸ್ತಿ.

ಶ್ರೀ ರಾಮರೆಡ್ಡಿಯವರು (ಐರನ್ ಮತ್ತು ಓರ್ ಲೇಬರ್ ಛೇರ್ಮನ್) ಭಾರತ ಸರ್ಕಾರ
2 ಗಣಕ ಯಂತ್ರಗಳು

ಶ್ರೀ ಶಿವರಾಮರೆಡ್ಡಿಯವರು ಸಮಾಜಸೇವಕರು, ಎಸ್.ಜಿ.ಪಾಳ್ಯ
ಶಾಲೆಗೆ ಪೆಯಿಂಟ್, 2 ಗಣಕಯಂತ್ರ

ಶ್ರೀಮತಿ ಪ್ರೇಮಲತ,ಮು.ಜಿ. ಸ.ಮಾ.ಶಾ. ಮಡಿವಾಳ
ಗೋಡೆ ಬರಹ ಮತ್ತು ಚಿತ್ರಗಳು

ಶ್ರೀಮತಿ ಪ್ರಮೀಳಾ ಶ್ರೀನಿವಾಸ್, ದಾನಿಗಳು ಎಸ್‌ಜಿ.ಪಾಳ್ಯ
ಬರೆಯುವ ಪುಸ್ತಕ, ಪೆನ್ನು

ಶ್ರೀ ಬಾಲ್‌ರೆಡ್ಡಿ, ದಾನಿಗಳು, ಎಸ್.ಜಿ. ಪಾಳ್ಯ
ವೀಲ್ ಚೇರ್

ಶ್ರೀ ತಂಗಪ್ಪ, ಎಸ್.ಜಿ. ಪಾಳ್ಯ
10x12 ಅಂಗಲದ 2 ಜಮಖಾನ

ಶ್ರೀ ಎಸ್.ವಿ. ಶ್ರೀನಿವಾಸಮೂರ್ತಿ, ಅಧ್ಯಕ್ಷರು ಎಸ್.ಡಿ.ಎಂ.ಸಿ.
ಪಾತ್ರೆಗಳು

ಶ್ರೀ ಪೆರುಮಾಳ್, ಎಸ್. ಜಿ. ಪಾಳ್ಯ
ಕೊಳಗ ಮತ್ತು ಊಟದ ತಟ್ಟೆಗಳು

ಸತ್ಯಸಾಯಿ ಸಮಿತಿ,
ಆರೋಗ್ಯ ಸಪಾಸಣೆ, ಔಷಧಿ ವಿತರಣೆ.

**ಈ ಎಲ್ಲ ದಾನಿಗಳ ಜೊತೆಗೂಡಿ ಇನ್ನು ಹೆಚ್ಚಿನ ಸೇವೆ ಮಾಡಿರುವ ದಾನಿಗಳು.**


ಶ್ರೀಯುತ ವೆಂಕಟಸ್ವಾಮಿಯವರು, ದಾನಿಗಳು ಸಮಾಜಸೇವಕರು ಆಡುಗೋಡಿ ಇವರು ಶಾಲೆಗೆ ಸಂಪುನಿರ್ಮಾಣ, ಕೊಳಾಯಿಗಳು, ಊಟದ ಪಾತ್ರೆಗಳು, ಟೈ ಮತ್ತು ಬೆಲ್ಟ್, ಬ್ಯಾಡ್ಜ್, ಬರೆಯುವ ಪುಸ್ತಕ, ಜೊತೆಗೆ ಶಾಲೆಯ ಹಳೆಯ ವಿದ್ಯಾರ್ಥಿಗಳಿಗೆ ಓದುವ ವೆಚ್ಚ ಭರಿಸಿರುತ್ತಾರೆ.

ಈ ಎಲ್ಲ ವಸ್ತುಗಳ ಅಂದಾಜು ಮೊತ್ತ ಸುಮಾರು 4 ಲಕ್ಷಗಳಾಗಿರುತ್ತದೆ.

ಮೂಲಭೂತ ಸೌಕರ್ಯದ ಕೊರತೆಯಿಲ್ಲದಂತೆ ಶಾಲೆಗೆ ದಾನಿಗಳ ನೆರವಿನಿಂದ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ. ದಾನಿಗಳ ಸಂಘಟನೆಯಲ್ಲಿ ಎಲ್ಲಾ ಶಿಕ್ಷಕರು ಸಹಕರಿಸುತ್ತಿದ್ದಾರೆ.

**– ಎ.ಜಿ.ತಿಮ್ಮೇಗೌಡ,** ಮು.ಶಿ.
ಎಸ್.ಜಿ. ಪಾಳ್ಯ, ಬೆಂಗಳೂರು

## ಜಪಾನ್‌ಹಬ್ಬದಲ್ಲಿ ಮಿಂಚಿದ ಶಿಕ್ಷಣ ವಾರ್ತೆಯ ಕಲಾವಿದ



ಇದೇ ಆಗಸ್ಟ್ 10 ರಂದು ರಾಜಭವನದಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮ – ಬೆಂಗಳೂರು ದೂರದರ್ಶನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ ಹಾಗೂ ಇಂಡೋಜಪಾನ್ ಸ್ನೇಹ ಸಮಿತಿಗಳು ಜಂಟಿಯಾಗಿ 'ಜಪಾನ್‌ಹಬ್ಬ'ವನ್ನು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಸಿಕೊಟ್ಟವು. ಜಪಾನ್ ನೃತ್ಯ, ಹಾಡುಗಳೊಂದಿಗೆ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಕುಂಚದಿಂದ ಬಿಡಿಸಲು 'ಶಿಕ್ಷಣ ವಾರ್ತೆ' ಬಳಗದ ಕಲಾವಿದ ಜಿ.ಕೆ. ಶಿವಣ್ಣ ಆಹ್ವಾನಿತರಾಗಿದ್ದರು. ಪ್ರೇಕ್ಷಕರ ಮೆಚ್ಚುಗೆ ಗಳಿಸುವಲ್ಲಿ ಯಶಸ್ವಿಯೂ ಆದ ಶಿವಣ್ಣ ಅವರಿಗೆ ಅಭಿನಂದನೆಗಳು.

## ಅನಿಸಿಕೆ

ನಿಮಗೆ ಹೇಗೆ ಅಭಿನಂದನೆ ತಿಳಿಸಬೇಕೋ ಗೊತ್ತಾಗುತ್ತಿಲ್ಲ. ಅಂತಹ ಸುಂದರ ಅಚ್ಚುಕಟ್ಟಾದ, ಇಲಾಖಾ ಆದೇಶಗಳೊಂದಿಗೆ, ಮಾಹಿತಿಪೂರಿತವಾದ, ಜ್ಞಾನದ ರಾಶಿಯ ಅನೇಕ ವಿಷಯಗಳ ಸಂಕಲನದೊಂದಿಗಿದ ಶಿಕ್ಷಣ ವಾರ್ತೆ ಸಂಪಾದನೆ ಅತ್ಯಮೂಲ್ಯವಾದುದು. ಅದು ಸ್ವಲ್ಪ ತಡವಾದರೂ ಕಸಿವಿಸಿ, ತಮ್ಮ ಶ್ರಮಕ್ಕೆ ನಾವು ಏನು ಹೇಳಿದರೂ ಕಡಿಮೆಯೇ.

**– ಲಲಿತಾ ಕೆ. ಹೊಸಪ್ಯಾಟಿ, ಮು.ಶಿ.**
ಸ.ಪ್ರೌ.ಶಾಲೆ ಹಿರೇಬಾದವಾಡಗಿ, ಹುನಗುಂದ ತಾ. ಬಾಗಲಕೋಟೆ

ಆಶ್ರಯ ಕಾಲೋನಿ, ಹೂಲಗೇರಿ ಸ.ಹಿ.ಪ್ರಾ. ಶಾಲೆಯ ಸಹ ಶಿಕ್ಷಕಿಯಾದ ನಾನು ಶಿಕ್ಷಣ ವಾರ್ತೆ ಪತ್ರಿಕೆಯನ್ನು ಪ್ರತಿ ತಿಂಗಳೂ ಓದುತ್ತೇನೆ. ಆಯುಕ್ತರ ಮಾತುಗಳು ನನಗೆ ತುಂಬಾ ಮೆಚ್ಚುಗೆಯಾಗುತ್ತದೆ. ಆಯುಕ್ತರ ಮಾತುಗಳು ಮನದಾಳ ತಲುಪುವ ಹಾಗಿರುತ್ತವೆ. ಶಿಕ್ಷಣ ವಾರ್ತೆಯ ಪ್ರತಿ ಪುಟವು ಜ್ಞಾನದ ಆಗರ ಮಾಹಿತಿಯ ಮಾಲಿಕೆ ಮತ್ತು ಹೊಸ, ಹೊಸ ಜ್ಞಾನ ಒದಗಿಸುತ್ತದೆ ಎಂದು ಹೇಳಲು ತುಂಬಾ ಖುಷಿಯಾಗುತ್ತದೆ.

**– ಸುರೈಯ್ಯಾ ಎಂ. ಪೀರ್‌ಖಾನಾ**
ಸಕಿಪ್ರಾ ಶಾಲೆ, ಅಶ್ರಯ ಕಲೋನಿ ಹೂಲಗೇರಿ, ಬಾದಾಮಿ.ತಾ. ಬಾಗಲಕೋಟೆ

ಶಿಕ್ಷಣವಾರ್ತೆಯು ಶಿಕ್ಷಕರಿಗೆ ಸ್ಫೂರ್ತಿನೀಡಿ ವಿದ್ಯಾರ್ಥಿಗಳನ್ನು ಮುಂದಿನ ಉತ್ತಮ ವಿದ್ಯಾವಂತರನ್ನಾಗಿ ಮಾಡಿ, ಉತ್ತಮ ವ್ಯಕ್ತಿಗಳನ್ನಾಗಿ ಸಮಾಜದಲ್ಲಿ ರೂಪುಗೊಳ್ಳುವಂತೆ ಮಾಡಲು ಸಹಕಾರಿಯಾಗಿದೆ.

"ಶಿಕ್ಷಣವಾರ್ತೆ"ಯ ಅಕ್ಷರಶಃ ವಿವರಣೆಯನ್ನು ನಾನು ಬರೆದಿರುತ್ತೇನೆ. ಅದನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶಿ** – ಶಿಕ್ಷಣದಲ್ಲಿ ರಾಜ್ಯವನ್ನು ಸ್ವಾವಲಂಬಿಯನ್ನಾಗಿ ಮಾಡಲು
**ಕ್ಷ** – ಕ್ಷಕಿರಣದ ರೂಪದಿ ಅಶಿಕ್ಷಿತರನ್ನು ಹುಡುಕಿ
**ಣ** –ಹಣತೆಯೆಂಬ ಪ್ರಾಥಮಿಕ ಶಿಕ್ಷಣದ ಜ್ಯೋತಿಯನ್ನು ಮನದಲ್ಲಿ ಬೆಳಗಿಸಿ
**ವಾ**– ವಾಮನ ರೂಪದ ಸಾಧಕರನ್ನು ತ್ರಿವಿಕ್ರಮರನ್ನಾಗಿ ಮಾಡಲು ಶಿಕ್ಷಕರಿಗೆ ಪ್ರೇರಣೆನೀಡಲು
**ರ್ತೆ**–ವಾರ್ತೆಯ ರೂಪದಿ ಪ್ರತಿಶಾಲೆಗೆ ಬರುತ್ತಿರುವ ಅಮೂರ್ತ ಜ್ಞಾನವಾಹಿನಿ

**– ಬಿ. ಕೆ. ರಘು**
ಸಕಿಪ್ರಾ ಶಾಲೆ, ಅಪ್ಪೇನಹಳ್ಳಿ, ಚೆನ್ನರಾಯಪಟ್ಟಣ,ತಾ.ಹಾಸನ

ಶಿಕ್ಷಣವಾರ್ತೆ ಉತ್ತಮ ಲೇಖನ, ಸರ್ಕಾರಿ ಆದೇಶಗಳ ಮಾಹಿತಿಗಳೊಂದಿಗೆ ಒಳ್ಳೆಯ ಹಾಡುಗಳನ್ನೂ ಪ್ರಕಟಿಸುತ್ತಿರುವುದು ತುಂಬಾ ಸಂತೋಷದ ವಿಚಾರ. ಇದರಿಂದ ಅಭಿನಯ ಗೀತೆಗಳ ಹುಡುಕಾಟದಲ್ಲಿರುವ ಶಿಕ್ಷಕ ಬಂಧುಗಳಿಗೆ ಹೆಚ್ಚಿನ ಪ್ರಯೋಜನವಾಗಿದೆ.

**– ವೈ. ರಾಮಕೃಷ್ಣರಾವ್,** ಶಿಕ್ಷಕ
ಸ. ಪ್ರೌ.ಶಾಲೆ, ಅಜ್ಜರ ಕಾಡು, ಉಡುಪಿ

## "English" ಕಲಿಕೆ

ಅಮ್ಮಾ, ನಮ್ಮ School ನಲ್ಲಿ
ಈಗ English ಕಲಿಸ್ತಾರೆ
ABCD ಜೊತೆಜೊತೆಗೇನೆ
Rhymes ಹೇಳ್ತಾರೆ.

Come little children ಅಂತಾರೆ
ತುಂಬಾ stories ಹೇಳ್ತಾರೆ.
Picture ನೋಡಿ meaning ಅರಿತು
yes miss ಅಂತೀವಿ.

Pen, Pencil, Bat, Ball
all are English ಅಂತಾರೆ
Good Morning miss ಅಂದಾಗ್ಲೆಲ್ಲಾ
very good ಪುಟ್ಟಾ ಅಂತಾರೆ

English ಕಲಿತರೆ ಬಲು ಉಪಯೋಗ
Miss ಮಾಡ್ದೆ ಹೇಳ್ತಿರ್ತಾರೆ
stand up, sitdown, come, go
ನಿತ್ಯ ಹೇಳ್ತಾನೆ ಇರ್ತಾರೆ.

Mummy, Daddy, Aunty, Uncle
ಖುಷಿಖುಷಿಯಾಗಿ ಕಲಿಸ್ತಾರೆ
ಟ್ರಿನ್ ಟ್ರಿನ್ Bell ಬಾರಿಸಿದೊಡನೆ
Tata Bye Bye ಅಂತಾರೆ.



**ವೇದವತಿ ಸಿ.ಜಿ.** ಸಹಶಿಕ್ಷಕಿ
ಸ.ಕ.ಹಿ.ಪ್ರಾ. ಶಾಲೆ, ಸರಬಂಡೆಪಾಳ್ಯ, ಬನಶಂಕರಿ
ಬೆಂಗಳೂರು ದ.ವ – 1

Technology in Education Contest Results of 2006-07 conducted by DSERT and Intel Teach Program

To motivate teachers & students of Karnataka government, DSERT, and Intel Teach Program conducted a state level competition on best use of technology in education. For the year 2006, more than 400 entries were received for the competition from governmental schools across the state with good number of rural teachers and students participating in the contrest.

After the evaluation, jointly conducted by DSERT and Intel Teach Program, 14 outstanding teachers, 7 schools and 14 students groups were selected as winners for best integration of technology in teaching - learning process. The awards are spread over 13 districts of the state. The awards included a cash prize of Rs. 10,000 each for schools, Rs. 5000 each for teachers and Rs. 1000 for each students group with a join citation from Intel Teach Program and DSERT

The felicitation ceremony for the award winners is scheduled in the month of September/ October 2007 in Bangalore. The following are the winners.

## Teacher Category

| Sl. No. | Name of the school | Name of the participant | City | Postal Address |
|---|---|---|---|---|
| 1. | GHS Mudashede | Mamatha G. Athial | Mangalore | Post Mudashede, Mangalore Tq. Dakshina Kannada Dist. |
| 2. | J.D. Kotecha High Schoool Mangalore | Ashwini G. Aithal | Mangalore | Bhojja Rao street, Mangalore, D K Dist. |
| 3. | GHS Makali | Bharathi Bhat | Bangalore | Post Makali, Bangalore |
| 4. | GPUC Peenya | Sarswathi K. Hegde | Bangalore | Tumkur Road, Peenya Bangalore |
| 5. | GPUC Oorukere | Latha H. L. | Tumkur | Post Oorukere, Tumkur Dist. |
| 6. | GHS Halivana | Dinesh B.K. | Davangere | Post Halivana, Harihara Tq. Davangere Dist. |
| 7. | GHS IISC | C.K. Bhagyamma | Bangalore | IISc. Malleshwaram, Bangalore |
| 8. | GGPUC old Town Bhadravathi | H.V. Sathyavathi | Shimoga | Post old town, Bhadravathi Shimoga Dist. |
| 9. | GHS Devalapura | Vishala M R | Mysore | Post Devalapura Mysore |
| 10. | GPUC Anekal | Rekha Rani | Bangalore | Anekal, Bangalore |
| 11. | GHS Thengingudi | Vidya Sandeep Nayak | UK | Post Thngomgidi,Bhatakal Tq. Uttar Kannada Dist. |
| 12. | GHS Valakadu | Radhakrishna Upadhyaya | Udupi | At Volakadu Udupi Dist. |
| 13. | GPUC (ex Muncipal Muncipal) Bellary | K. Lokaraj | Bellary | Post Bellary |
| 14. | GPU I K Colony | V.M. Nagaveena | Tumkur | Koratagere, Tumkur District Koratagere T.q. |

# School Category

| Sl. No. | District | School Name | Postal Address | Head Master |
|---|---|---|---|---|
| 1. | Mangalore | Cancara Eng. Med. School At | ASRP street, Post Dongerkery Mangalore DK Dist-575003 | Mrs Gayathri Pai |
| 2. | Gulbarga | Govt. High School Hire Aurad | Post Aurad(B), Dist Glbarga-585316 Belgum | Mrs. Nayeemunissa |
| 3. | Tumkur | Govt. PU College Turuvekere | Vidya Nagar Street Post Turuvekere, Tumkur Dist. | Mr. J. Junjaiah |
| 4 | Ballary | Govt. PU College TB Dam | Post TB Dam Street Hospet Tq , Bellary Dist-583225 | Mrs. P. Sunanda |
| 5 | Bidar | Govt. High School Saigaon | Post Saigaon Tq. Bhalki, Dist Bidar-585416 | Mr. Chandrakantha Kamshetti |
| 6 | Mandya | Govt. PU College Maddur | Post Maddur Town, Mandya Dist-Pin571428 | Mrs. Sanjamma MD |
| 7 | Tumkur | Govt. High School PH Colony | Post PH Colony Tumkur Dist-572101 | Mr. Shaldr Ali Khan |

# Students Category

| | | | | | |
|---|---|---|---|---|---|
| 1 | GPUC Belthangady | BG Harish & H S Santhosh | 2 | Belthangady | DK |
| 2 | GHS Police Colony Bangalore | Geetha Priya, Mahesh & Vijyashree | 3 | Bangalore | Bangalore South |
| 3 | GPUC Koteshwara | Rakesh, Sheethal & Sushma V. | 3 | Udupi | Udupi |
| 4 | GPUC Koteshwara | Navaneetha, Amar B. Ganesh Poojari & Naresh Bhat | 4 | Udupi | Udupi |
| 5 | GHS 9th Block Jayanagar | Smareen,Usha, Salma | 3 | Bangalore | Bangalore South |
| 6 | GHS Moodshade | Thejaswani & Sukanya | 2 | Mangalore | Mysore |
| 7 | GHS 9th Block Jayanagar | Apsari M. Gouthami K. & Azra | 3 | Bangalore | Bangalore South |
| 8 | GHS Volakadu | Deekshith & Niranjan | 2 | Udupi | Udupi |
| 9 | GPUC Peenya | Deekshith C.R. Ramya A, Harish & Ranjan | 4 | Bangalore | Bangalore South |
| 10 | Murali Resi, School Sirsi | Manjunath S Bhat & Gayathri P. R. | 2 | Sirsi | UK |
| 11 | GPUC Maddur | Priyadarshini, Ramya & Poojitha | 3 | Mandya | Mandya |
| 12 | GPUC TB Dam | Anustha HB Swapana R & Suma VT | 3 | Bellary | Bellary |
| 13 | GHS Halivana | Chandrau AV & Pavan Y | 2 | Davangere | Davangere |
| 14 | GHS Makali | Vinuth ST & Shsalja GL | 2 | Bangalore | Bangalore South |



# ಶಿಕ್ಷಣದ ಕೊಪ್ಪರಿಗೆ ಕೊಪ್ಪಳ

ಮುಖಪುಟ ಲೇಖನ



ಎಂ.ಮಲ್ಲಣ್ಣ,
ಜಿಲ್ಲಾ ಉಪನಿರ್ದೇಶಕರು
ಕೊಪ್ಪಳ

## ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

ಚಕ್ರವರ್ತಿ ನೃಪತುಂಗನ ಕವಿರಾಜಮಾರ್ಗದಲ್ಲಿ ಕೊಪ್ಪಳವನ್ನು "ವಿಧಾತಾ ಮಹಾ ಕೋಪಣ ನಗರ" ಎಂದು ಜಿಲ್ಲೆಯನ್ನು ಬಣ್ಣಿಸಲಾಗಿದೆ ಕೊಪ್ಪಳದ ಗವಿಮಠ ಹಾಗೂ ಪಾಲ್ಕಿಯಲ್ಲಿ ಅಶೋಕನ ಶಿಲಾಶಾಸನಗಳು ದೊರೆತಿವೆ. ಸಾಮ್ರಾಟ ಅಶೋಕನ ಅವಧಿಯಲ್ಲಿ ಈ ಸ್ಥಳವು ಜೈನಕಾಶಿ ಎಂದು ಕರೆಯಲ್ಪಟ್ಟಿತ್ತು. ಇದು ಕಲ್ಯಾಣಿ ಚಾಲುಕ್ಯರ ಆಡಳಿತ ಕೇಂದ್ರವಾಗಿತ್ತು. ಕಲ್ಯಾಣಿ ಚಾಲುಕ್ಯರ ಆಡಳಿತದಲ್ಲಿ ಇಟಗಿಯಲ್ಲಿ 112ರಲ್ಲಿ ಕಟ್ಟಲಾದ ಮಹಾದೇವ ದೇವಾಲಯವಿದೆ. ಈ ದೇವಾಲಯವನ್ನು ಹಳೇಬೀಡಿನ ನಂತರದಲ್ಲಿ ಕಟ್ಟಲಾದ ಅತ್ಯುತ್ತಮ ದೇವಾಲಯವೆಂದು ಬಣ್ಣಿಸಲಾಗಿದೆ. ಈ ಪ್ರದೇಶವನ್ನು ವಿಜಯನಗರದ ಅರವೀಡು ವಂಶಸ್ಥರು, ಟಿಪ್ಪೂ ಸುಲ್ತಾನ್, ಮುಂತಾದವರು ಆಳಿದ್ದರು. ಇದು ಪುರಾಣದ ಕಿಷ್ಕಿಂದೆಯೇ ಆಗಿದೆ. ಇಲ್ಲಿನ ಪ್ರಾಚೀನ ಕೋಟೆಗಳು, ಪಂಪಾ ಸರೋವರ, ಶೇಷಶಾಯಿ ವಿಷ್ಣುವಿನ ದೇವಾಲಯ, ಗಗನ್‌ಮಹಲ್, ರಂಗನಾಥ ದೇಗುಲ, ಭಗ್ನ ಹಳೆಯ ಅರಮನೆಯನ್ನು ನೋಡ ಬಹುದು. ಕನಕಗಿರಿಯಲ್ಲಿ ಅಶೋಕನ ಶಾಸನಗಳು ದೊರೆತಿವೆ.

ಶಾತವಾಹನರು, ಗಂಗರು, ಹೊಯ್ಸಳರು ಹಾಗೂ ಚಾಲುಕ್ಯ ಅರಸು ಮನೆತನಗಳಿಗೆ ರಾಜಧಾನಿಯಾಗಿದ್ದ ಸ್ಥಳವಿದು. 12ನೇ ಶತಮಾನದ ಬಸವಣ್ಣನವರ ಕಾಲದಲ್ಲಿಯೂ ಸಹ ಇಂದಿನ ಗವಿಮಠವು ತುಂಬಾ ಆಕರ್ಷಣೀಯ ಸ್ಥಳವಾಗಿತ್ತು. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗುಂದಿಯು ವಿಜಯನಗರ ಅರಸರ ಪ್ರಥಮ ರಾಜಧಾನಿ ಸ್ಥಳವಾಗಿತ್ತು ಆದ್ದರಿಂದಲೇ ಇಂದಿಗೂ ಆ ಸ್ಥಳದ ಹೆಸರಿನಿಂದಲೇ ಜಿಲ್ಲಾ ಆಡಳಿತವು ಆನೆಗುಂದಿ ಉತ್ಸವವನ್ನು ಪ್ರತಿವರ್ಷವೂ ಆಚರಿಸುತ್ತಿದೆ. ಇಟಗಿ, ಕುಕನೂರ, ಮದಿನೂರ, ಇಂದ್ರಕೀಲ ಪರ್ವತ, ಕನಕಗಿರಿ, ಪುರಾ, ಚಿಕ್ಕಬೆನಕಲ, ಹಿರೆಬೆನಕಲ, ಮತ್ತು ಹುಲಿಗಿ ಎಂಬ ಐತಿಹಾಸಿಕ ಸ್ಥಳಗಳು ಪ್ರಸಿದ್ಧವಾಗಿವೆ.

ಸ್ವಾತಂತ್ರ್ಯದ ಪೂರ್ವದಲ್ಲಿ ಕೊಪ್ಪಳವು ಹೈದರಾಬಾದ ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ದೇಶವು 15-8-1947ರಲ್ಲಿ ಸ್ವತಂತ್ರವಾದರೂ ಸಹ ಕೊಪ್ಪಳ ಜಿಲ್ಲಾ ಭಾಗವು ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು. ಈ ಭಾಗದ ಜನತೆ, ಸಮುದಾಯ, ಸಂಘಟನೆಗಳು ಮತ್ತೆ ಹೋರಾಟ ನಡೆಸಬೇಕಾಗಿ ಬಂತು. ಹೋರಾಟದ ಫಲವಾಗಿ ದಿನಾಂಕ: 18-9-1948ರಲ್ಲಿ ನಿಜಾಮರ ಆಳ್ವಿಕೆಯಿಂದ ಮುಕ್ತವಾಗಿ ಹೈದರಾಬಾದ್ ಕರ್ನಾಟಕವೆಂದು ಸ್ವತಂತ್ರವಾಗಿ ಆಳ್ವಿಕೆಯು ಸಾಗಿತು. ಅಂದಿನಿಂದ ದಿನಾಂಕ 1-4-1998 ರವರೆಗೆ ರಾಯಚೂರು ಜಿಲ್ಲೆಯ ಒಂದು





ಇಟಗಿ ದೇವಾಲಯ

ತಾಲ್ಲೂಕು ಭಾಗವಾಗಿ ಕಾರ್ಯನಿರ್ವಹಿಸಿ 1998ರಲ್ಲಿ ಸ್ವತಂತ್ರ ಜಿಲ್ಲೆ ರಚನೆಯಾಗಿ ಕೊಪ್ಪಳ, ಗಂಗಾವತಿ, ಕುಷ್ಟಗಿ ಹಾಗೂ ಯಲಬುರ್ಗಾ ಎಂಬ 4 ಕಂದಾಯ ತಾಲ್ಲೂಕುಗಳನ್ನು ಒಳಗೊಂಡಿದೆ.

## ಜಿಲ್ಲೆಯ ಭೌಗೋಳಿಕ ಪರಿಚಯ :

ಹೊಸದಾಗಿ ರಚನೆಗೊಂಡ ಜಿಲ್ಲೆಯು 4 ತಾಲ್ಲೂಕುಗಳನ್ನು, 20 ಹೋಬಳಿಗಳನ್ನು, 596 ಗ್ರಾಮವಸತಿಗಳು, 41 ಜನವಸತಿಗಳು 1 ನಗರಸಭೆ, 3 ಪುರಸಭೆಗಳು ಹಾಗೂ 134 ಗ್ರಾಮ ಪಂಚಾಯತಿಗಳನ್ನು ಹೊಂದಿದೆ. ಜಿಲ್ಲೆ 5559 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು ಜಿಲ್ಲೆಯಲ್ಲಿಯ ಜನಸಂಖ್ಯೆ 1193496 ಇದ್ದಾರೆ. 1000 ಪುರುಷರಿಗೆ 982 ಹೆಣ್ಣು ಮಕ್ಕಳಿದ್ದು ಲಿಂಗ ಅಂತರವನ್ನು ಹೊಂದಿದೆ. ಜಿಲ್ಲೆಯ ಸಾಕ್ಷರತೆ ಗ್ರಾಮೀಣ ಗಂಡು:68.67 ಹೆಣ್ಣು : 39.12 ನಗರ : ಗಂಡು : 80.75, ಹೆಣ್ಣು : 74.70 ಒಟ್ಟು ಸಾಕ್ಷರತೆ : ಗಂಡು: 74.70 ಹೆಣ್ಣು : 50.08 ಇರುವುದು. ಜಿಲ್ಲೆಯ 552495 ಹೆಕ್ಟೇರ್ ಭೂಮಿಯಲ್ಲಿ 29451 ಹೆಕ್ಟೇರ್ ಭೂಮಿಯ ಅರಣ್ಯ ಪ್ರದೇಶವಿದೆ. 55497 ಹೆಕ್ಟೇರ್ ಭೂಮಿ ಸಾಗುವಳಿಗೆ ಯೋಗ್ಯವಾಗಿಲ್ಲ. 396627 ಹೆಕ್ಟೇರ್ ಭೂಮಿಯ ಸಾಗುವಳಿಗೆ ಯೋಗ್ಯವಾಗಿದೆ. ಈ ಜಿಲ್ಲೆಯ ಪೂರ್ವಕ್ಕೆ ರಾಯಚೂರ ಜಿಲ್ಲೆ ಪಶ್ಚಿಮಕ್ಕೆ ಗದಗ ಜಿಲ್ಲೆ, ಉತ್ತರಕ್ಕೆ ಬಾಗಲಕೋಟೆ ಜಿಲ್ಲೆ ಹಾಗೂ ದಕ್ಷಿಣಕ್ಕೆ ಬಳ್ಳಾರಿ ಜಿಲ್ಲೆಗಳು ಸುತ್ತುವರಿದಿವೆ. ಜಿಲ್ಲಾ ಸ್ಥಳಕ್ಕೆ ಅತೀ ಹತ್ತಿರವಾಗಿ ವಿಶ್ವಪರಂಪರೆಯ ಹಂಪಿ ಇರುವುದು. ಜಿಲ್ಲೆಯ ಪ್ರಮುಖ ನದಿಗಳು ತುಂಗಾ ಮತ್ತು ಭದ್ರಾ ನದಿಗಳು ತುಂಗಭದ್ರಾ ಒಂದೆಡೆ ಸೇರಿ ಹಿರಿದಾದ ನದಿಯಾಗಿದೆ. ಜಿಲ್ಲೆಯಲ್ಲಿ ಒಣ ಹಾಗೂ ಶುಷ್ಕ ಹವೆಯನ್ನು ಹೊಂದಿರುತ್ತದೆ.

## ಜಿಲ್ಲೆಯ ಶೈಕ್ಷಣಿಕ ಪರಿಚಯ :

ಜಿಲ್ಲೆಯು ಐತಿಹಾಸಿಕವಾಗಿ ಶ್ರೀಮಂತವಾಗಿರುವಂತೆ ಶೈಕ್ಷಣಿಕ ವಾಗಿಯೂ ಉನ್ನತಿಯಲ್ಲಿದೆ. 1090 ಪ್ರಾಥಮಿಕ ಶಾಲೆಗಳು, 180 ಪ್ರೌಢ ಶಾಲೆಗಳು, 7 ಪದವಿ ಕಾಲೇಜುಗಳು 1 ಆಯುರ್ವೇದಿಕ ಮೆಡಿಕಲ್ ಕಾಲೇಜು, 3 ಪಾಲಿಟೆಕ್ನಿಕ್ ಕಾಲೇಜುಗಳು,

86 ಲೈಬ್ರರಿಗಳು, 1 ನವೋದಯ ವಿದ್ಯಾಲಯ (ಕುಕನೂರ) ಹಾಗೂ 1 ಡಯಟ್ ಸಂಸ್ಥೆ 4 ಡಿ.ಇಡಿ., ಬಿ.ಇಡಿ ಸಂಸ್ಥೆಗಳು ಇವೆ.

ಜಿಲ್ಲೆಯ 2007ನೇ ಸಾಲಿನ ಎಸ್.ಎಸ್.ಎಲ್.ಸಿ. ಫಲಿತಾಂಶದ ವಿವರ : ಪರೀಕ್ಷೆಗೆ ಕುಳಿತ ಬಾಲಕರು : 6965, ಬಾಲಕಿಯರು : 5260 ಒಟ್ಟು : 12125 ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಾಲಕರು: 4754, ಬಾಲಕಿಯರು: 3458, ಒಟ್ಟು : 8212. ಒಟ್ಟು ಶೇಕಡಾ ಜಿಲ್ಲಾ ಫಲಿತಾಂಶ ಶೇ. 65.12, ರಾಜ್ಯಕ್ಕೆ 29 ನೇ ಸ್ಥಾನವನ್ನು ಗಳಿಸಿದೆ.

### 2007ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 100 ರಷ್ಟು ಫಲಿತಾಂಶವನ್ನು ಸಾಧಿಸಿದ ಶಾಲೆಗಳು :

ಶ್ರೀ ಸಿದ್ಧರಾಮೇಶ್ವರ ಪ್ರೌಢ ಶಾಲೆ, ಯಲಬುರ್ಗಾ, ತಾಲ್ಲೂಕು ಯಲಬುರ್ಗಾ, ಲಯನ್ಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಗಂಗಾವತಿ, ತಾಲ್ಲೂಕು: ಗಂಗಾವತಿ, ಹೆಚ್. ಜಿ. ರಾಮುಲು ಪ್ರೌಢ ಶಾಲೆ, ಅಂಜೂರಿ ಕ್ಯಾಂಪ್, ಗಂಗಾವತಿ, ತಾಲ್ಲೂಕು : ಗಂಗಾವತಿ, ಕ್ರೈಸ್ತದ ಕಿಂಗ್ ಪ್ರೌಢ ಶಾಲೆ, ಕುಷ್ಟಗಿ, ತಾಲ್ಲೂಕು: ಕುಷ್ಟಗಿ, ಸರಕಾರಿ ಪ್ರೌಢ ಶಾಲೆ, ಮುನ್ನೆರಾಳ, ತಾಲ್ಲೂಕು : ಕುಷ್ಟಗಿ, ಸರಕಾರಿ ಪ್ರೌಢ ಶಾಲೆ, ನಮಹಳ್ಳಿ, ತಾಲ್ಲೂಕು: ಕುಷ್ಟಗಿ, ಕೂಡಲಸಂಗಮನಾಥ ಪ್ರೌಢ ಶಾಲೆ, ಕಣಗೇರಿ, ತಾಲ್ಲೂಕು ಕೊಪ್ಪಳ.

### ಜಿಲ್ಲೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಹಾಕಿಕೊಂಡಿರುವ ವಿಶೇಷ ಕಾರ್ಯಕ್ರಮಗಳು :

**1) ಅಂದ – ಚಂದ ಕಾರ್ಯಕ್ರಮಗಳು** : ಈ ಕಾರ್ಯಕ್ರಮದ ಹರಿಕಾರರು ಕೊಪ್ಪಳ ಜಿಲ್ಲೆಯವರು ಸದರಿ ಕಾರ್ಯಕ್ರಮದಡಿಯಲ್ಲಿ ಶಾಲೆಯು ಗ್ರಾಮದ ಜನರಿಗೆ ಆಕರ್ಷಣೆಯನ್ನುಂಟು ಮಾಡಬೇಕು. ಜನಸಾಮಾನ್ಯರು ಶಾಲೆಯನ್ನು ನೋಡಲು ಬರಬೇಕು. ಇಂಥ



ಶಾಲೆಯಲ್ಲಿ ನಮ್ಮ ಮಗುವು ಕಲಿಯಲಿ ಎಂಬ ಹಂಬಲ ಉಂಟಾಗಿ ಮಗುವನ್ನು ದಾಖಲಿಸುವ ಹಾಗೂ ನಿತ್ಯವೂ ಶಾಲೆಗೆ ಕಡ್ಡಾಯವಾಗಿ ಕಳಿಸುವಂತೆ ಮಾಡಲಿ ಎಂಬ ಸದುದ್ದೇಶದಿಂದ ಪ್ರಾರಂಭವಾಗಿ ಕುಷ್ಟಗಿ ತಾಲ್ಲೂಕಿನ ಎಲ್ಲ ಪ್ರಾಥಮಿಕ ಶಾಲೆಗಳು 4–5 ತಿಂಗಳಲ್ಲಿ ಮದುವೆ ಮನೆಯು ಶೃಂಗರಿಸಿಕೊಳ್ಳುವಂತೆ ಶೃಂಗಾರಗೊಂಡವು. ಶಾಲೆಯ ಹೊರಗೋಡೆ, ಒಳಗೋಡೆಗಳಿಗೆ ಕಂಬಗಳಿಗೆ, ಕಂಪೌಂಡ್ ಗೋಡೆಗಳಿಗೂಸ ಪಠ್ಯಕ್ಕೆ ಸಂಬಂಧಿಸಿದ (ಭಾಷೆ, ಗಣಿತ, ವಿಜ್ಞಾನ) ಪ.ಅ) ಹಾಗೂ ಪೂರಕವಾಗುವ ವಿಷಯ ಜ್ಞಾನದ ಅಂಶಗಳನ್ನು, ಪಠ್ಯಪೂರಕ ಚಿತ್ರಗಳನ್ನು, ನಕಾಶೆ, ದೇಶಪ್ರೇಮ ಬೆಳೆಸುವ ರಾಷ್ಟ್ರ ಚಿಹ್ನೆಗಳನ್ನು ಎಲ್ಲೆಡೆ ಚಿತ್ರಿಸಲಾಯಿತು. ರಾಜ್ಯದಾದ್ಯಂತ ಈ ಕಾರ್ಯಕ್ರಮವು ಸಾರ್ವತ್ರಿಕವಾಯಿತು.

**2) ಕಂದ ಮಕರಂದ** : ಈ ಕಾರ್ಯಕ್ರಮವು ಸಹ ಆರಂಭದಲ್ಲಿ ಕುಷ್ಟಗಿ ತಾಲೂಕಿನಿಂದಲೇ ಪ್ರಾರಂಭವಾಯಿತು. ಮನೆಗೊಂದು ಕಂದ ಬೇಕು. ಶಾಲೆಗೊಂದು ತೋಟ (ಮಕರಂದ) ಇರಬೇಕು ಎಂಬ ತತ್ವವನ್ನು ಇಲ್ಲಿ ಅಳವಡಿಸಲಾಯಿತು. ಪ್ರತಿ ಸರಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಕಡ್ಡಾಯವಾಗಿ ಒಂದು ಚಿಕ್ಕ ತೋಟವನ್ನು ಮಾಡುವುದು.

**ಸರ್ಕಾರಿ :**

**ಕಿ.ಪ್ರಾ.–477, ಹಿ.ಪ್ರಾ – 432, ಒಟ್ಟು – 909, ಪ್ರೌಢ – 91, ಸಂ.ಪ.ಪೂ.ಕಾಲೇಜುಗಳು – 19, ಒಟ್ಟು 110,**

**ಅನುದಾನಿತ:**

**ಕಿ.ಪ್ರಾ – 02, ಹಿ.ಪ್ರಾ – 07, ಒಟ್ಟು – 09, ಪ್ರೌಢ – 16, ಸಂ.ಪ.ಪೂ.ಕಾಲೇಜುಗಳು – 07, ಒಟ್ಟು – 23**


**ಅನುದಾನ ರಹಿತ :**

**ಕಿ.ಪ್ರಾ – 113, ಹಿ.ಪ್ರಾ – 59, ಒಟ್ಟು – 172, ಪ್ರೌಢ – 153, ಸಂ.ಪ.ಪೂ. ಕಾಲೇಜುಗಳು – 27, ಒಟ್ಟು – 180**

| | ಪ್ರಾಥಮಿಕ | ಪ್ರೌಢ |
|---|---|---|
| ಶಿಕ್ಷಕರು : | 4884, | 1190, |
| ಮಕ್ಕಳು | ಗಂಡು – 11,4795, | 24,440 |
| | ಹೆಣ್ಣು – 99,231 | 17500 |
| | ಒಟ್ಟು : 2,14,026 | 41,940 |

**ಮ ಉ ಯೋಜನೆ : ಅಡುಗೆ ಕೇಂದ್ರಗಳ ಸಂಖ್ಯೆ : 779**

**ಫಲಾನುಭವಿಗಳ ಸಂಖ್ಯೆ : 255966**




ಸಮುದಾಯ ಮತ್ತು ಶಿಕ್ಷಕರು ಕೈಜೋಡಿಸಿದರೆ ಶಾಲೆ ನಂದನವನ ಆಗಲು ಸಾಧ್ಯ ಎನ್ನುವುದಕ್ಕೆ ಕುಷ್ಟಗಿ ತಾಲೂಕಿನ ಗರ್ಜನಾಳ ಶಾಲೆಯ ಅಭಿವೃದ್ಧಿ ಸಾಕ್ಷಿಯಾಗಿದೆ. ವಿಶಾಲವಾದ ಎರಡು ಎಕರೆ ಪ್ರದೇಶ ದಲ್ಲಿರುವ ಈ ಶಾಲೆ, ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡು ವಷ್ಟು ಹಸಿರನ್ನು ಮೈಗೂಡಿಸಿಕೊಂಡಿದೆ. ಪ್ರದೇಶದ ಒಂದಿಂಚು ಜಾಗವೂ ನಿರುಪಯುಕ್ತವಾಗದಂತೆ ಶಾಲೆಯ ಸಿಬ್ಬಂದಿ ಕಾಳಜಿ ವಹಿಸಿದೆ. ಶಾಲೆಯ ಮುಂದಿನ ಹಸಿರು ಉದ್ಯಾನದಲ್ಲಿ ವಿವಿಧ ಮರಗಳು, ಪ್ರಾರ್ಥನೆ ಮತ್ತು ಬಿಸಿಯೂಟ ವಿತರಿಸಲು ಬಳಸುವ ಜಾಗೆಗೆ ಡಾಂಬರೀಕರಣ, ಸುಸಜ್ಜಿತ ಮೈದಾನ, ಮಕ್ಕಳಿಗೆ ಎರೆ ಹುಳು ಬಗ್ಗೆ ಮಾಹಿತಿ ನೀಡುವ ಕೇಂದ್ರ ಇವೆಲ್ಲಾ ಒಂದೇ ಆವರಣದಲ್ಲಿವೆ ಎಂದು ವಿವರಿಸುತ್ತಾರೆ, ಶಾಲೆಯ ಅಂದ ಚಂದಕ್ಕೆ ಕಾರಣರಾದ ಮುಖ್ಯಗುರು ಮಲ್ಲಿಕಾರ್ಜುನ ಇಲಕಲ್ಲರವರು.

"ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎನ್ನುವಂತೆ ಇಂದು ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ತೀವ್ರಗತಿಯಲ್ಲಿ ಪ್ರಗತಿ ಸಾಧಿಸುತ್ತ ಸಾಗಿರುವದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಹಿರೇಅರಳಿಹಳ್ಳಿ ಗ್ರಾಮದಲ್ಲಿರುವ ಸರಕಾರಿ ಪದವಿ ಪೂರ್ವ ಕಾಲೇಜು. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ ಅತಿ ಹಿಂದುಳಿದ ಒಂದು ಪುಟ್ಟ ಗ್ರಾಮ ಹಿರೇಅರಳಿಹಳ್ಳಿ, ಈ ಗ್ರಾಮದಲ್ಲಿ 1984ರಲ್ಲಿ ಕೇವಲ 15 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಸರಕಾರಿ ಪ್ರೌಢ ಶಾಲೆ ಇಂದು ಸುಮಾರು 434 ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವದು ಶಿಕ್ಷಣ ಪ್ರೇಮಿಗಳು ಹೆಮ್ಮೆ ಪಡುವ ವಿಷಯ ಎಂದು ಹೇಳಬಹುದು.



ಹಿರೇಅರಳಿಹಳ್ಳಿ ಸರಕಾರಿ ಪದವಿ ಪೂರ್ವ ಕಾಲೇಜು

ವರದಿ : ಎನ್. ಎಚ್. ನಾಗೂರ
ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಛೇರಿ, ಬಾಗಲಕೋಟ.




ಎಸ್.ಆರ್. ಮಠಪತಿ
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಯಲಬುರ್ಗಾ



ಉಮೇಶ್
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಷ್ಟಗಿ



ಬಿ.ಕೆ.ಎಸ್.ವರ್ಧನ್
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊಪ್ಪಳ



ಎನ್. ಎಚ್. ನಾಗೂರ, ಶಿಕ್ಷಣ ವಾರ್ತೆಯ ನಿರಂತರ ಲೇಖಕರ ಬಳಗದಲ್ಲಿ ಒಬ್ಬರು. ಶಿಕ್ಷಕರಿಗಾಗಿ ಅತ್ಯುಪಯುಕ್ತ ಮಾಹಿತಿಗಳನ್ನು ನೀಡುತ್ತಾ ಬಂದಿರುವ ನಾಗೂರರವರು ಬಾಗಲಕೋಟೆಯ ಜಿಲ್ಲಾ ಉಪನಿರ್ದೇಶಕರು ಸಾ.ಶಿ.ಇ. ಇವರ ಕಛೇರಿಯಲ್ಲಿ ಶಿಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ಕಟ ಸಾಹಿತ್ಯಾಭಿಮಾನಿಯಷ್ಟೇ ಅಲ್ಲ, ಶೈಕ್ಷಣಿಕ ವಿವರಗಳನ್ನು ಸಚಿತ್ರವಾಗಿ ಉತ್ಸಾಹದಿಂದ, ಶ್ರದ್ಧಾಸಕ್ತಿಗಳಿಂದ ನೀಡುತ್ತಿದ್ದಾರೆ. ಬಾಗಲಕೋಟೆ, ವಿಜಾಪುರ, ಗದಗ, ಕೊಪ್ಪಳ ಜಿಲ್ಲೆಗಳ ಶೈಕ್ಷಣಿಕ ಮಾಹಿತಿಗಳನ್ನು 'ಶಿಕ್ಷಣವಾರ್ತೆ'ಯ ಮನವಿಯ ಮೇರೆಗೆ ತಮ್ಮ ಕರ್ತವ್ಯದ ನಡುವೆಯೂ ಬಿಡುವು ಮಾಡಿಕೊಂಡು ಅಪಾರ ಶ್ರಮವಹಿಸಿ, ಸಂಗ್ರಹಿಸಿ, ಯಾವುದೇ ಉತ್ಪ್ರೇಕ್ಷೆಗಳಿಲ್ಲದಂತೆ ನೀಡಿರುವುದು ಸುಲಭಸಾಧ್ಯದ ವಿಚಾರವಲ್ಲ, ಉತ್ತರ ಕರ್ನಾಟಕದ ಇನ್ನುಳಿದ ಜಿಲ್ಲೆಗಳ ಮಾಹಿತಿಗಳನ್ನು ನೀಡುವಂತೆ ಅವರನ್ನು ಕೋರಿದ್ದೇವೆ. ಅವರಿಗೆ ಮಾಹಿತಿ ನೀಡಿ ಸಹಕರಿಸುವಂತೆ ಆಯಾ ಜಿಲ್ಲೆಯ ಉಪನಿರ್ದೇಶಕರಲ್ಲಿ ಮನವಿ. ಬೇರೆ ಬೇರೆ ಪತ್ರಿಕೆಗಳಿಗೂ ಲೇಖನಗಳನ್ನು ಬರೆಯುವ ಹವ್ಯಾಸ ವಿರುವ ನಾಗೂರರು ಒಬ್ಬ ಉತ್ತಮ ಲೇಖಕರು. ಶಿಕ್ಷಣವಾರ್ತೆಯಂಥ ಇಲಾಖಾ ಪತ್ರಿಕೆಗೆ ಇಂಥ ಲೇಖಕರು ಪ್ರಸ್ತುತವಾಗುತ್ತಾರೆ, ಇತರರಿಗೆ ಮಾದರಿಯಾಗುತ್ತಾರೆ, ಇವರಿಗೆ ಧನ್ಯವಾದಗಳು.

– ಸಂ.



ದಿನಾಂಕ : 10-6-2007ರಂದು ಮಾನ್ಯ ಶಿಕ್ಷಣ ಸಚಿವರಾದ ಬಸವರಾಜ್ ಎಸ್.ಹೊರಟ್ಟಿಯವರಿಂದ ಶಾಲಾ ಕಟ್ಟಡದ ಉದ್ಘಾಟನೆ.

## ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಯಜಮಾನ ಶ್ರೀ ಗೂಳಪ್ಪ ಫ. ಉಪನಾಳ ರಾಮಗಿರಿಯ ಸರ್ಕಾರಿ ಪ್ರೌಢಶಾಲೆ ಸಮುದಾಯ ಮತ್ತು ಶಿಕ್ಷಕರ ಶಿಕ್ಷಣ ಪ್ರೇಮಕ್ಕೆ ಶ್ರೇಷ್ಠ ಉದಾಹರಣೆ

ಸನ್ 1994-95ನೇ ಸಾಲಿನಲ್ಲಿ ರಾಮಗಿರಿ, ಸರಕಾರಿ ಪ್ರೌಢ ಶಾಲೆ ಸ್ಥಾಪನೆಯಾಯಿತು. ಕೇವಲ 19 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯು ಇಂದು 335 ವಿದ್ಯಾರ್ಥಿಗಳು ಶಾಲೆಯಲ್ಲಿ ಅಧ್ಯಯನದಲ್ಲಿ ತೊಡಗಿದ್ದಾರೆ. 1994-95ನೇ ಸಾಲಿನಲ್ಲಿ ಶಾಲೆಯು ಪ್ರಾರಂಭವಾದರೂ ಶಾಲೆ ಅನೇಕ ಮೂಲಭೂತ ಅವಶ್ಯಕತೆಗಳನ್ನು ಹೊಂದಿರಲಿಲ್ಲ.

ಈ ಶಾಲೆಗೆ ಸ್ವಂತ ಕಟ್ಟಡವು ಸಹ ಇರಲಿಲ್ಲ. 1994-95ರಿಂದ 2006-07ನೇ ಸಾಲಿನವರೆಗೆ ಸ್ಥಳೀಯ ಹಿರಿಯ ಪ್ರಾಥಮಿಕ ಶಾಲೆಯ 3 ಕೊಠಡಿಗಳಲ್ಲಿ ನಡೆಯುತ್ತಿತ್ತು. ವಿದ್ಯಾರ್ಥಿಗಳಿಗೆ ಇದರಿಂದ ಕಲಿಕಾ ವಾತಾವರಣ, ಪ್ರಯೋಗಾಲಯ ಸೌಲಭ್ಯ, ಕಂಪ್ಯೂಟರ್ ಸೌಲಭ್ಯ, ಕ್ರೀಡಾ ಸೌಲಭ್ಯ, ಗ್ರಂಥಾಲಯ ಸೌಲಭ್ಯ ಸಮರ್ಪಕವಾಗಿ ದೊರೆಯುತ್ತಿರಲಿಲ್ಲ.

ಇಂತಹ ಒಂದು ಸಂದರ್ಭದಲ್ಲಿ 2005-06ನೇ ಸಾಲಿನಿಂದ ಪ್ರಗತಿಯ ಹೆಜ್ಜೆಗಳು ಮೂಡಲಾರಂಭಿಸಿದವು. ಊರ ಹಿರಿಯರು ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರು ಶಿಕ್ಷಣ ಪ್ರೇಮಿಗಳ ಪ್ರಯತ್ನದಿಂದ ಶಾಲಾ ಕಟ್ಟಡದ ನಿರ್ಮಾಣಕ್ಕೆ ಅವಶ್ಯವಿರುವಂತಹ ನಿವೇಶನದ ಹುಡುಕಾಟ ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ ಲಕ್ಷ್ಮೇಶ್ವರದ ಶಿಕ್ಷಣಾಭಿಮಾನಿಗಳಾದ ಬಸಣ್ಣ ಗೂಳಪ್ಪ ಉಪನಾಳ ಇವರು 38 ಗುಂಟೆ ಬಿನ್ನಶೇತಕಿ ಜಮೀನನ್ನು (ಸುಮಾರು 3 ಲಕ್ಷ 80 ಸಾವಿರ ಮೌಲ್ಯದ) ಶಾಲೆಗೆ ದಾನವಾಗಿ ನೀಡಿದರು.

### ಶಾಲಾ ಕಟ್ಟಡದ ನಿರ್ಮಾಣ :

ಶಾಲೆಗೆ ಅವಶ್ಯವಾಗಿ ಕಟ್ಟಡದ ಕೊರತೆ ಇದ್ದು ಇದನ್ನು ಹೋಗಲಾಡಿಸಲು 2005-06ನೇ ಸಾಲಿನಲ್ಲಿ ಆರ್.ಆಯ್.ಡಿ. ಎಫ್. 10 ರ ಅಡಿಯಲ್ಲಿ 2 ಕೊಠಡಿಗಳು ಮಂಜೂರಾಗಿ 3 ಲಕ್ಷ 80 ಲಕ್ಷ ಸಾವಿರ ರೂ.ಗಳು ಎಸ್.ಡಿ.ಎಂ.ಸಿ. ಯ ಖಾತೆಗೆ ಜಮೆಯಾಯಿತು. ಕಟ್ಟಡ ನಿರ್ಮಾಣದ ಕುರಿತು ಸಭೆಯನ್ನು ಕರೆದಾಗ ಮಾನ್ಯ ಶಾಸಕರು 2 ಕೊಠಡಿಗಳು ಶಾಲೆಯ ಅವಶ್ಯಕತೆಯನ್ನು ಪೂರೈಸುವುದಿಲ್ಲ. ಇನ್ನೂ ಮೂರು ಕೊಠಡಿಗಳಾದರೂ ಬೇಕಾಗುತ್ತವೆ ಎಂದು ಮಾರ್ಚ್ 2006 ರಲ್ಲಿ ಯೋಜನೇತರ ಅಡಿಯಲ್ಲಿ 3 ಕೊಠಡಿಗಳನ್ನು ಮಂಜೂರು ಮಾಡಿಸಿದರು. ಒಟ್ಟು 5 ಕೊಠಡಿಯ ಕಾಮಗಾರಿಗೆ ಶಿಲಾನ್ಯಾಸ ಮಾಡಲಾಯಿತು.

### ಶಾಲಾ ಕಟ್ಟಡದ ಪ್ರಗತಿ :

ಶಾಲಾ ಕೊಠಡಿಯ ನಿರ್ಮಾಣದಲ್ಲಿ ಪೂರ್ಣವಾಗಿ ಎಸ್.ಡಿ.ಎಂ.ಸಿ. ಮತ್ತು ಮುಖ್ಯೋಪಾಧ್ಯಾಯರಿಗೆ ಅಧಿಕಾರವನ್ನು ನೀಡಲಾಯಿತು. ಇದಲ್ಲದೇ ಶಾಸಕರೂ ಕೂಡಾ ಒಂದು ಉತ್ತಮ ಮಾದರಿ ಶಾಲಾ ಕಟ್ಟಡ ನಿರ್ಮಾಣವಾಗಬೇಕೆಂದು ಆಶಯ ವ್ಯಕ್ತಪಡಿಸಿದರು. ಇಂತಹ ಒಂದು ಸಂದರ್ಭದಲ್ಲಿ ಅದೇ ಊರಿನ ಇಂಜೀನಿಯರ್‌ರಾದ ಗೂಳಪ್ಪ ಚ. ಲಿಂಗಶೆಟ್ಟಿ ಇವರು ಉಚಿತವಾಗಿ ಕಟ್ಟಡದ ನೀಲನಕ್ಷೆ ಮತ್ತು ಕಟ್ಟಡದ ಪ್ರಾರಂಭದಿಂದ ಮುಗಿಯುವವರೆಗೂ ಉಚಿತವಾಗಿ ಮಾರ್ಗದರ್ಶನ ವನ್ನು ನೀಡಿ ಸುಂದರ ಶಾಲಾ ಕಟ್ಟಡದ ನಿರ್ಮಾಣಕ್ಕೆ ಕಾರಣೀ ಭೂತರಾದರು. ಶಾಲಾ ಕಟ್ಟಡದ ನಿರ್ಮಾಣದಲ್ಲಿ ಅದೇ ಊರಿನ ಸೋಮಣ್ಣ ಬೆಟಗೇರಿ, ಶಂಕ್ರಣ್ಣ ಕಾಳೆ, ಸಬ್ ಇನಸ್ಪೆಕ್ಟರ್‌ರಾದಂತಹ ಶಂಕರಗೌಡ ಪಾಟೀಲ ಶಾಲಾ ಕಟ್ಟಡದ ನಿರ್ಮಾಣಕ್ಕೆ ಬೇಕಾದ ವಸ್ತುಗಳ ಖರೀದಿಯಲ್ಲಿ ಸಹಾಯ ಮಾಡಿದರು.

### ನೀಲ ನಕ್ಷೆ ತಯಾರಿಕೆ :

ಶಾಲಾ ಕಟ್ಟಡ ಅತ್ಯಂತ ಸುಂದರವಾಗಿರಬೇಕು ಮತ್ತು ರಾಜ್ಯಕ್ಕೆ ಮಾದರಿಯಾಗಿರಬೇಕು ಎಂಬ ಶಾಸಕರ ಆಶಯ ಎಸ್.ಡಿ.ಎಂ.ಸಿ. ಯವರ ಆಶಯಕ್ಕೆ ಪೂರಕವಾಗಿ ಅದೇ ಊರಿನ ಇಂಜಿನಿಯರ್ ಆದ ಗೂಳಪ್ಪ ಚ. ಲಿಂಗಶೆಟ್ಟಿ ಇವರು ಶಾಲಾ ಕಟ್ಟಡದ ನೀಲ ನಕ್ಷೆ ಯೋಜನೆಯನ್ನು ತಯಾರಿಸಿ ಶಾಲಾ ಕಟ್ಟಡದ ಪ್ರಾರಂಭದಿಂದ ಅಂತ್ಯದವರೆಗೂ ಉಚಿತವಾಗಿ ಸೇವೆಯನ್ನು ಸಲ್ಲಿಸಿದರು.

### ಸಮುದಾಯದ ಸಹಕಾರ :

ಶಾಲಾ ಕಟ್ಟಡದ ನಿರ್ಮಾಣದಲ್ಲಿ ಸಮುದಾಯದವರೂ ಕೂಡಾ ಸಕ್ರಿಯವಾಗಿ ಪಾಲ್ಗೊಂಡರು. ಪ್ರತಿಯೊಂದು ಹಂತದಲ್ಲಿಯೂ ಕೂಡಾ ಸಮುದಾಯದ ಸಲಹೆಗಳನ್ನು ಪಡೆದು ಕಟ್ಟಡದ ನಿರ್ಮಾಣವನ್ನು ಪೂರೈಸಲಾಯಿತು. ಕಟ್ಟಡದ ಸ್ಲ್ಯಾಬ್ ಹಂತದಲ್ಲಿ ರಾತ್ರಿ 10.30 ರ ವರೆಗೆ ಊರಿನ ಹಿರಿಯರು ಪಾಲ್ಗೊಂಡರು. ಇದಲ್ಲದೇ ಅದೇ ಊರಿನ ಸಬ್ ಇನಸ್ಪೆಕ್ಟರ್‌ರಾದ ಶಂಕರಗೌಡ ವಿ. ಪಾಟೀಲ ಗುಲ್ಬರ್ಗ ಜಿಲ್ಲೆ ಸೇಡಂದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸದರಿಯವರನ್ನು ಶಾಲಾ ಕಟ್ಟಡದ ಫ್ಲೋರಿಂಗ್‌ಗೆ ಅವಶ್ಯಕವಾದ ಪಾಲಿಶ್ ಕಲ್ಲುಗಳನ್ನು ಸೇಡಂನಿಂದ ಅತ್ಯಂತ ಕಡಿಮೆ ದರದಲ್ಲಿ ಶಾಲೆಗೆ ದೊರಕಿಸಿ ಕೊಟ್ಟರು.

ಪುಟ19ಕ್ಕೆ...





## ವಾಘಾ ಗಡಿಯಲ್ಲಿ ಸ್ವಾತಂತ್ರ್ಯೋತ್ಸವ ಸಂಭ್ರಮ

ಆಗಸ್ಟ್ 14, 2007ರ ಸಂಜೆ ಆತುರಾತುರವಾಗಿ ಪಂಜಾಬಿನ ಅಮೃತಸರದಿಂದ 20 ಕಿ.ಮೀ. ದೂರದಲ್ಲಿರುವ ಭಾರತ–ಪಾಕಿಸ್ತಾನ ಗಡಿ– ವಾಘಾ ಸರಹದ್ದಿನತ್ತ ನಮ್ಮ ಪ್ರಯಾಣ. ಈ ಗಡಿಗ್ರಾಮದಲ್ಲಿ ಎರಡೂ ದೇಶಗಳ ಧ್ವಜಗಳನ್ನು ಬೆಳಿಗ್ಗೆ 6.00ಕ್ಕೆ ಆರೋಹಣ ಮತ್ತು ಸಂಜೆ 5.30ಕ್ಕೆ ಅವರೋಹಣ ಪ್ರತಿನಿತ್ಯದ ರೋಮಾಂಚನಕಾರೀ ಕಾರ್ಯಕ್ರಮವಾಗಿದ್ದು, ಇದನ್ನು ನೋಡಲು ಸಾವಿರಾರು ಜನ ಎರಡೂ ಕಡೆ ಜಮಾಯಿಸುತ್ತಾರೆ. ನಾವು ಹೋದಾಗ ಆಗಲೇ 5.00 ಘಂಟೆ, ಸ್ವಾತಂತ್ರ್ಯೋತ್ಸವದ ಸಂಭ್ರಮ ಅಂದಿನ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತ್ತು. ಸೈನಿಕ ಬಂದೋಬಸ್ತಿನಲ್ಲಿ ನಿರ್ದಿಷ್ಟ ಗಮ್ಯ ಸ್ಥಾನಕ್ಕೆ ನಾವು ಜನಸಾಗರದೊಂದಿಗೆ ಸಾಗುವ ಸಮಯದಲ್ಲಿ ಪಾಕಿಸ್ತಾನ ಗಡಿಯಲ್ಲಿ ಜಮಾಯಿಸಿದ್ದ ಸಾವಿರಾರು ಜನರಿಂದ ಹರ್ಷೋದ್ಗಾರ, ಕೈಬೀಸುವ ದೃಶ್ಯ ರೋಮಾಂಚನವನ್ನಷ್ಟೆ ಅಲ್ಲ, ಕಣ್ಣಲ್ಲಿ ದುಃಖ, ಆನಂದದ ಅಶ್ರುಪೂರವನ್ನೇ ಹರಿಸಿತು. ಈ ಭಾವೋದ್ರೇಕಕ್ಕೆ ಒಳಗಾಗದವರೇ ಇಲ್ಲ. ಕಾರ್ಯಕ್ರಮ ವೀಕ್ಷಿಸುವ ಸಲುವಾಗಿ ಎರಡೂ ಕಡೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಗಡಿಯ ಮಧ್ಯದಲ್ಲಿ ಆಕರ್ಷಕ ಬೃಹತ್ ಗೇಟ್ ಇದೆ. ದೇಶಭಕ್ತಿ ಗೀತೆಗಳು ಇಡೀ ಬಯಲಿನಲ್ಲಿ ಮೊಳಗುತ್ತಿತ್ತು.

5.30 ಘಂಟೆಗೆ ಸರಿಯಾಗಿ ಎರಡೂ ದೇಶಗಳ ಸೈನಿಕ ಪಡೆ ಕವಾಯಿತು ಪ್ರಾರಂಭಿಸಿತು. ಆ ಧೀರ ಹೆಜ್ಜೆಗಳನ್ನು ನೋಡುವುದೇ ಒಂದು ಹಬ್ಬ. ಕಾಲನ್ನು ತಲೆಯವರೆಗೂ ಎತ್ತಿ ನೆಲಕ್ಕೆ ಅಪ್ಪಳಿಸುವ ವಿಶಿಷ್ಟ ಕವಾಯಿತು ಮೈನವಿರೇಳಿಸುತ್ತದೆ. ಎರಡೂ ದೇಶಗಳ ಪಡೆಗಳು ಪರಸ್ಪರ ಗೌರವಪೂರ್ವಕ ವಿಧಿ ವಿಧಾನದೊಂದಿಗೆ ಹಾರಾಡುತ್ತಿದ್ದ ತಮ್ಮ ತಮ್ಮ ದೇಶಗಳ ಧ್ವಜಗಳನ್ನು ಕೆಳಗಿಳಿಸಿ, ಅತ್ಯಂತ ಗೌರವಪೂರ್ಣ ನಡಿಗೆಯೊಂದಿಗೆ ಮಿಲಿಟರಿ ಅಧಿಕಾರಿಗಳಿಗೆ ಒಪ್ಪಿಸುವ ದೃಶ್ಯ ಅತ್ಯಂತ ಮನೋಹರ. ಸುತ್ತಲಿನ ಸುಮಾರು 10–15 ಸಾವಿರ ಜನರ ಸಂಭ್ರಮ ಮುಗಿಲು ಮುಟ್ಟಿತ್ತು. ಗೇಟಿನಾಚೆಯ ಸರಿಸುಮಾರು ಅಷ್ಟೆ ಸಂಖ್ಯೆಯ ಪಾಕಿಸ್ತಾನೀಯರ ಹರ್ಷೋದ್ಗಾರಕ್ಕೆ ಪ್ರತಿಸ್ಪರ್ಧೆ ನೀಡುತ್ತಿದ್ದ ಜನಸಾಗರವನ್ನು ನಮ್ಮ ಸೈನಿಕರು ಉತ್ತೇಜಿಸುತ್ತಿದ್ದ ರೀತಿ ಅನನ್ಯ. ಜೋಶ್ ಸೆ ಬೋಲೋ 'ವಂದೇ... ಮಾತರಂ' 'ಭಾರತ ಮಾತಾ ಕಿ ಜೈ' ಜಯಘೋಷ ಮುಗಿಲುಹರಿಯುವಂತಿತ್ತು. ತರುಣ ಸೈನಿಕರ ವೀರನಡೆ, ಘೋಷಣೆ ಪ್ರಾಯಶಃ ನನ್ನ ಜೀವನದ ಹಾಗೂ ಈ ಪ್ರವಾಸದ ಅತ್ಯಮೋಘ ಕ್ಷಣಗಳಲ್ಲಿ ಒಂದು. ಹಿಂದೀ ದೇಶಭಕ್ತಿಗೀತೆಗಳಿಗೆ ಯುವಕಯುವತಿಯರು ನರ್ತಿಸಿದಾಗ, ಎಲ್ಲರೂ ಪುಳಕಗೊಂಡರು.

ದೇಶಭಕ್ತಿ ಶಿಕ್ಷಣ ನೀಡುವ ಮೌಲ್ಯಗಳಲ್ಲಿಯೇ ಹಿರಿದಾದುದು. 'ನನ್ನ ನುಡಿ ನನ್ನದೀನಾಡು ಎನ್ನದವನೆದೆ ಸುಡುಗಾಡು' ಎಂದ ನಮ್ಮ ಕವಿವಾಣಿ ಎಷ್ಟು ಸತ್ಯ ! ಇಂತಹ ರೋಮಾಂಚನಕಾರೀ ಅನುಭವಗಳನ್ನು ನಮ್ಮ ಪುಟಾಣಿಗಳಿಗೆ ದೃಶ್ಯಮಾಧ್ಯಮಗಳ ಮೂಲಕ, ವಿವಿಧ ಸಂಪನ್ಮೂಲಗಳ ಮೂಲಕ ನೀಡುವುದು ಅತ್ಯಂತ ಸೂಕ್ತವಾಗಿದೆ.

**– ಕೆ.ಜಿ. ಕಲಾವತಿ**

---

**ಶಿಕ್ಷಕರ ಶಿಕ್ಷಣ ಪ್ರೇಮಕ್ಕೆ ಶ್ರೇಷ್ಠ ಉದಾಹರಣೆ...**

...ಪುಟ 18 ರಿಂದ

**ಶಾಲೆಯ ಕ್ರೀಡಾಂಗಣ :**

ಕೇವಲ 38 ಗುಂಟೆ ಜಮೀನಿನಲ್ಲಿ ಶಾಲಾ ಕಟ್ಟಡ ನಿರ್ಮಾಣ ಪ್ರಾರಂಭವಾಯಿತು. ಆದರೆ ನಿರ್ಮಾಣದ ಸಂದರ್ಭದಲ್ಲಿ ಮಾನ್ಯ ಶಾಸಕರು ಹಾಗೂ ಊರಿನ ಹಿರಿಯರಿಗೆ ಸುಂದರ ಶಾಲಾ ಕಟ್ಟಡವು ನಿರ್ಮಾಣದ ಹಂತದಲ್ಲಿ ಇದ್ದರೂ ಕೂಡಾ ವಿದ್ಯಾರ್ಥಿಗಳಿಗೆ ಅವಶ್ಯಕತೆಗಿಂತ ಕಡಿಮೆ ಕ್ರೀಡಾಂಗಣ ಇರುವುದನ್ನು ಮನಗಂಡು ಅದೇ ಊರಿನ ಹಿರಿಯರಾದ ವೀರನಗೌಡರು ಪಾಟೀಲ ಅವರು ಶಾಲೆಯ ಕ್ರೀಡಾಂಗಣಕ್ಕಾಗಿ ಶಾಲೆಯ ಕಟ್ಟಡಕ್ಕೆ ಹೊಂದಿಕೊಂಡಂತಹ ಸುಮಾರು 1 ಎಕರೆ 10 ಗುಂಟೆ ಜಮೀನನ್ನು ನೀಡಿದರು.

ಸಮತಟ್ಟು ಮಾಡುವುದಕ್ಕಾಗಿ ಮಾನ್ಯ ಶಾಸಕರ ವಿಶೇಷ ಕಾಳಜಿಯಿಂದ ಅನುದಾನವು ಬಿಡುಗಡೆಯಾಗಿ ಕೇವಲ 15 ದಿನಗಳಲ್ಲಿಯೇ ಶಾಲಾ ಕ್ರೀಡಾಂಗಣ ನಿರ್ಮಾಣವಾಯಿತು.

**ಶಾಲಾ ಕಟ್ಟಡದ ಉದ್ಘಾಟನೆ :**


ಮಾನ್ಯ ಶಾಸಕರಾದ ಜಿ.ಎಸ್. ಗಡ್ಡದೇವರಮಠ, ಉಪನಿರ್ದೇಶಕರಾದ ಎ.ಎನ್. ನಾಗರಳ್ಳಿ ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸರ್ವ ಸದಸ್ಯರ ಮಾರ್ಗದರ್ಶನದಲ್ಲಿ ನಿರ್ಮಾಣವಾದ ನೂತನ ಶಾಲಾ ಕಟ್ಟಡದ ಉದ್ಘಾಟನೆ ದಿನಾಂಕ 10–06–2007 ರಂದು ಕರ್ನಾಟಕ ಸರ್ಕಾರದ ಮಾನ್ಯ ಶಿಕ್ಷಣ ಸಚಿವರಾದ ಬಸವರಾಜ ಎಸ್. ಹೊರಟ್ಟಿ ಇವರಿಂದ ನೆರವೇರಿಸಲ್ಪಟ್ಟಿತು. ಶಾಲಾ ಕಟ್ಟಡದ ಬಗ್ಗೆ ಶಿಕ್ಷಣ ಸಚಿವರು ಪ್ರಶಂಸನೀಯ ನುಡಿಗಳನ್ನಾಡಿದರು. ಈ ಶಾಲಾ ಕಟ್ಟಡವು ರಾಜ್ಯದಲ್ಲಿಯೇ ಮಾದರಿ ಶಾಲಾ ಕಟ್ಟಡವಾಗಿದ್ದು ಕೇವಲ 9 ಲಕ್ಷ 40 ಸಾವಿರ ಅನುದಾನದಲ್ಲಿ ನಿರ್ಮಾಣವಾದ ಬಗ್ಗೆ ಅಚ್ಚರಿಯನ್ನು ವ್ಯಕ್ತಪಡಿಸುತ್ತಾ ಶಾಲಾ ಕಟ್ಟಡದ ನಿರ್ಮಾಣದಲ್ಲಿ ಪಾಲ್ಗೊಂಡ ಎಲ್ಲರನ್ನೂ ಸರ್ಕಾರದ ಪರವಾಗಿ ಅಭಿನಂದಿಸಿದರು.

**ಶಾಲಾ ಕಟ್ಟಡದ ವಿಶೇಷತೆಗಳು :**

3 ಬೋಧನಾ ಕೊಠಡಿಗಳು, ಸುಸಜ್ಜಿತ ಕಂಪ್ಯೂಟರ್ ಕೊಠಡಿ, ಮುಖ್ಯೋಪಾಧ್ಯಾಯರ ಕೊಠಡಿ, ಕಾರ್ಯಾಲಯ, ಸಿಬ್ಬಂದಿ ಕೊಠಡಿ, ಕ್ರೀಡಾ ಕೊಠಡಿ, ವಿಶಾಲವಾದ ಸಭಾಂಗಣ, ಸುಂದರವಾದ ರಂಗಮಂದಿರ ಇವುಗಳನ್ನೊಳಗೊಂಡ ಶಾಲೆಯಾಗಿದೆ.

**– ವಿ.ವಿ.ಸಾಲಿಮಠ್**

ಮುಖ್ಯೋಪಾಧ್ಯಾಯರು, ಸ.ಪ್ರೌ.ಶಾಲೆ, ರಾಮಗಿರಿ



## ಅಮ್ಮನೇ ಗುಮ್ಮನಾಗಿ "ಗೃಹಬಂಧನದಲ್ಲಿಟ್ಟಿದ್ದ ಬಪ್ಪ ಶಾಲೆಗೆ ಬಂದ"

ತುರುವೇಕೆರೆ ಸಾರ್ವಜನಿಕರಿಂದ ರಾಜ್ಯದ ರಾಜ್ಯಪಾಲರು, ಮುಖ್ಯಮಂತ್ರಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳು ಇವರುಗಳಿಗೆ ಅನಾಮಧೇಯ ಪತ್ರ ತುರುವೇಕೆರೆ ನಗರದಲ್ಲಿ ಶಿಕ್ಷಣ ವಂಚಿತ ಮಗು. ಅಟ್ಟದ ಮೇಲೆ ಅಡಗಿರುತ್ತಾನೆ ಎಂದು ಪತ್ರಗಳು ತುರುವೇಕೆರೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹೆಚ್. ಎಸ್. ಜಯಕುಮಾರ್ ರವರಿಗೆ, ತಕ್ಷಣ ಸ್ಥಳೀಯ ಬಾಲಕರ ಶಾಲೆಯ ಪದವೀಧರ ಮುಖ್ಯ ಶಿಕ್ಷಕರಾದ ಎಸ್. ಗೋವಿಂದಯ್ಯನಾದ ನನ್ನನ್ನು ಈ ಕಾರ್ಯಾಚರಣೆ ಭೇದಿಸಲು ನೋಡಲ್ ಅಧಿಕಾರಿಯಾಗಿಮಾರ್ಗದರ್ಶನ ನೀಡಿ ನೇಮಿಸಿದರು. ನಾನು ಅಂದಿನಿಂದ ಒಂದು ವಾರ ಅನಾಮಧೇಯ ಪತ್ರದ ಜಾಡನ್ನು ಹಿಡಿದು ಮನೆಯ ವಿಳಾಸ ಪತ್ತೆ ಹಚ್ಚಿ ಅನೇಕ ಬಾರಿ ಮನೆಯ ಮುಂದೆ ಸುಳಿದಾಡಿ ಸಾರ್ವಜನಿಕರಿಂದ ಮಾಹಿತಿ ಸಂಗ್ರಹಿಸಿದೆನು. ಹೊರಗಡೆಯಿಂದ ಇಣುಕಿ ನೋಡಿದಾಗ ಮನೆಗೆ ಯಾವಾಗಲೂ ಒಳಗಿನಿಂದ ಬೀಗ, ಒಳಗೆ ಎರಡು ಕೋಳಿಗಳು, ತಕ್ಷಣ ಕೋಳಿ ಕೊಳ್ಳುವ ನಾಟಕವಾಡಿ ಮನೆಯ ಬಾಗಿಲನ್ನು ತೆರೆಸಿ ನೋಡಿದಾಗ ಅಟ್ಟದ ಮೇಲಿದ್ದ ಜುಟ್ಟನ್ನು ಉದ್ದವಾಗಿ ಬೆಳೆಸಿಕೊಂಡಿದ್ದ ಮಗು ತಟ್ಟನೆ ಜಾರಿ ಕೆಳಗೆ ಇಳಿಯಿತು. ಇದು ನನ್ನ ಕೋಳಿ ಎಂದು ಹೇಳಿ ಜೊತೆ ಅಟ್ಟ ಏರಿದ.

ನಂತರ ನಾನು ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಗುಪ್ತ ಸಮಾಲೋಚನೆ ನಡೆಸಿ ಕುಣಿಗಲ್ ಮಹಿಳಾ ಈಶ್ವರಿ ಸಂಘದ ಶ್ರೀಮತಿ ರಂಗಮ್ಮನವರ ಸಂಪರ್ಕ ಬೆಳೆಸಿ, ಬಾಲಕಾರ್ಮಿಕ ಅಧಿಕಾರಿಗಳನ್ನು ಸಂಪರ್ಕಿಸಿ, ಪೋಲೀಸ್ ಅಧಿಕಾರಿಗಳೊಡನೆ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ದಿನಾಂಕ 6–05–2005 ರ ಶನಿವಾರ ಸಂಜೆ ಕಾರ್ಯಾಚರಣೆ ನಡೆಸಿ, ಕೋಳಿಕೊಳ್ಳುವ ನೆಪದಲ್ಲಿ ಬಾಗಿಲು ತೆಗೆಸಿ ಬಪ್ಪನನ್ನು ಹೊರಗೆ ತಂದೆವು. ಆಗ ಆತನ ತಾಯಿ ಕಮಲಮ್ಮ ಮಾಜಿ ನರ್ಸ್, ಮಾನಸಿಕ ಅಸ್ವಸ್ಥಳಂತೆ ಅಶ್ಲೀಲ ಬೈಗುಳ, ಶಾಪದ ಬೈಗುಳ, ಚಪ್ಪಲಿ ಸೇವೆ ಮುಂತಾದವುಗಳನ್ನು ಮಾಡಲು ಮುಂದೆ ಬಂದು ಮಗುವನ್ನು ಶಾಲೆಗೆ ದಾಖಲಿಸಲು ನಿರಾಕರಿಸಿದಳು.

ಮನೆಯ ಮಾಲೀಕರನ್ನು ಸಂಪರ್ಕಿಸಿ, ಹಲವಾರು ಬಾರಿ ಸಂಧಾನ ನಡೆಸಿ ವಿಫಲನಾದೆನು. ಪದೇ ಪದೇ ಪ್ರಯತ್ನ ಮುಂದುವರೆಸಿ ಮನೆಯ ಮಾಲೀಕನ ಆಪ್ತ ಗೆಳೆಯನ ವಿಳಾಸ ಪತ್ತೆ ಹಚ್ಚಿ ಆತನೊಡನೆ ಸಮಾಲೋಚಿಸಿದೆ. ಕೊನೆಗೆ ತಿರುಪತಿಗೆ ಹೋಗಿ ಶ್ರೀ ವೆಂಕಟೇಶ್ವರನ ದರ್ಶನ ಮಾಡಿಸಿ, ಮಗುವಿಗೆ ಸುಮಾರು 13 ವರ್ಷದಿಂದ ಬೆಳೆದಿದ್ದ ಕೂದಲನ್ನು ತೆಗೆಸಿ, ಕೋಳಿಯ ಒಡನಾಟದಿಂದ ಬಿಡಿಸಿ ಮನಸ್ಸನ್ನು ಪರಿವರ್ತನೆ ಮಾಡಿ ದಿನಾಂಕ 31–7–2005ರಂದು ವಯೋಮಾನಕ್ಕನುಗುಣವಾಗಿ 4ನೇ ತರಗತಿ ದಾಖಲು ಮಾಡಿಕೊಂಡೆನು. ಬಪ್ಪ ಅಲಿಯಾಸ್ ವೆಂಕಟೇಶ್ ಎಂದು ಶಾಲೆಗೆ ದಾಖಲಾಗಿದ್ದಾನೆ. ಈಗ 5ನೇ ತರಗತಿಯಲ್ಲಿ ಸಹಪಾಠಿಗಳೊಂದಿಗೆ ಕಲಿಯುತ್ತಿದ್ದಾನೆ. ತಾಯಿಗೆ ಇಂದೂ ಸಹ ಬಪ್ಪ ಎಂಬ ಹೆಸರೇ ಇಷ್ಟ. ಈತನು ಯಾವ ಜನಗಣತಿಗೂ ದಾಖಲಾಗಿರಲಿಲ್ಲ. ಇಂದು ಶಾಲೆಗೆ ದಾಖಲಾಗಿ ಎಲ್ಲರೊಂದಿಗೆ ನಲಿದು, ಉತ್ಸಾಹದಿಂದ ಕಲಿಯುತ್ತಿದ್ದಾನೆ. ಸಮಾಜದಲ್ಲಿ ಹೊಂದಿಕೊಂಡು ಓದುತ್ತಿದ್ದಾನೆ.

**● ಎಸ್. ಗೋವಿಂದಯ್ಯ**
ಪದವೀಧರ ಮುಖ್ಯ ಶಿಕ್ಷಕ ಸ.ಮಾ.ಹಿ.ಪ್ರಾ.ಬಾ.ಶಾಲೆ,
ತುರುವೇಕೆರೆ, ತುಮಕೂರು ಜಿಲ್ಲೆ.

## ನಮ್ಮೂರ ಶಾಲೆ

**– ಲಲಿತಾ ಕೆ. ಹೊಸಪ್ಯಾಟಿ**
ಸ.ಪ್ರೌ.ಶಾಲೆ ಹಿರೇಬಾದವಾಡಗಿ, ಹುನಗುಂದ
ತಾ. ಬಾಗಲಕೋಟೆ

ಇದುವೆ ನಮ್ಮೂರ ಶಾಲೆ
ಕರೆದಿದೆ ನಮ್ಮನು ಕೇಳೆ
ವಿದ್ಯೆ ಬುದ್ಧಿ – ಸಿದ್ಧಿಯನು
ಕೊಡುವುದು ನಮಗೆ ನಾಳೆ

ಅಕ್ಷರ ತೀಡಿಸಿ ಬರೆಸಿ
ಅಆಇಈ ಕಲಿಸಿ
ಒಂದಕೆ ಒಂದು ಕಲೆಸಿ
ಕೊಡುವ ಕಲೆಯ ತಿಳಿಸಿ

ಗುರುಗಳ ಪ್ರೀತಿ ಚಂದ
ಅಮ್ಮನ ತೆರದಿ ಬಂಧ
ಹಸಿದ ಹೊಟ್ಟೆಗೆ ಅನ್ನ
ಉಣಿಸುವ ಗುಣವು ಚಿನ್ನ.

ಓದಲು ಪುಸ್ತಕ ಇಟ್ಟು
ಬರೆಯಲು ಮನಸ್ಸು ಕೊಟ್ಟು
ಕೊಟ್ಟಿದೆ ಉಡಲು ತೊಡಿಗೆ
ಮರೆಯವು ಶಾಲೆಗೆ ಕೊಡುಗೆ

ನಮ್ಮೂರ ಶಾಲೆ ನಮಗೆ
ಮನೆಯಂತಾಗಿದೆ ತಿಳಿಯೆ,
ಅಕ್ಕ–ತಮ್ಮ ಅಣ್ಣ–ತಂಗಿ
ಎಲ್ಲರದೊಂದೇ ನುಡಿಯೆ.

ಕೈಯನು ಮುಗಿಯುತ ಬಂದು
ಜ್ಞಾನದ ಬೆಳಕಲಿ ಮಿಂದು
ಭಯ ಭೀತಿ ಕತ್ತಲೆ ಕಳೆದು
ತರುವೆವು ಕೀರುತಿ ಬೆಳೆದು.



ಗಾಂಧೀಜಿ ನುಡಿ : ಅತಿಯಾದ ಬೆಲೆ ತೆರದೆ ಸ್ವಾತಂತ್ರ್ಯದ ಯುದ್ಧಗಳು ನಡೆಯುವುದಿಲ್ಲ.

# ಶಾಲಾ ಸುರಕ್ಷತೆ ಬಗ್ಗೆ ಶಿಕ್ಷಣ ಕಾಯ್ದೆ ನಿಯಮಪಾಲನೆ

ವಿದ್ಯಾರ್ಥಿಗಳು ಪ್ರತಿದಿನ ಶಾಲೆಗೆ ಹಾಜರಾಗಿ ಸುರಕ್ಷತೆ ಬಗ್ಗೆ ಸಂಪೂರ್ಣ ಜವಾಬ್ದಾರಿ ಶಾಲಾ ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಗಳದ್ದಾಗಿರುತ್ತದೆ. ಖಾಸಗಿ ಬಹುತೇಕ ಶಿಕ್ಷಣ ಸಂಸ್ಥೆಗಳು ಪೋಷಕರಿಂದ ಶಾಲಾ ಅಭಿವೃದ್ಧಿ ಶುಲ್ಕವನ್ನು ಪಡೆಯುತ್ತಿದ್ದು ಶಾಲಾ ಕಟ್ಟಡದ ಸುರಕ್ಷತೆ ಮತ್ತು ಮಕ್ಕಳಿಗೆ ವಿವಿಧ ಚಟುವಟಿಕೆಗಳಿಗೆ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಅಷ್ಟೇ ಜವಾಬ್ದಾರಿಯಾಗಿರುತ್ತದೆ.

ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣ ಕಾರ್ಯವನ್ನು ಸರ್ಕಾರದ ಸ್ವಾಮ್ಯದ ಸಂಸ್ಥೆಗಳಿಗೆ ವಹಿಸುವುದರಿಂದ ತಾಂತ್ರಿಕ ಪರಿಣಿತಿ ಪಡೆದಿರುವವರ ಉಸ್ತುವಾರಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುತ್ತವೆ. ಇಂತಹ ಶಾಲಾ ಕಟ್ಟಡ ಸುರಕ್ಷಿತವಾಗಿಲ್ಲದಿದ್ದರೆ ಸಂಬಂಧಪಟ್ಟವರು ಜವಾಬ್ದಾರಾಗಿರುತ್ತಾರೆ.

ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮಗಳು 1995 ದಿನಾಂಕ 8–10–99 ಮತ್ತು 5–7–2001ರ ನಿಯಮಗಳಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಾಲೆಯನ್ನು ಪ್ರಾರಂಭಿಸಬೇಕಾದರೆ ಖಾಸಗಿ ಸಂಸ್ಥೆಗಳು ಕಡ್ಡಾಯವಾಗಿ ಸುರಕ್ಷಿತ ಶಾಲಾ ಕಟ್ಟಡ ಮತ್ತು ಇತರೆ ಮೂಲಭೂತ ಸೌಲಭ್ಯವನ್ನು ಹೊಂದಿರಬೇಕಾಗುತ್ತದೆ. ನಿಯಮಗಳ ವಿವರಣೆ ಕೆಳಕಂಡಂತಿದೆ.

**The Karnataka Educational Institutions (classification, Regulation and prescription of curricular etc)** Rule 1995 ED71 vivida 98 dtd. 8-10-99 and ED 4 vivida 2001 dtd 5-7-2001.

### Rule 4-General regulations relating to buildings of educational institions.

No Educational Institions or part there of shall function in a building unless.

a) It is located in healthy and sanitary surroundings.

b) It is built with safe roof and structure.

c) It is built in such a way as to ensure sufficient air and light both inside and class rooms and in the stair case, corridors and alleys.

d) The hight of the building from the floor to the ceiling in each story is more than eight feet.

e) It is of not more than seven storeys from the ground level.

f) Where it is of more than one floor from the ground level safe and proper stair cases are provided.

g) Where it is of more than three storeys from the ground level proper and safe lift facility is provided.

h) It is not used in any part of the day, week, month or year for any purpose other than for the furtherence of education.

> ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ, ಪೋಷಕರು ತಮ್ಮ ಮಗುವಿನ ಭವಿಷ್ಯ ರೂಪುಗೊಳ್ಳುವ ಹಾಗೂ ಶಾಲಾ ವೇಳೆಯಲ್ಲಿ ಸುರಕ್ಷಿತವಾಗಿರುತ್ತವೆ ಎಂಬ ಸಂಪೂರ್ಣ ನಂಬಿಕೆ ಹೊಂದಿರುತ್ತಾರೆ. ಈ ನಂಬಿಕೆಯನ್ನು ಉಳಿಸಿಕೊಳ್ಳುವುದು ಎಲ್ಲ ಶಿಕ್ಷಣ ಸಂಸ್ಥೆಗಳ ಗುರುತರ ಜವಾಬ್ದಾರಿಯಾಗಿದೆ. ಮೇಲ್ಕಂಡ ಶಿಕ್ಷಣ ಕಾಯ್ದೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು ಅಷ್ಟೇ ಜವಾಬ್ದಾರಿಯಾಗಿದೆ. ನಮ್ಮ ನಾಡಿನ/ ದೇಶದ ಮುಂದಿನ ಮಾನವ ಸಂಪನ್ಮೂಲವನ್ನು ಸಂರಕ್ಷಿಸುವುದು ಶಿಕ್ಷಣ ಸಂಸ್ಥೆಗಳು, ಶಿಕ್ಷಕರ ಗುರುತರ ಜವಾಬ್ದಾರಿಯಾಗಿದೆ.

### Rule (5) every building of an educational Institution shall provided adequate and proper accommodation which shall ensure.

i) a separate class room for each dividsion.

ii) Carpet area for each student of not less than six square feet.

iii) One room for HM, one for the staff room.

iv) Separate accommodation for library, reading room and storeys,

2) Sufficient area for play ground.

3) All the rooms shall be equipped with appropriate furniture of good quality material.

**Rule 6 Provision of Drinking water, toilet and other facilities.**

1) Safe and potable drinking water,

2) Adequate Toilet facilities

**Rule 7 - All the existing edn. Institutions shall provide the facilitities specified in rules 4,5 and 6 with in**

three years from such commencement.

No new educational Institutions shall begin classes unless it has substantively complied with all the provisons of Rule 4, 5 and 6.

**Rule 8 Fancing of dangerous places with in premises are fenced around for the safety of students.**

ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಲಾ ಮಾನ್ಯತೆ ಪಡೆಯುವಾಗ ಸಂಬಂಧಿಸಿದ ಪ್ರಾಧಿಕಾರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢಶಾಲೆಗಳು) ನಿಯಮ 1999 ದಿನಾಂಕ 4–11–99ರ ನಿಯಮ 4 ರಲ್ಲಿದ್ದಂತೆ 1995ರ ಶಿಕ್ಷಣ ಕಾಯ್ದೆ ನಿಯಮಗಳು 4,5,6 ಮತ್ತು 8 ರಲ್ಲಿ ವಿವರಿಸಿರುವಂತೆ ಸುರಕ್ಷಿತ ಶಾಲಾ ಕಟ್ಟಡ ಮೂಲಭೂತ ಸೌಲಭ್ಯ ಹೊಂದಿದಲ್ಲಿ ಮಾತ್ರ ಮಾನ್ಯತೆ ಪಡೆಯಲು ಅವಕಾಶವಿದೆ. ನಿಯಮದ ಉದ್ಧೃತ ಭಾಗ ಕೆಳ ಕಂಡಂತಿದೆ.

The Karnataka Educational Institutions (Recognition of primary and secondary schools) Rules 1999 ED 131 vivida 98 dtd 4-11-1999.

**Rule 4 : Conditions to grant recognition to an educational Institutions.**

1. The competent authority shall after verification, ensure and satify itself that every educational institutions seeking recognition.

a) Has a site registered in the name of the governing committee.

b) Has good building facility, sufficient accommodation with water toilet and other sufficient as specified in Rules 4,5,6 and 8 of the Rule 1995.

ಮೇಲ್ಕಂಡ ನಿಯಮದನ್ವಯ ನಿಗದಿಪಡಿಸಿದ ಅವಧಿಯೊಳಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸದಿದ್ದಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 39ರ ಕೆಳಕಂಡ ವಿವರಣೆಯಂತೆ ಷರತ್ತುಗಳನ್ನು ಪೂರೈಸದಿದ್ದಲ್ಲಿ ನೋಟೀಸ್ ನೀಡಿ ನಿಯಮಾನುಸಾರ ಮಾನ್ಯತೆ ರದ್ದುಗೊಳಿಸುವ ಅವಕಾಶವಿರುತ್ತದೆ.

**ನಿಯಮದ ಉದ್ಧೃತ ಭಾಗ ಕೆಳಕಂಡಂತಿದೆ.**

**Section 39 of Karnataka Educational Act 1983 withdrawal of recognition.**

i) Where any local authority or the governing council of any private Educational Institution.

2) Fails to fulfill all or any of the conditions of recognition or fails to comply with the orders of the competent authority in regard to accommodation, equipment, syllabus, text books, appointment, punishment and dismissal of teachers.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರೆ, ಪೋಷಕರು ತಮ್ಮ ಮಗುವಿನ ಭವಿಷ್ಯ ರೂಪುಗೊಳ್ಳುವ ಹಾಗೂ ಶಾಲಾ ವೇಳೆಯಲ್ಲಿ ಸುರಕ್ಷಿತವಾಗಿರುತ್ತವೆ ಎಂಬ ಸಂಪೂರ್ಣ ನಂಬಿಕೆ ಹೊಂದಿರುತ್ತಾರೆ. ಈ ನಂಬಿಕೆಯನ್ನು ಉಳಿಸಿಕೊಳ್ಳುವುದು ಎಲ್ಲ ಶಿಕ್ಷಣ ಸಂಸ್ಥೆಗಳ ಗುರುತರ ಜವಾಬ್ದಾರಿಯಾಗಿದೆ. ಮೇಲ್ಕಂಡ ಶಿಕ್ಷಣ ಕಾಯ್ದೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು ಅಷ್ಟೇ ಜವಾಬ್ದಾರಿಯಾಗಿದೆ. ನಮ್ಮ ನಾಡಿನ/ ದೇಶದ ಮುಂದಿನ ಮಾನವ ಸಂಪನ್ಮೂಲವನ್ನು ಸಂರಕ್ಷಿಸುವುದು ಶಿಕ್ಷಣ ಸಂಸ್ಥೆಗಳು, ಶಿಕ್ಷಕರ ಗುರುತರ ಜವಾಬ್ದಾರಿಯಾಗಿದೆ.

**– ಎಚ್.ಎನ್.ಕೆ.ರಾಜು**

ಹಿರಿಯ ಸಹಾಯಕ ನಿರ್ದೇಶಕರು, ಪ್ರೌಢಶಾಲಾ ವಿಭಾಗ, ಆಯುಕ್ತರ ಕಛೇರಿ

**ಸೂಚನೆ**

ಎಂದಿನಂತೆ ಈ ಬಾರಿಯ 'ಶಿಕ್ಷಣವಾರ್ತೆ' ಸಂಚಿಕೆಯಲ್ಲಿ ಲೇಖಕರ ಹೆಸರುಗಳು ಅನೇಕ ಲೇಖನಗಳಲ್ಲಿ ಇಲ್ಲ. ಕಾರಣ ಲೇಖಕರು ಎಷ್ಟು ಬಾರಿ ವಿನಂತಿಸಿದರೂ, ಸಹಿ ಹಾಗೂ ಮೊಹರುಗಳಲ್ಲಿ ಕಳುಹಿಸುತ್ತಿದ್ದೀರಿ. ಹೆಸರನ್ನು ನಮೂದಿಸಿರುವುದಿಲ್ಲ. ದಯವಿಟ್ಟು ಇನ್ನು ಮುಂದಾದರೂ ಲೇಖಕರು ತಮ್ಮ ಹೆಸರುಗಳು ಹಾಗೂ ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಲು ಕೋರಿದೆ.

–ಸಂ.

## ಪುಸ್ತಕ ಭಂಡಾರ – ಅರಿವಿನ ಆಗರ

ನಮ್ಮ ಶಾಲೆಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳಲ್ಲಿ ಗ್ರಂಥಭಂಡಾರವೂ ಒಂದು. ಇದರ ಸೂಕ್ತವಾದ ಸದ್ಬಳಕೆ ಆಗುತ್ತಿಲ್ಲವೆಂಬ ಕೊರಗು ಮಾತ್ರ ಹಾಗೆಯೇ ಉಳಿದಿದೆ. ಪಠ್ಯಕ್ರಮದಲ್ಲಿ ಹೇಳಿಕೊಡುವ ಸಾಹಿತ್ಯಕ್ಕೆ ಪೂರಕವಾಗಿ ಗ್ರಂಥ ಭಂಡಾರದಲ್ಲಿನ ಪುಸ್ತಕಗಳನ್ನು ಸಾಮರಸ್ಯವಾಗಿ ಬಳಸಿಕೊಳ್ಳುವ ಬಗ್ಗೆ ವಿಶೇಷ ಆಸ್ಥೆವಹಿಸಿ ಹಲವಾರು ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ಈ ಕೆಳಗೆ ಸೂಚಿಸಿರುವಂತೆ ಹಮ್ಮಿಕೊಂಡು ಮಕ್ಕಳಲ್ಲಿ ಓದುವ ಬರೆಯುವ ಮತ್ತು ಅಭಿವ್ಯಕ್ತಿಸುವ ಸಾಮರ್ಥ್ಯಗಳನ್ನು ಕರಗತಗೊಳಿಸುವಲ್ಲಿ ಪುಸ್ತಕ ಭಂಡಾರದ ಪಾತ್ರ ಅತ್ಯಮೂಲ್ಯವಾದುದು ಎಂದು ಸಾಧಿಸಿ, ತೋರಿಸಬೇಕಿದೆ.

**ಅ) ಶಾಲೆಗಳಲ್ಲಿ ವ್ಯಾಸಂಗ ಕೋನ (Reading Corner)**

ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಆಯಾ ತರಗತಿಯ ಸಾಮರ್ಥ್ಯಕ್ಕೆ ತಕ್ಕಂತೆ ಅವರ ಆಯ್ಕೆಯ ಮೇರೆಗೆ ತಿಂಗಳಿಗೊಮ್ಮೆ ಪುಸ್ತಕವನ್ನು ನೀಡಬೇಕು. ಈ ಹಂಚಿಕೆಯನ್ನು ಆಯಾ ತರಗತಿಯ ಶಿಕ್ಷಕರೇ ನಿರ್ವಹಿಸತಕ್ಕದ್ದು.



**ಆ) ಪುಸ್ತಕದ ವಿಧಗಳು :**

1) ಸ್ವಾತಂತ್ರ್ಯ ಹೋರಾಟಗಾರರು, 2) ವಿಜ್ಞಾನಿಗಳು ಮತ್ತು ಸಂಶೋಧನೆ, 3) ಸಾಮಾಜಿಕ ಸುಧಾರಕರು, 4) ದಾರ್ಶನಿಕರು, 5) ಮಾನವ ಕುಲದ ಉದ್ಧಾರಕ್ಕಾಗಿ ದುಡಿದು ಹೋರಾಡಿದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಾಯಕರು, 6) ಆಧ್ಯಾತ್ಮ ಮತ್ತು ವೇದಾಂತ, 7) ಕ್ರೀಡೆಗಳು ಮತ್ತು ಸಾಧಕರು, 8) ಕೈಗಾರಿಕೆ, 9) ಸೌರಮಂಡಲ, 10) ಬಾಹ್ಯಾಕಾಶ, 11) ಭಾರತದ ಅಂತರಿಕ್ಷ ಸಾಧನೆಗಳು, 12) ಭಾರತದ ಇತಿಹಾಸ, 13) ಇತಿಹಾಸಕಾರರು, 14) ವಚನಕಾರರು, 15) ಐತಿಹಾಸಿಕ ಸ್ಥಳಗಳು, 16) ಜನಪದ ಸಾಹಿತ್ಯ, 17) ನಮ್ಮ ನಾಡಿನ ಅದ್ಭುತಗಾಯಕರು, 18) ಶಿಲ್ಪಕಲೆ, 19) ಜಾನಪದ ಕಲೆಗಳು, 20) ಶಿಕ್ಷಣ ತಜ್ಞರು, 21 ಕವಿ ಪುಂಗವರು 22) ದಾಸ ಶ್ರೇಷ್ಠರು, 23) ಸಾಧು ಸತ್ಪುರುಷರು, 24) ಜೀವಿಗಳ ವೈವಿಧ್ಯಗಳು, 25) ರೋಗಗಳು ಮತ್ತು ಪರಿಹಾರೋಪಾಯಗಳು, 26) ಕವನಗಳು, 27) ಹಬ್ಬ ಹರಿದಿನಗಳ ಆಚರಣೆ ಮುಂತಾದವುಗಳು. ಉತ್ತಮ ಪುಸ್ತಕಗಳ ಆಯ್ಕೆ ಶಿಕ್ಷಕರ ವಿವೇಚನೆಗೆ ಬಿಟ್ಟಿದ್ದು. ಮಕ್ಕಳ ಜ್ಞಾನಾರ್ಜನೆಗೆ ಮನೋವಿಕಾಸಕ್ಕೆ ಪೂರಕವಾಗಿರುವಂತಹ ಪುಸ್ತಕಗಳಿಗೆ ಆದ್ಯತೆ ಇರಲಿ. ಯಾವುದೇ ಕಾರಣಕ್ಕೂ ವಿವಾದಾತ್ಮಕ ಪುಸ್ತಕಗಳನ್ನು ಓದಲು ಕೊಡಕೂಡದು.

**ಪುಟಗಳ ಸಂಖ್ಯೆ (ಪುಸ್ತಕದ ಗಾತ್ರ) :**

ಇದು ಮುಖ್ಯವಾದ ವಿಷಯ ಯಾವುದೇ ಕಾರಣಕ್ಕೂ ಪುಸ್ತಕ ಮಕ್ಕಳಿಗೆ ಹೊರೆಯಾಗಕೂಡದು. ದೈನಂದಿನ ಪಠ್ಯಕ್ರಮದ ಅಭ್ಯಾಸಕ್ಕೆ ಭಂಗ ಬರದಂತಿರಲಿ. ಆಹ್ಲಾದಕರವಾಗಿ ಓದಿ, ಸಂತೋಷಪಡಬೇಕೆನ್ನುವ ವಾಂಛೆಯಿಂದ ಮಕ್ಕಳು ಈ ಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಆದ್ದರಿಂದ ಪ್ರತಿ ತರಗತಿಗೂ ಕೆಳಗೆ ಸೂಚಿಸಿರುವಂತೆ ಪುಟಗಳಿರುವ ಪುಸ್ತಕಗಳನ್ನು ನೀಡುವುದು ಸೂಕ್ತವೆಂದು ಅನಿಸಿಕೆ.

| ತರಗತಿ | ಪುಟಗಳ ಸಂಖ್ಯೆ |
|---|---|
| 5ನೇ ತರಗತಿ | 15 |
| 6ನೇ ತರಗತಿ | 20 |
| 7ನೇ ತರಗತಿ | 25 |
| 8ನೇ ತರಗತಿ | 30 |
| 9ನೇ ತರಗತಿ | 35 |
| 10ನೇ ತರಗತಿ | 40 |

**ಸೂಚನೆ :** ಅ) 10ನೇ ತರಗತಿ ವಿದ್ಯಾರ್ಥಿಗಳಿಗೆ ಅವರ ಪಠ್ಯವಸ್ತುವಿನ ಕಲಿಕೆಗೆ ಗರಿಷ್ಠ ಪ್ರಮಾಣದಲ್ಲಿ ಪೂರಕವಾದ ಸಾಹಿತ್ಯವಿರುವ ಪುಸ್ತಕಗಳನ್ನು ಓದಲು ಒದಗಿಸುವುದು ಅತ್ಯಂತ ಸಮಂಜಸವಾದುದು.

**ಉದಾ:** ಪ್ರಬಂಧಗಳು, ಪತ್ರ ಲೇಖನ ಹಿಂದಿ, ಕನ್ನಡ, ಮತ್ತ ಇಂಗ್ಲಿಷ್ ಸಾಹಿತ್ಯಗಳು, ಸಾಮಾನ್ಯ ವಿಜ್ಞಾನ, ಸಮಾಜ ವಿಜ್ಞಾನ, ಗಣಿತಕ್ಕೆ ಸಂಬಂಧಿಸಿದ ಪುಸ್ತಕಗಳು ನೆನಪಿನ ಶಕ್ತಿ ಹೆಚ್ಚಿಸಿಕೊಳ್ಳುವುದು, ಪರೀಕ್ಷೆಗಳನ್ನು ಎದುರಿಸುವ ಬಗ್ಗೆ, ಅಭ್ಯಾಸ ಮಾಡುವ ಪದ್ಧತಿ, ಮುಂತಾದ ವಿಷಯಗಳ ಪುಸ್ತಕಗಳನ್ನು ಒದಗಿಸಬಹುದು.

ಬ)ಗಾತ್ರದಲ್ಲಿ ಭಾರತ–ಭಾರತಿ ಪುಸ್ತಕ ಸಂಪದದಲ್ಲಿ ಅನುಷ್ಠಾನಗೊಳ್ಳು ತ್ತಿರುವ ಪುಸ್ತಕಗಳಂತಿದ್ದರೆ ಪುಟಗಳ ಸಂಖ್ಯೆ ಹೊರೆಯಾಗುವುದಿಲ್ಲ.

**ಅಭ್ಯಸಿಸಲ್ಪಟ್ಟ ಪುಸ್ತಕಗಳ ಸಂಖ್ಯೆ :**

ಜುಲೈ ತಿಂಗಳಿನಿಂದ ಜನವರಿ ತಿಂಗಳಿನವರೆಗೆ (6 ತಿಂಗಳು) ಈ ಕಾರ್ಯವನ್ನು ಮುನ್ನಡೆಸಬೇಕು. ತಿಂಗಳಿಗೆ ಒಂದು ಪುಸ್ತಕದಂತೆ 5 ರಿಂದ 10ನೇ ತರಗತಿವರೆಗೆ ಪುಸ್ತಕಗಳ ಸಂಖ್ಯೆ ಎಷ್ಟಾಗಬಹುದು?

**ಮಂಡನೆ**

ಪುಸ್ತಕಗಳ ಹಂಚಿಕೆಯಾಗಿದೆ. ಒಂದು ತರಗತಿಯಲ್ಲಿ ಎಲ್ಲಾ ವಿದ್ಯಾರ್ಥಿಗಳ ಬಳಿ ಪುಸ್ತಕಗಳಿವೆ. ಒಂದು ತಿಂಗಳಿನ 4 ವಾರಗಳಲ್ಲಿ ಮೊದಲವಾರ ಓದಲು ಅವಕಾಶ ಕೊಟ್ಟು. ಇನ್ನುಳಿದ ಮೂರು ವಾರಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಒಂದು ವಾರಕ್ಕೆ ಎಷ್ಟು ವಿದ್ಯಾರ್ಥಿಗಳು ಮಂಡಿಸಬೇಕಾಗುತ್ತದೆ ಎಂಬುದನ್ನು ತೀರ್ಮಾನಿಸಿ. ಎರಡನೇ ವಾರದಿಂದ ಮಂಡನೆ ಪ್ರಾರಂಭವಾಗುತ್ತದೆ. ವಿದ್ಯಾರ್ಥಿಗಳು ತಾವು ಓದಿದ ಪುಸ್ತಕದ ತಿರುಳನ್ನು ಲಿಖಿತ ರೂಪದಲ್ಲಿ ತಂದು ತರಗತಿಯ ಉಪಾಧ್ಯಾಯರಿಗೆ ತೋರಿಸಿ ಅವರ ಅನುಮತಿ ಪಡೆದ ನಂತರ ಮಂಡಿಸಬೇಕು. ಲಿಖಿತ ರೂಪದ ನಮೂನೆ ಹೀಗಿರಲಿ.

1) ಕ್ರ.ಸಂ. 2) ವಿ. ಹೆಸರು 3) ಪುಸ್ತಕದ ಹೆಸರು 4) ಲೇಖಕರ ಹೆಸರು 5) ಪುಟಗಳ ಸಂಖ್ಯೆ 6) ಬೆಲೆ 7) ಪ್ರಕಾಶಕರು 8) ಸಾರಾಂಶ (ತಿರುಳು)

ವಿದ್ಯಾರ್ಥಿಗಳಿಂದ ಪಡೆದ ಈ ಲಿಖಿತ ರೂಪದ ದಾಖಲೆಗಳಿಂದ ಒಂದು ಸುಂದರವಾದ ಕಿರು ಹೊತ್ತಿಗೆಯನ್ನು ಸಿದ್ಧಪಡಿಸಿ.

**ಮಂಡನಾ ಕಾರ್ಯಕ್ರಮ :**

1) ಉತ್ಸಾಹ ಶಾಲಿ ಮಕ್ಕಳಿಗೆ ಪ್ರಾರಂಭವಾದ ವಾರಗಳಲ್ಲಿ ಅವಕಾಶಕೊಟ್ಟು ಉಳಿದ ಮಕ್ಕಳಿಗೆ, ನಂತರದ ವಾರಗಳಲ್ಲಿ ಅನುವುಮಾಡಿಕೊಡಿ. ಈ ಗುಂಪಿನ ಮಕ್ಕಳಿಗೆ ತರಗತಿ ಉಪಾಧ್ಯಾಯರು ಸಲಹೆ, ಸೂಚನೆ, ಸಹಕಾರಗಳನ್ನು ಕೊಟ್ಟು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

2) ಪ್ರತಿ ವಿದ್ಯಾರ್ಥಿಗೆ 3–5 ನಿಮಿಷಗಳ ಕಾಲಾವಕಾಶವಿರಲಿ.

3) ಉತ್ತಮವಾಗಿ ಮಂಡಿಸಿದ ವಿದ್ಯಾರ್ಥಿಗಳನ್ನು ಪ್ರಶಂಸಿಸಿ ಉಳಿದ ಮಕ್ಕಳನ್ನು ಹೆಚ್ಚು ಪ್ರೋತ್ಸಾಹಿಸಿ.

4) ವಾಚನಾಲಯ ಒಂದು ಅವಧಿಗೆ ಮಾತ್ರ (ಮಧ್ಯಾಹ್ನ) ಕಾರ್ಯಕ್ರಮ ಸೀಮಿತವಾಗಿರಲಿ.

5) ತುಂಟ ಮಕ್ಕಳು ತಮ್ಮ ಕೆಲವು ಚಟುವಟಿಕೆಗಳ ಮೂಲಕ ಮಂಡಿಸುತ್ತಿರುವವರಲ್ಲಿ ಅಧೀರತೆಯನ್ನುಂಟು ಮಾಡಿ ಈ ಕಾರ್ಯಕ್ರಮದಿಂದ ವಿಮುಖರನ್ನಾಗುವಂತೆ ಮಾಡುತ್ತಾರೆ. ಇಂಥ ಮಕ್ಕಳ ಬಗ್ಗೆ ನಿಗಾ ಇಟ್ಟು ಪ್ರಶಾಂತ ವಾತಾವರಣವಿರುವಂತೆ ನೋಡಿಕೊಳ್ಳಬೇಕು.

6) ವಾರದಿಂದ ವಾರಕ್ಕೆ ಕಾರ್ಯಕ್ರಮದ ಪ್ರಬುದ್ಧತೆಯಿಂದ ಮಕ್ಕಳು ಹೆಚ್ಚುಹೆಚ್ಚು ಕ್ರಿಯಾಶೀಲರಾಗಿ ಅವರ ಪಾಲ್ಗೊಳ್ಳುವಿಕೆಯ ಬಿರುಸು ವೃದ್ಧಿಸುತ್ತಾ ಹೋಗುವಂತೆ ಕಾರ್ಯಕ್ರಮಕ್ಕೆ ಮೆರುಗು ಕೊಡಿ.

7) ಮಂಡನಾ ಕಾರ್ಯಕ್ರಮದಲ್ಲಿ ಪೋಷಕರನ್ನು ಆಹ್ವಾನಿಸಿ.

**ಫಲಶೃತಿ :**

1) ತಿಂಗಳಿಗೆ ಒಬ್ಬ ವಿದ್ಯಾರ್ಥಿ ಒಂದು ಪುಸ್ತಕ ತೆಗೆದುಕೊಂಡರೂ ಅವನಿಗೆ ತರಗತಿಯಲ್ಲಿ ಎಷ್ಟು ವಿದ್ಯಾರ್ಥಿಗಳಿರುವರೋ ಅಷ್ಟು ಪುಸ್ತಕಗಳ ಸಾರ ಲಭ್ಯವಾಗುತ್ತದೆ.

2) ವಿವಿಧ ವಿಷಯಗಳ ಬಗ್ಗೆ ಜ್ಞಾನಾರ್ಜನೆಯಾಗುತ್ತದೆ.

3) ಗ್ರಹಣ ಶಕ್ತಿ ಹೆಚ್ಚುತ್ತದೆ.

4) ಅಭಿವ್ಯಕ್ತಿ ಕೌಶಲ ಪ್ರಖರವಾಗುತ್ತದೆ.

5) ಏಕಾಗ್ರತೆ ತೀವ್ರವಾಗುತ್ತದೆ.

6) ನಡವಳಿಕೆಯಲ್ಲಿ ಬದಲಾವಣೆಯಾಗುತ್ತದೆ.

7) ಶಿಸ್ತು, ಸಂಯಮಗಳು ರೂಢಿಗೊಳ್ಳುತ್ತವೆ.

8) ಓದುವ, ಕೇಳುವ, ಹೇಳುವ ಆಕಾಂಕ್ಷೆ ಬಲಗೊಳ್ಳುತ್ತದೆ.

9) ಸಭಾ ಕಂಪನ ಕಡಿಮೆಯಾಗುತ್ತದೆ.

10) ನಾಗರೀಕತೆಯ ಬಗ್ಗೆ ಕುತೂಹಲ ಉಂಟಾಗುತ್ತದೆ.

11) ದೇಶ ಪ್ರೇಮದ ಬಗ್ಗೆ ಜಾಗೃತಿಯುಂಟಾಗುತ್ತದೆ.

12) ಮಾನವೀಯ ಮೌಲ್ಯಗಳ ಬಗ್ಗೆ ಅರಿವು ಉಂಟಾಗುತ್ತದೆ.

13) ಭಾತೃತ್ವದ ಬಗ್ಗೆ ಒಲವು ಉಂಟಾಗುತ್ತದೆ.

14) ಧೈರ್ಯಶಾಲಿಗಳಾಗುತ್ತಾರೆ.

15) ಜನ ಜೀವನವನ್ನು ಉತ್ತಮಪಡಿಸುವಲ್ಲಿ ನನ್ನ ಕೊಡುಗೆಯೂ ಇರಬೇಕೆಂಬ ಮನೋಭಾವ ಮೂಡುತ್ತದೆ.

16) ವಿಶಾಲ ಮನೋಭಾವ ಉಂಟಾಗುತ್ತದೆ.

17) ಅಂತರಾಷ್ಟ್ರೀಯ ನಾಗರೀಕತೆಯ ಬೆಳವಣಿಗೆಯ ಬಗ್ಗೆ ತಿಳುವಳಿಕೆ ಬರುತ್ತದೆ.

18) ಜಾತೀಯತೆ ಬಗ್ಗೆ ನಿರ್ಲಕ್ಷಭಾವ ಉಂಟಾಗುತ್ತದೆ.

19) ಹೊಸತನವನ್ನು ಸಾಧಿಸಬೇಕೆಂಬ ಹಂಬಲ.

20)ತಂದೆ–ತಾಯಿ, ಗುರು–ಹಿರಿಯರನ್ನು ಗೌರವದಿಂದ ಕಾಣುವಂತಾಗುವುದು.

21) ಪ್ರೀತಿ, ವಿಶ್ವಾಸ, ದಯೆ, ಅನುಕಂಪ, ತ್ಯಾಗ ಮನೋಭಾವಗಳ ಬೆಳವಣಿಗೆ.

22)ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಗುಣಮಟ್ಟದಲ್ಲಿ ಸುಧಾರಣೆ.

23)ಇದರ ಫಲಶೃತಿಯಿಂದ ಉಪಾಧ್ಯಾಯರಲ್ಲಿ ತಮ್ಮ ಕರ್ತವ್ಯದ ಬಗ್ಗೆ ಧನ್ಯತಾಭಾವ ಮತ್ತು ತೃಪ್ತಿ.

24)ಶಾಲೆಯ ಬಗ್ಗೆ, ಉಪಾಧ್ಯಾಯರ ಬಗ್ಗೆ ಸಮಾಜದಲ್ಲಿ ಗೌರವಾದರಗಳು.

35)ಒಟ್ಟಾರೆ ಶಾಲೆಯ ಶೈಕ್ಷಣಿಕ ಗುಣಮಟ್ಟದಲ್ಲಿ ಹೆಚ್ಚಳ.

26)ಶಿಕ್ಷಕರು–ಪೋಷಕರು–ವಿದ್ಯಾರ್ಥಿಗಳ ನಡುವೆ ಆತ್ಮೀಯ ಸಂಬಂಧ.

**ಮುಂಜಾಗ್ರತೆ :**

1) ಪಠ್ಯ ವಸ್ತುವಿನ ಅಭ್ಯಾಸಕ್ಕೆ ಹೊರೆಯಾಗಕೂಡದು.

2) ಪುಸ್ತಕಗಳ ಆಯ್ಕೆಯನ್ನು ಮಕ್ಕಳಿಗೇ ಬಿಡಬೇಕು.

3) ವಿವಾದಾತ್ಮಕ ಪುಸ್ತಕಗಳನ್ನು ಓದಲು ಕೊಡಕೂಡದು.

4) ಮಕ್ಕಳ ಬೌದ್ಧಿಕ ಮಟ್ಟಕ್ಕೆ ಮೀರಿದ ಪುಸ್ತಕಗಳನ್ನು ಕೊಡಬಾರದು.

5)ಶಿಕ್ಷಕರು, ಮಂಡನಾ ಕಾರ್ಯದಲ್ಲಿ ಸಕ್ರೀಯವಾಗಿ ಭಾಗವಹಿಸಿ ಪರಿಶೀಲಿಸಿ ಮಾರ್ಗದರ್ಶನ ನೀಡಬೇಕು.

6)ಸಭಾ ಕಂಪನವಿರುವ ಮಕ್ಕಳಿಗೆ ನೈತಿಕ ಧೈರ್ಯ ತುಂಬಿ ಪ್ರೋತ್ಸಾಹಿಸಬೇಕು.

7) ಉತ್ತಮವಾಗಿ ನಿರ್ವಹಿಸಿದ ಮಕ್ಕಳನ್ನು ಪ್ರಶಂಸಿಸಬೇಕು.

8) ವರ್ಷದ ಕೊನೆಗೆ ತಪ್ಪದೇ ಬಹುಮಾನ ವಿತರಣಾ ಕಾರ್ಯವನ್ನು ಹಮ್ಮಿಕೊಳ್ಳಬೇಕು.

9) ಶಿಕ್ಷಕರೂ ಸಹ ತಾವು ಓದಿದ ಪುಸ್ತಕದ ಸಾರ, ಮೆಚ್ಚುಗೆಯಾದ ಅಂಶಗಳು, ಪಾಲಿಸಬಹುದಾದ ಅಳವಡಿಸಿಕೊಳ್ಳಬಹುದಾದ ಸತ್ಯಾಸತ್ಯಗಳನ್ನು ಮುಕ್ತವಾಗಿ ಮಕ್ಕಳೆದುರು ಚರ್ಚಿಸುವುದರಿಂದ ಮಕ್ಕಳಲ್ಲಿ ಸೂಕ್ಷ್ಮಗ್ರಹಿಕೆ, ಜ್ಞಾಪಕಶಕ್ತಿ ವಾಕ್ಯಗಳ ರಚನೆ, ಅಭಿವ್ಯಕ್ತಿ ಕೌಶಲಗಳು ಸಿದ್ಧಿಸುತ್ತವೆ.

**ಬಿ.ಆರ್.ಸಿ.ಯಲ್ಲಿ ವ್ಯಾಸಂಗ ಕೋನ :**

ಪ್ರತಿ ಬಿ.ಆರ್.ಸಿ. ಕೇಂದ್ರದಲ್ಲಿ ಒಂದು ವ್ಯಾಸಂಗ ಕೋನವನ್ನು ಸ್ಥಾಪಿಸಿ, ಬಿಡುವಿದ್ದಾಗಲೆಲ್ಲಾ ಪುಸ್ತಕ ಭಂಡಾರದಲ್ಲಿನ ಪುಸ್ತಕಗಳನ್ನು ಅಧ್ಯಯನ ಮಾಡಿ ಅದರ ತಿರುಳು, ಅಮೂಲ್ಯ ಅಂಶಗಳು, ಬೀರಿದ ಪ್ರಭಾವ, ಶಿಕ್ಷಣಕ್ಕೆ ಸಂಬಂಧಿಸಿದ ಸತ್ಯಾಂಶಗಳನ್ನು ದಾಖಲಿಸಿ, ತಮ್ಮದೇ ಆದ ಕಿರು ಹೊತ್ತಿಗೆಯನ್ನು ಸಿದ್ಧಪಡಿಸಬೇಕು. ಹಿಂದೆ ಬರುವವರಿಗೊಂದು ಮೇಲ್ಪಂಕ್ತಿ ಇದು.

ಎಲ್ಲಕ್ಕಿಂತ ಹೆಚ್ಚಾಗಿ ನಮ್ಮೊಳಗಿನ ನಮ್ಮತನಕ್ಕೆ ಒಂದು ಮಿಂಚಿನ ಸಂಚಾರದ ರೋಮಾಂಚನ ಅನುಭವ.

**– ಎ.ಎಂ. ಅಕ್ಕಿ**
ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ
ಪ್ರಾಂಶುಪಾಲರು, ಡಯಟ್ ಹಾವೇರಿ.

## ಕರ್ನಾಟಕ ಸರ್ಕಾರದ ನಡವಳಿಗಳು

## ಶಿಕ್ಷಣ ಸಚಿವಾಲಯ

**ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲ ಪ್ರತಿ ಸಮೂಹದಲ್ಲಿನ ಒಂದು ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಿಗೆ/ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪಪ್ರಾಂಶುಪಾಲರಿಗೆ ಹೆಚ್ಚುವರಿಯಾಗಿ ಸಮೂಹ ಹಂತದ ಸಹಾಯಕ ಶಿಕ್ಷಣಾಧಿಕಾರಿ ಎಂಬುದಾಗಿ ಪದನಾಮೀಕರಿಸಿ ಹೆಚ್ಚುವರಿ ಕಾರ್ಯವನ್ನು ನೀಡುವ ಬಗ್ಗೆ – ಸಹಾಯಕ ಶಿಕ್ಷಣಾಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳು/ ಸಂಪನ್ಮೂಲಗಳ ಬಗ್ಗೆ ಆದೇಶ.**

ಓದಲಾಗಿದೆ: 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ : ಎಡಿಎಂ 2 ಪ್ರಾಹುಕ್ಲ 137/2006–07, ದಿನಾಂಕ 16/12/2006. 10/04/2007 ಮತ್ತು 02/06/2007.

2. ದಿನಾಂಕ : 17/03/2007 ರಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮೂಹ ಹಂತದ ಶಿಕ್ಷಣಾಧಿಕಾರಿ ಹುದ್ದೆಯ ಕಾರ್ಯದ ಬಗ್ಗೆ ಚರ್ಚಿಸಲು ನಡೆದ ಸಭೆಯ ನಡವಳಿಗಳು.

3. ಸರ್ಕಾರದ ಆದೇಶ ಸಂಖ್ಯೆ : ಇಡಿ 143 ಯೋಯೋಕ 2007, ದಿನಾಂಕ : 09/05/2007.

## ಪ್ರಸ್ತಾವನೆ

1. ಮೇಲೆ (1)ರಲ್ಲಿ ಓದಲಾದ ದಿನಾಂಕ : 16/12/2006 ಮತ್ತು 10/04/2007ರ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರತಿ ಸಮೂಹದಲ್ಲಿ ಒಂದು ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಿಗೆ ಹೆಚ್ಚುವರಿಯಾಗಿ ಸಮೂಹ ಹಂತದ ಸಹಾಯಕ ಶಿಕ್ಷಣಾಧಿಕಾರಿ ಎಂಬುದಾಗಿ ಪದನಾಮೀಕರಿಸಿ ಹುದ್ದೆಯ ಕಾರ್ಯವನ್ನು ನೀಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

2. ಕರ್ನಾಟಕ ರಾಜ್ಯವು 6 ತಿಂದ 14 ವಯೋಮಾನದ ಮಕ್ಕಳ ದಾಖಲಾತಿ ಹಾಜರಾತಿಗೆ ಸಂಬಂಧಿಸಿದಂತೆ ಗಣನೀಯ ಸಾಧನೆ ಮಾಡಿದೆ. ಆದರೆ ಮಕ್ಕಳ ಕಲಿಕಾ ಗುಣಮಟ್ಟಕ್ಕೆ ಸಂಬಂಧಿಸಿದಂತೆ ರಾಜ್ಯದ ಸಾಧನೆ ಆಶಾದಾಯಕವಾಗಿಲ್ಲ. ಈ ಹಿನ್ನೆಲಯಲ್ಲಿ ರಾಜ್ಯವು ಗುಣಾತ್ಮಕ ಶಿಕ್ಷಣಕ್ಕಾಗಿ ಕರ್ನಾಟಕದ ಶಾಲೆಗಳು ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ ಸಂಬಂಧಿಸಿದಂತೆ ಇರುವ ಕೆಲವು ಅಡೆತಡೆಗಳು ಈ ಕೆಳಕಂಡಂತಿವೆ. (ಅ) ಡಿ.ಪಿ.ಇ.ಪಿ., ಎಸ್.ಎಸ್.ಎ. ಕಾರ್ಯಕ್ರಮಗಳ ಅಡಿಯಲ್ಲಿ ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳ ಸ್ಥಾಪನೆಯಾಗಿದ್ದು, ತರಬೇತಿಗಳ, ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಿದೆ. ಆದರೆ ಶಾಲಾ ಮತ್ತು ಸಮೂಹ ಹಂತಕ್ಕೆ ನಿರೀಕ್ಷಿಸಿದಷ್ಟು ಶೈಕ್ಷಣಿಕ ಬೆಂಬಲ ದೊರಕುತ್ತಿಲ್ಲ. (ಆ) ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಡಿಯಲ್ಲಿ ಸರಾಸರಿ 250 ರಿಂದ 300 ಶಾಲೆಗಳು ಮತ್ತು 600 ರಿಂದ 800 ಶಿಕ್ಷಕರು ಬರುತ್ತಾರೆ. ಈ ಎಲ್ಲ ಶಿಕ್ಷಕರ ವೇತನ ಇತರ ಆಡಳಿತಾತ್ಮಕ ಕಾರ್ಯಗಳಿಗೆ ಅವರ ಸಮಯ ವ್ಯಯ ಆಗುತ್ತಿದ್ದು, ಇತರೆ ಗುಣಾತ್ಮಕ ವಿಷಯಗಳತ್ತ ಗಮನಹರಿಸಲು ಸಾಧ್ಯವಾಗುತ್ತಿಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೆಚ್ಚಿನ ಕಾರ್ಯದ ಒತ್ತಡದಿಂದ ಬಳಲುತ್ತಿದ್ದಾರೆ. ಇ) ಸಮೂಹ ಹಂತದಲ್ಲಿ ಒಂದು ಅಥವಾ ಎರಡು ಸರ್ಕಾರಿ ಶಾಲೆಗಳಿದ್ದರೂ ಪ್ರಾಥಮಿಕ ಶಾಲೆಗಳು ಪ್ರೌಢ ಶಾಲೆಗಳಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳಲಾಗುತ್ತಿಲ್ಲ ಮತ್ತು ಪ್ರೌಢ ಶಾಲೆಗಳು ಮತ್ತು ಪ್ರಾಥಮಿಕ ಶಾಲೆಗಳ ನಡುವೆ ಉತ್ತಮ ಸಂಪರ್ಕ (linkage)ಗಳು ಇಲ್ಲ. ಇದು ಮಕ್ಕಳ ಶಿಕ್ಷಣದ ಮುಂದುವರಿಕೆಗೆ ಅಡ್ಡಿಯಾಗುವ ಸಾಧ್ಯತೆಗಳಿರುತ್ತವೆ. (ಈ) 20–25 ಶಾಲೆಗಳಿಗೆ ಒಂದು ಸಮೂಹ ಎಂದು ರಚಿಸಿ, ವ್ಯವಸ್ಥೆಯನ್ನು ವಿಕೇಂದ್ರೀಕರಿಸಲಾಗಿದ್ದರೂ ನಿರೀಕ್ಷಿಸಿದಷ್ಟು ವಿಕೇಂದ್ರೀಕರಣ ಸಾಧ್ಯವಾಗಿಲ್ಲ. ಸಮೂಹ ಸಂಪನ್ಮೂಲ ವ್ಯಕ್ತಿಗಳು ಹೆಚ್ಚಾಗಿ ಆಡಳಿತಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಮತ್ತು ಆ ರೀತಿಯ ಕಾರ್ಯಗಳನ್ನು ಬಿಇಓಗಳು ಸಿಆರ್‌ಪಿಗಳಿಗೆ ನೀಡುತ್ತಾರೆ ಎಂಬ ಹಿಮ್ಮಾಹಿತಿ ಅನೇಕ ವೇಳೆಯಲ್ಲಿ ಪಡೆಯಲಾಗಿದೆ. (ಉ) ಶಿಕ್ಷಕರು ತಮ್ಮ ವೇತನ, ದೀರ್ಘ ಕಾಲಿನ ರಜೆ, ಕಾಲಮಿತಿ ವೇತನ ಬಡ್ತಿ ಮುಂತಾದ ಕಾರ್ಯಗಳಿಗೆ ಬಿಇಓ ಕಛೇರಿಗೆ ಭೇಟಿ ನೀಡುವುದರಿಂದ ಶಾಲೆಗಳಲ್ಲಿ ಅವರು ಕೈಗೊಳ್ಳುವ ಬೋಧನಾ–ಕಲಿಕಾ ಕಾರ್ಯಕ್ಕೆ ತೊಂದರೆಯಾಗುತ್ತದೆ.

3. ಈ ಹಿನ್ನೆಲೆಯಲ್ಲಿ ಆಡಳಿತಾತ್ಮಕ ವಿಕೇಂದ್ರೀಕರಣ ಮತ್ತು ಸಮೂಹದಲ್ಲಿ ಶೈಕ್ಷಣಿಕ ಸಂಪನ್ಮೂಲ ಕ್ರೂಢೀಕರಿಸಿ, ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣವನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರತಿ ಸಮೂಹದಲ್ಲಿ ಇರುವ ಒಂದು ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಿಗೆ ಹೆಚ್ಚುವರಿಯಾಗಿ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿ ಎಂದು ಪದನಾಮೀಕರಿಸಿ, ಹುದ್ದೆಯ ಕಾರ್ಯವನ್ನು ನೀಡುವ ಬಗ್ಗೆ ಪರಿಶೀಲಿಸಿದೆ. 4. ರಾಜ್ಯದಲ್ಲಿ ಪ್ರಸ್ತುತ 2390 ಸಮೂಹಗಳಿದ್ದು, ಪ್ರತಿ ಸಮೂಹದಲ್ಲಿನ ಒಂದು ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಿಗೆ ಹೆಚ್ಚುವರಿಯಾಗಿ ಸಹಾಯಕ ಶಿಕ್ಷಣಾಧಿಕಾರಿ ಎಂದು ಪದನಾಮೀಕರಿಸಿ, ಹುದ್ದೆಯ ಕಾರ್ಯವನ್ನು ನೀಡುವುದರಿಂದ ಆಗುವ ಅನುಕೂಲತೆಗಳು ಈ ಕೆಳಕಂಡಂತೆ ಇದೆ. (ಅ) ಆಡಳಿತ ವಿಕೇಂದ್ರೀಕರಣ ಸಾಧ್ಯವಾಗುತ್ತದೆ. (ಆ) ಪ್ರೌಢ ಶಾಲೆಗಳ ಶೈಕ್ಷಣಿಕ ಸಂಪನ್ಮೂಲವು ಸಮೂಹ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ದೊರೆಯುತ್ತದೆ. (ಇ) ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಗುಣಮಟ್ಟದ ಮೇಲುಸ್ತುವಾರಿ ಮತ್ತು ಮೌಲ್ಯಮಾಪನ ಕೈಗೊಳ್ಳಲು ಸಹಾಯಕವಾಗುತ್ತದೆ. (ಈ) ಶಿಕ್ಷಕರ ವೇತನ, ಬಡ್ತಿ, ರಜೆ ಇವುಗಳ ತ್ವರಿತ ವಿಲೇವಾರಿ ಸಾಧ್ಯ. (ಉ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ನಡುವೆ ಉತ್ತಮ ಸಂಪರ್ಕ ಸಾಧ್ಯ. (ಊ) ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ಹತ್ತನೇ ತರಗತಿಯವರೆಗೆ ವಿಸ್ತರಿಸುವ ಪ್ರಸ್ತಾವನೆ ಇರುವುದರಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವ್ಯವಸ್ಥೆಗಳ ಜೊತೆಗೂಡಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. (ಎ) ಪ್ರಾಥಮಿಕ ಶಾಲಾ ಶಿಕ್ಷಕರ ತರಗತಿಯ ಸಮಸ್ಯೆಗಳಿಗೆ ಪ್ರೌಢ ಶಾಲಾ ಶಿಕ್ಷಕರಿಂದ ಪರಿಹಾರ ಕಂಡುಕೊಳ್ಳಬಹುದು. (ಏ) ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯದ ಒತ್ತಡ ಕಡಿಮೆಯಾಗಿ ಬ್ಲಾಕ್‌ನ ಶೈಕ್ಷಣಿಕ ನಾಯಕತ್ವವನ್ನು ಹೊಂದಬಹುದು.

5. ಮೇಲೆ (2) ರಲ್ಲಿ ಓದಲಾದ ದಿನಾಂಕ 17/03/2007 ರಂದು ನಡೆದ ಸಭೆಯಲ್ಲಿ ಆಡಳಿತಾತ್ಮಕ ವಿಕೇಂದ್ರೀಕರಣ ಮತ್ತು ಸಮೂಹದಲ್ಲಿ ಶೈಕ್ಷಣಿಕ ಸಂಪನ್ಮೂಲ ಕ್ರೋಢೀಕರಿಸಿ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣವನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರತಿ ಸಮೂಹದಲ್ಲಿ ಇರುವ ಒಂದು ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಹೆಚ್ಚುವರಿ ಸಮೂಹ ಹಂತದ ಸಹಾಯಕ ಶಿಕ್ಷಣಾಧಿಕಾರಿ ಹುದ್ದೆಯ ಕಾರ್ಯವನ್ನು ನೀಡುವ ಬಗ್ಗೆ ಹಾಗೂ ಅವರುಗಳ ಕಾರ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸುವ ಬಗ್ಗೆ ನಿರ್ಧರಿಸಲಾಯಿತು.

6. ಮೇಲೆ (3) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ 09/05/2007 ರಲ್ಲಿ ಶಿಕ್ಷಣ ವಲಯದ ಅಡಿಯಲ್ಲಿ ಬರುವ ಸಾರ್ವಜನಿಕ ಶಿಕ್ಷಣ ಇಲಾಖೆಗೆ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ 2007-08ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳಡಿ ಹೆಚ್ಚುವರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಮೋದನೆ ನೀಡುತ್ತಾ, ಸಮೂಹ ಶಾಲಾ ಸಂಗ್ರಹಣಾ ಕಾರ್ಯಕ್ರಮದಡಿ 2007-08ನೇ ಸಾಲಿಗೆ ರೂ. 550 ಲಕ್ಷ ನಿಗದಿಯಾಗಿದ್ದು, ರಾಜ್ಯದಲ್ಲಿರುವ 2390 ಸಮೂಹಗಳಿಗೆ ಅನಾವರ್ತಕ ವೆಚ್ಚಗಳಾದ ಪೀಠೋಪಕರಣಗಳು, ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಫ್ಯಾಕ್ಸ್ ಹಾಗೂ ದೂರವಾಣಿಗಳನ್ನು ಸರ್ವ ಶಿಕ್ಷಣ ಅಭಿಯಾನ ಅಡಿಯಲ್ಲಿನ ಅನುದಾನದಿಂದ ಭರಿಸಲು ಹಾಗೂ ವಲಯ ಶಿಕ್ಷಣಾಧಿಕಾರಿಗಳಿಗೆ ಸ್ಥಿರ ಪ್ರಯಾಣ ಭತ್ಯೆಗಾಗಿ ಮಾಸಿಕ ರೂ. 500.00 ಗಳನ್ನು ನೀಡಲು ಮತ್ತು ಪ್ರತಿ ವಲಯ ಕೇಂದ್ರಕ್ಕೆ ದೂರವಾಣಿ, ಸಾದಿಲ್ವಾರು, ವಿದ್ಯುಚ್ಛಕ್ತಿ ವೆಚ್ಚಗಳಿಗಾಗಿ ವಾರ್ಷಿಕ ತಲಾ ರೂ. 15,000.00 ಗಳನ್ನು ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಮತಿ ನೀಡಿದೆ. ಈ ಸನ್ನಿವೇಶದಲ್ಲಿ ಸಮೂಹದಲ್ಲಿರುವ ಒಂದು ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಿಗೆ, ಮುಖ್ಯ ಶಿಕ್ಷಕರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿ ಎಂದು ಪದನಾಮೀಕರಿಸಿ ಅಧಿಕಾರ, ಕರ್ತವ್ಯ ಹಾಗೂ ಕಾರ್ಯ ವ್ಯಾಪ್ತಿ ಗೊತ್ತುಪಡಿಸುವ ಬಗ್ಗೆ ಇರುವ ಪ್ರಸ್ತಾವನೆ ಪರಿಶೀಲಿಸಲಾಗಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 109 ಡಿಪಿಐ 2007, ಬೆಂಗಳೂರು,**

ದಿನಾಂಕ : 01.08.2007

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಅನುಬಂಧ 1ರ ಕಲಂ 2ರಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ, ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರನ್ನು ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪಪ್ರಾಂಶುಪಾಲರನ್ನು ಕಲಂ 3ರಲ್ಲಿ ತೋರಿಸಿರುವ ಸಮೂಹಗಳಿಗೆ ಸಂಬಂಧಿಸಿದಂತೆ ಅವರನ್ನು ಮುಖ್ಯ ಶಿಕ್ಷಕ/ಉಪಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿ ಎಂಬುದಾಗಿ ಪದನಾಮೀಕರಿಸಿ ಆದೇಶಿಸಿದೆ. ಸದರಿ ಸಮೂಹಗಳ ಸರಹದ್ದುಗಳನ್ನು ಗ್ರಾಮ ಪಂಚಾಯಿತಿ ಸರಹದ್ದುಗಳು ಮತ್ತು ನಗರ ಪಾಲಿಕೆಯ ವಾರ್ಡುಗಳಿಗೆ ಹೊಂದಿಸಿ ಸಂಬಂಧಿಸಿದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಸರಹದ್ದುಗಳ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸತಕ್ಕದ್ದು.

2. ಈ ರೀತಿ ಪದನಾಮೀಕರಿಸಿದ ಮುಖ್ಯ ಶಿಕ್ಷಕರು/ಉಪಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಗಳ ಕಾರ್ಯ ವ್ಯಾಪ್ತಿ, ಅವರ ಅಧಿಕಾರ ಮತ್ತು ಕರ್ತವ್ಯಗಳನ್ನು ಈ ಆದೇಶದ ಅನುಬಂಧ-4 ರಲ್ಲಿರುವಂತೆ ಗೊತ್ತುಪಡಿಸಲಾಗಿದೆ. ಅದರಂತೆ ಕರ್ತವ್ಯ ನಿರ್ವಹಿಸಲು ಹಾಗೂ ಈ ಆದೇಶವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದನ್ನು ಸಂಬಂಧಿಸಿದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರು ಗಮನಿಸತಕ್ಕದ್ದು.

3. ಪ್ರತಿ ಸಮೂಹ ವ್ಯಾಪ್ತಿಯಲ್ಲಿ ಸುಮಾರು 20 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು ಸುಮಾರು 70 ರಿಂದ 100 ಪ್ರಾಥಮಿಕ ಶಾಲಾ ಶಿಕ್ಷಕರು ಬರುತ್ತಿದ್ದು, ಈ ಸಂಖ್ಯೆಯ ಶಾಲೆಗಳ ಮತ್ತು ಶಿಕ್ಷಕರ ಆಡಳಿತಾತ್ಮಕ ಕಾರ್ಯಗಳಿಗೆ ಮತ್ತು ಇದರ ಜೊತೆ ಪ್ರೌಢ ಶಾಲೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಒಬ್ಬ ದ್ವಿತೀಯ ದರ್ಜೆ ಸಹಾಯಕರು ಅವಶ್ಯಕವಾಗಿರುವುದರಿಂದ, ಈಗಾಗಲೇ ದ್ವಿತೀಯ ದರ್ಜೆ ಸಹಾಯಕರು ಇರುವ ಕಡೆ ಅವರೇ ಈ ಆಡಳಿತಾತ್ಮಕ ಜವಾಬ್ದಾರಿ ನಿರ್ವಹಿಸತಕ್ಕದ್ದು. ಇಲ್ಲದಿರುವ ಕಡೆ ದ್ವಿತೀಯ ದರ್ಜೆ ಸಹಾಯಕರನ್ನು ನಿಯುಕ್ತಿಗೊಳಿಸಿ ಅಥವಾ ಅದೇ ಸಮೂಹದಲ್ಲಿಯ ಇತರ ಶಾಲೆಗಳಲ್ಲಿ ಇರುವ ದ್ವಿತೀಯ ದರ್ಜೆ ಸಹಾಯಕರನ್ನು ಸಮೂಹ ಕೇಂದ್ರಕ್ಕೆ ವರ್ಗಾಯಿಸಲು ಸಂಬಂಧಿಸಿದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಕ್ರಮ ವಹಿಸತಕ್ಕದ್ದು.

4. ಮುಖ್ಯ ಶಿಕ್ಷಕರು ಹಾಗೂ ಪದನಿಮಿತ್ತ ಶಿಕ್ಷಣಾಧಿಕಾರಿಗೆ ಅವರ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಸಹಾಯಕವಾಗುವಂತೆ ಎಜುಸ್ಯಾಟ್ ಮೂಲಕ ಈ ಆದೇಶದ ಹೊರಡಿಸಿದ 30 ದಿನಗಳೊಳಗೆ ತರಬೇತಿಯನ್ನು ನೀಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ಕ್ರಮ ಕೈಗೊಳ್ಳತಕ್ಕದ್ದು ಹಾಗೂ ಈ ತರಬೇತಿಯಲ್ಲಿ ಮುಖ್ಯ ಶಿಕ್ಷಕರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಯು ನಿರ್ವಹಿಸಬೇಕಾದ ಕಾರ್ಯಗಳು, ಅಧಿಕಾರ / ಕರ್ತವ್ಯಗಳು, ಸಿಆರ್‌ಪಿಗೆ ವಹಿಸಬೇಕಾದ ಕಾರ್ಯ ಮತ್ತು ಮೇಲುಸ್ತುವಾರಿ ಸ್ವರೂಪ, ಪ್ರೌಢ ಶಾಲೆಯ ಕಾರ್ಯ ಚಟುವಟಿಕೆಗಳ ಜೊತೆ ಸದರಿ ಹೆಚ್ಚುವರಿ ಕಾರ್ಯವನ್ನು ಯಾವ ರೀತಿ ಸಮನ್ವಯ ಮಾಡಬೇಕು ಎಂಬ ಅಂಶಗಳು ಒಳಗೊಂಡಿರತಕ್ಕದ್ದು.

5. ಈ ಸಮೂಹಗಳ ರಚನೆಯಿಂದ ಹಾಗೂ ಮುಖ್ಯ ಶಿಕ್ಷಕರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿ ಎಂಬ ಪದನಾಮದಿಂದಾಗಿ ಈಗ ಇರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ಆರ್ಥಿಕ ಅಧಿಕಾರ ಹಾಗೂ ಕರ್ತವ್ಯಗಳಲ್ಲಿ ಬದಲಾವಣೆ ಆಗಲಿದ್ದು ಬದಲಾದ ಅಧಿಕಾರ ಹಾಗೂ ಕರ್ತವ್ಯಗಳನ್ನು ಅನುಬಂಧ-5ರಲ್ಲಿರುವಂತೆ ನಿಗದಿಪಡಿಸಲಾಗಿದೆ.

6. ಅನುಬಂಧ 1 ರಲ್ಲಿ ತೋರಿಸಿರುವ ಸಮೂಹಗಳ ಮುಖ್ಯೋಪಾಧ್ಯಾಯರು/ಉಪಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಧಿಕಾರ ಮತ್ತು ಆಡಳಿತ ಜವಾಬ್ದಾರಿಗೆ ಸಂಬಂಧಿಸಿದ ಕಡತಗಳು ಸೇವಾ ವಹಿಗಳು, ದಾಖಲೆಗಳನ್ನು ಈ ಆದೇಶ ಹೊರಡಿಸಿದ 30 ದಿನಗಳೊಳಗಾಗಿ ಹಸ್ತಾಂತರಿಸತಕ್ಕದ್ದು. ಆಡಳಿತ ಹಸ್ತಾಂತರದ ವಿಧಿವಿಧಾನಗಳನ್ನು ಮತ್ತು ವೇಳಾಪಟ್ಟಿಯನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ಹೊರಡಿಸತಕ್ಕದ್ದು. ಅನುಬಂಧ 2ರಲ್ಲಿ ಉಪ

ಪ್ರಾಂಶುಪಾಲರು ಇಲ್ಲದ ಪದವಿ ಪೂರ್ವ ಕಾಲೇಜುಗಳಿರುವ ಸಮೂಹಗಳಿಗೆ ಸಂಬಂಧಿಸಿದಂತೆ ಹಾಗೂ ಅನುಬಂಧ 3 ರಲ್ಲಿ ಜೋಡಣೆಗೆ ಅವಕಾಶವಿಲ್ಲದ ಸಮೂಹಗಳಿಗೆ ಸಂಬಂಧಿಸಿದಂತೆ ಹಿಂದಿನಂತೆ ಅವುಗಳಲ್ಲಿನ ಶಾಲೆಗಳ ಆಡಳಿತವನ್ನು ಮುಂದಿನ ಆದೇಶವಾಗುವವರೆಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ನಿರ್ವಹಿಸತಕ್ಕದ್ದು. ಅಂತಹ ಸಮೂಹಗಳಲ್ಲಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಅಥವಾ ಪದವಿಪೂರ್ವ ಕಾಲೇಜುಗಳಲ್ಲಿ ಉಪ ಪ್ರಾಂಶುಪಾಲರ ಹುದ್ದೆ ಮಂಜೂರು ಮಾಡುವ ಬಗ್ಗೆ ಸಂಬಂಧಿಸಿದ ಆಯುಕ್ತರು ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದ ಆಡಳಿತ ನಿರ್ವಹಣೆಗೆ ಸಮೂಹ ಹಂತದ ಸಹಾಯಕ ಶಿಕ್ಷಣಾಧಿಕಾರಿಯ ಕಛೇರಿಗೆ ಒಂದು ಕಂಪ್ಯೂಟರ್, ಪ್ರಿಂಟರ್, ದೂರವಾಣಿ, ಅಂತರ್ ಜಾಲ ಸಂಪರ್ಕ, ಫ್ಯಾಕ್ಸ್ ಇವುಗಳನ್ನು ಸರ್ವ ಶಿಕ್ಷಣ ಅಭಿಯಾನದ ಅನುದಾನದಿಂದ ಭರಿಸಲು ಆದೇಶಿಸಿದೆ.

ಮುಖ್ಯ ಶಿಕ್ಷಕರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿ ತಮ್ಮ ವ್ಯಾಪ್ತಿಯ ಪ್ರಾಥಮಿಕ ಶಾಲೆಗಳಿಗೆ ಆಗಾಗ್ಗೆ, ಅವಶ್ಯಕತೆಯಾಧಾರಿತ ಭೇಟಿ ನೀಡಬೇಕಾಗಿರುವುದರಿಂದ ಅವರಿಗೆ ಸ್ಥಿರ ಪ್ರಯಾಣ ಭತ್ಯೆಯಾಗಿ ಮಾಸಿಕ ರೂ. 500/- ಗಳಂತೆ ನೀಡಲು ಹಾಗೂ ಪ್ರತಿ ವಲಯ ಕೇಂದ್ರಕ್ಕೆ ದೂರವಾಣಿ ಸಾದಿಲ್ವಾರು, ವಿದ್ಯುಚ್ಛಕ್ತಿ ವೆಚ್ಚಗಳಿಗಾಗಿ ವಾರ್ಷಿಕ ತಲಾ 15,000/- ರೂ.ಗಳಂತೆ ನೀಡಲು ಆದೇಶಿಸಿದೆ. ಈ ಕಾರ್ಯಕ್ರಮಕ್ಕೆ 2007-08ನೇ ಸಾಲಿಗೆ ಸಮೂಹ ಶಾಲಾ ಸಂಕೀರ್ಣ ಕಾರ್ಯಕ್ರಮದಲ್ಲಿನ ಲೆಕ್ಕ ಶೀರ್ಷಿಕೆ 2202-01-88-1-4-059ಗಳಲ್ಲಿ 550.00 ಲಕ್ಷ ರೂ.ಗಳು (ಐನೂರು ಐವತ್ತು ಲಕ್ಷ ರೂ.ಗಳು ಮಾತ್ರ) ನಿಗದಿಯಾಗಿದ್ದು ಇದರಲ್ಲಿ ಈ ಎಲ್ಲಾ ವೆಚ್ಚಗಳನ್ನು ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆಗಳು ತಮ್ಮ ಅನಧಿಕೃತ ಟಿಪ್ಪಣಿ ಸಂಖ್ಯೆ : ಯೋಇ 48 ಜಶ 2007 ದಿನಾಂಕ : 24.04.2007 ಹಾಗೂ ಆಇ 34 ಉಕಾ-2/2007 ದಿನಾಂಕ : 24.04.2007 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ**
**- ಟಿ. ಎಂ. ವಿಜಯ ಭಾಸ್ಕರ್**
ಸರ್ಕಾರದ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ

**ಸರ್ಕಾರಿ ಆದೇಶ ಸಂಖ್ಯೆ : ಇಡಿ 109 ಡಿಪಿಐ 2007 ದಿನಾಂಕ : 01.08.2007 ರ**

## ಅನುಬಂಧ - 4

### ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಹಿಸಲು ಆದೇಶಿಸಿದ ಅಧಿಕಾರ ಮತ್ತು ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರ ಕರ್ತವ್ಯಗಳು :-

ಸಹಾಯಕ ಶಿಕ್ಷಣಾಧಿಕಾರಿಯು ಆಯಾ ಕ್ಷೇತ್ರದ ಶಿಕ್ಷಣಾಧಿಕಾರಿಗಳ ಮಾರ್ಗದರ್ಶನ ಮತ್ತು ನಿಯಂತ್ರಣದಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಸಹಾಯಕ ಶಿಕ್ಷಣಾಧಿಕಾರಿಯ ಕರ್ತವ್ಯಗಳನ್ನು ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ಆರ್ಥಿಕ ಅಧಿಕಾರಿಗಳನ್ನು ಈ ಕೆಳಕಂಡಂತೆ ವಹಿಸಿದೆ.

### ಶೈಕ್ಷಣಿಕ ಕರ್ತವ್ಯಗಳು

1. ತಾವು ಕಾರ್ಯನಿರ್ವಹಿಸುತ್ತಿರುವ ಪ್ರೌಢ ಶಾಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಲ್ಲಾ ಕಾರ್ಯಗಳನ್ನು ಹಿಂದಿನಂತೆ ಸಮರ್ಪಕವಾಗಿ ನಿರ್ವಹಿಸುವುದು. 2. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯ ಎಲ್ಲಾ ಮಕ್ಕಳು 8 ವರ್ಷಗಳ ಗುಣಮಟ್ಟದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪಡೆಯುವ ಸಲುವಾಗಿ ಪ್ರಾಥಮಿಕ ಶಾಲೆಗಳಲ್ಲಿ ಶೇ. 100 ರಷ್ಟು ಮಕ್ಕಳು ದಾಖಲಾತಿಯಾಗುವಂತೆ ಹಾಗೂ ಕನಿಷ್ಠ ಶೇ. 90 ರಷ್ಟು ಹಾಜರಾತಿಯಾಗುವಂತೆ ಕಾರ್ಯಕ್ರಮಗಳನ್ನು ಸ್ವಪ್ರೇರಣೆಯಿಂದ ಹಮ್ಮಿಕೊಳ್ಳುವುದು. 3. ತಮ್ಮ ಸಮೂಹದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಕೆ.ಎಸ್.ಕ್ಯೂ.ಎ. ದ ವರದಿಗಳ ಆಧಾರದ ಮೇಲೆ ಶೈಕ್ಷಣಿಕ ಯೋಜನೆಗಳನ್ನು ತಯಾರಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಸಮೂಹದ ಎಲ್ಲಾ ಮಕ್ಕಳು ಕನಿಷ್ಠ ಶೇ. 80 ರಷ್ಟು ಸಾಮರ್ಥ್ಯವನ್ನು ಹೊಂದುವಂತೆ ಪ್ರಯತ್ನ ಮಾಡುವುದು. 4.ಸಮೂಹದೊಳಗೆ ಬರುವ ಶಾಲಾರಹಿತ ಹಳ್ಳಿಗಳಲ್ಲಿ ಶಾಲೆಗಳ ಸ್ಥಾಪನೆಗೆ ಆದ್ಯತೆ ನೀಡುವ ವ್ಯಾಪಕವಾದ ಶಾಲಾ ನಕ್ಷೆಯನ್ನು ಸಿದ್ಧಪಡಿಸಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು. 5. ಡಯಟ್‌ಗಳ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಹಕಾರದಿಂದ ಶಾಲೆಗಳ ಮತ್ತು ಶಿಕ್ಷಕರುಗಳ ಸ್ವಮೌಲ್ಯಾಂಕದ ಹಾಗೂ ಶಾಲೆಗಳ ಪ್ರಗತಿಯನ್ನಾಧರಿಸಿ ಶಾಲೆಗಳ ವರ್ಗೀಕರಣಕ್ಕೆ ವೈಜ್ಞಾನಿಕ ಪ್ರಯತ್ನ ನಡೆಸುವುದು. 6. ಕ್ಷೇತ್ರ ಸಂಪನ್ಮೂಲ ಕೇಂದ್ರಗಳ ಸಹಕಾರದೊಂದಿಗೆ ತಮ್ಮ ಸಮೂಹದ ವ್ಯಾಪ್ತಿಯ ಶಾಲೆಗಳ ಶೈಕ್ಷಣಿಕ ಕ್ರಿಯಾ ಯೋಜನೆಗಳ ತಯಾರಿಕೆ ಹಾಗೂ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆಯನ್ನು ಕೈಗೊಳ್ಳುವುದು. 7. ಸಮೂಹ ಮಟ್ಟದ ಕ್ರೀಡಾಕೂಟ, ಪ್ರತಿಭಾ ಕಾರಂಜಿ, ವಿಜ್ಞಾನ ಪ್ರದರ್ಶನ ಇತರೆ ಶೈಕ್ಷಣಿಕ ಸ್ಪರ್ಧೆಗಳನ್ನು ಏರ್ಪಡಿಸುವುದು.

8. ಸಮೂಹ ವ್ಯಾಪ್ತಿಯಲ್ಲಿನ ಎಲ್ಲಾ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸ್ಥಾಪನೆ ಮತ್ತು ಸಮರ್ಪಕ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡುವುದು. 9.ಶಾಲಾ ಪಠ್ಯಕ್ರಮದಲ್ಲಿ ನಿಗದಿಪಡಿಸಿದಂತೆ ಪ್ರಾಥಮಿಕ ಶಾಲೆಗಳು ಕಾರ್ಯನಿರ್ವಹಿಸುವ ಒಟ್ಟು ದಿನಗಳು, ಪ್ರತಿ ದಿನದ ಕಾರ್ಯಾವಧಿ, ವಿಶೇಷ ಸಂದರ್ಭಗಳಲ್ಲಿ ಶಾಲಾ ವೇಳೆಯ ಕೊರತೆಯಾಗದಂತೆ ಪಾಳಿಗಳಲ್ಲಿ ಕಾರ್ಯನಿರ್ವಹಿಸುವಂತೆ ಸಂಬಂಧಿಸಿದ ಪ್ರಾಥಮಿಕ ಶಾಲೆಗಳಿಗೆ ಅನುಮತಿ ನೀಡುವುದು. 10.ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯ ಹೊರಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಪ್ರಸಕ್ತ ನಿಯಮಗಳ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ

ಅನುಮತಿಯನ್ನುSDMCಯ ಶಿಫಾರಸ್ಸಿನ ಮೇರೆಗೆ ನೀಡುವುದು. 11.ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಗಳ ವತಿಯಿಂದ ನಡೆಸುವ ಶಾಲಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಆ ಸಮಿತಿಗಳು ಸಾರ್ವಜನಿಕರಿಂದ ಸಂಘ ಸಂಸ್ಥೆಗಳಿಂದ ದೇಣಿಗೆ ಸಂಗ್ರಹಿಸಿ ಶಾಲೆಗಳ ಹಿತಕ್ಕಾಗಿ ಬಳಸಲು ಸೂಕ್ತ ಮಾರ್ಗದರ್ಶನ ಹಾಗೂ ನಿಯಮಗಳ ರೀತ್ಯಾ ಅವಶ್ಯಕ ಅನುಮತಿ ನೀಡುವುದು. 12.ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯೊಳಗೆ ಯಾವುದೇ ಅನಧಿಕೃತ ಖಾಸಗಿ ಪ್ರಾಥಮಿಕ ಶಾಲೆಗಳು ಕಾರ್ಯನಿರ್ವಹಿಸದಂತೆ ಎಚ್ಚರಿಕೆ ವಹಿಸಿವುದು ಹಾಗೂ ಅಂತಹ ಯಾವುದಾದರೂ ಪ್ರಕರಣಗಳು ಕಂಡುಬಂದಲ್ಲಿ ವಿಚಾರಣೆ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಕ್ಷಣವೇ ವರದಿ ಮಾಡುವುದು. 13.ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಕನಿಷ್ಟ 10 ಪ್ರಾಥಮಿಕ ಶಾಲೆಗಳಿಗೆ ಮಾಸಿಕ ಭೇಟಿ ನೀಡುವುದು ಹಾಗೂ ಕನಿಷ್ಠ 10 ಶಾಲೆಗಳ ವಾರ್ಷಿಕ ತಪಾಸಣೆಯನ್ನು ಕೈಗೊಳ್ಳುವುದು. ಭೇಟಿ ಕೈಗೊಳ್ಳುವಾಗ ಕಲಿಕಾ ಗುಣಮಟ್ಟ ಕಡಿಮೆ ಇರುವ ಶಾಲೆಗಳಿಗೆ ಆದ್ಯತೆಯನ್ನು ನೀಡಿ, ಕಲಿಕಾ ಗುಣಮಟ್ಟ ಹೆಚ್ಚಿಸಲು ಕ್ರಮ ಕೈಗೊಳ್ಳುವುದು. 14.ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯೊಳಗಿನ ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳ ಕಲಿಕಾ ಗುಣಮಟ್ಟವನ್ನು ಪರೀಕ್ಷಿಸಿ, ಚಟುವಟಿಕೆ ಆಧಾರಿತ ಶಿಕ್ಷಣದ ಮೂಲಕ ಹೆಚ್ಚಳಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸೂಕ್ತ ಮಾರ್ಗದರ್ಶನ ನೀಡುವುದು. 15.ತಮ್ಮ ಕಾರ್ಯಕ್ಷೇತ್ರ ವ್ಯಾಪ್ತಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ, ಕ್ಲಸ್ಟರ್ ಹಂತದ ಮಾಸಿಕ ಸಮಾಲೋಚನಾ ಸಭೆಯಲ್ಲಿ ಅರ್ಥಪೂರ್ಣ ವಾಗಿ ಶೈಕ್ಷಣಿಕ ಉದ್ದೇಶ ಈಡೇರಿಸುವ ನಿಟ್ಟಿನಲ್ಲಿ ಸಭೆಗಳನ್ನು ಏರ್ಪಡಿಸಲು ಮಾರ್ಗದರ್ಶನ ನೀಡುವುದು. ಅದರಲ್ಲಿ ಭಾಗವಹಿಸಿ ಶಿಕ್ಷಕರ ತರಗತಿಯ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಚರ್ಚೆ ಕೈಗೊಳ್ಳುವುದು. 16.ಸಮೂಹ ಸಂಪನ್ಮೂಲ ವ್ಯಕ್ತಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ನಿಯಂತ್ರಣ ಮತ್ತು ಮಾರ್ಗದರ್ಶನ ಮಾಡುವುದು. ಅವರ ಪ್ರವಾಸದ ಕಾರ್ಯಕ್ರಮ ಪ್ರವಾಸ ದಿನಚರಿ ವರದಿಗಳನ್ನು ಅನುಮೋದಿಸುವುದು. 17.ಬಿ.ಆರ್.ಸಿ. ಮತ್ತು ಡಯಟ್‌ಗಳಲ್ಲಿ ನಡೆಸುವ ತರಬೇತಿ ಮತ್ತು ಕಾರ್ಯಾಗಾರಗಳಿಗೆ ಪ್ರತಿ ಶಿಕ್ಷಕರು ಹಾಜರಾಗಲು ನಿಯೋಜನೆ ಮಾಡುವುದು. 18.ಪ್ರಾಥಮಿಕ ಶಿಕ್ಷಕರುಗಳ ಮಾಹಿತಿ ಸಂಗ್ರಹಿಸಿ ಅವರುಗಳ ಕಾರ್ಯ ಪರಿಶೀಲಿಸಿ ಪ್ರತಿ ವರ್ಷ ಪ್ರಶಸ್ತಿಗೆ ಅರ್ಹರಾದ ಉತ್ತಮ ಶಿಕ್ಷಕರ ಆಯ್ಕೆಗೆ ಸೂಕ್ತ ಪ್ರಸ್ತಾವನೆ ಸಲ್ಲಿಸುವುದು. 19. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯ ಶಾಲೆಗಳ ಶಿಕ್ಷಕರ ತರಬೇತಿಯ ಅವಶ್ಯಕತೆಗಳನ್ನು ಗುರ್ತಿಸಲು ಅಗತ್ಯ ತರಬೇತಿ ಪಡೆಯುವಂತೆ ಯೋಜನೆ ಹಾಕುವುದು. 20. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸ ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತ ದರ್ಜೆಗೇರಿಸಲು ಸ್ಥಳ ಪರಿಶೀಲನೆ ನಡೆಸಿ ಶಾಲಾ ನಕ್ಷೆಗನುಸಾರ ಪ್ರಸ್ತಾವನೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು. 21. ತಮ್ಮ ವಲಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ ಪ್ರೌಢಶಾಲಾ ಶಿಕ್ಷಕರು ಒಳಗೊಂಡ ವಿಷಯಾಧಾರಿತ ಶಿಕ್ಷಕರ ಸಂಘಗಳ ಸ್ಥಾಪಿಸಲು ಕ್ರಮ ಕೈಗೊಳ್ಳುವುದು. 22.ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಹಾಜರಾತಿಯ ಕೊರತೆಯನ್ನು ನಿಯಮಗಳಿಗನುಗುಣವಾಗಿ ವಿನಾಯಿತಿ ನೀಡಿ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ನೀಡುವುದು. 23.ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳದಿಂದಾಗುವ ಸ್ವಾಭಾವಿಕ ಬೆಳವಣಿಗೆಯಿಂದಾಗಿ ಅವಶ್ಯವಾದ ಹೆಚ್ಚುವರಿ ಶಿಕ್ಷಕರ ಹುದ್ದೆ ಮಂಜೂರಾತಿ ಹಾಗೂ ಭರ್ತಿಗಾಗಿ ಮೇಲಾಧಿಕಾರಿಗಳಿಗೆ ಸೂಕ್ತ ಪ್ರಸ್ತಾವನೆ ಸಲ್ಲಿಸುವಲ್ಲಿ ಕ್ರಮ ಕೈಗೊಳ್ಳುವುದು. 24. ತಮ್ಮ ವಲಯದ ವ್ಯಾಪ್ತಿಯ ಶಿಕ್ಷಕರು ಕ್ರಿಯಾ ಸಂಶೋಧನೆ ಕೈಗೊಳ್ಳಲು ಅಗತ್ಯ ಮಾರ್ಗದರ್ಶನ ನೀಡುವುದು. 25. ತಮ್ಮ ವಲಯದ ವ್ಯಾಪ್ತಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಲಭ್ಯವಿರುವ ಪ್ರಯೋಗಾಲಯ, ಗ್ರಂಥಾಲಯ, ಕ್ರೀಡಾ ಸಾಮಗ್ರಿಗಳು, ಸಂಗೀತ ಉಪಕರಣಗಳು ಇತ್ಯಾದಿ ಸಂಪನ್ಮೂಲಗಳ ಲಾಭವನ್ನು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳ ಮಕ್ಕಳಿಗೆ ದೊರೆಯುವಂತೆ ಕ್ರಮ ಕೈಗೊಳ್ಳುವುದು. 26. ಸಮುದಾಯದತ್ತ ಶಾಲಾ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಮೇಲ್ವಿಚಾರಣೆ ಶಿಕ್ಷಕರನ್ನು ನಿಯೋಜಿಸುವುದು ಹಾಗೂ ಅವರು ನೀಡಿದ ವರದಿಗಳ ಮೇಲೆ ಸೂಕ್ತಕ್ರಮ ಜರುಗಿಸುವುದು.

**ಆಡಳಿತಾತ್ಮಕ ಕರ್ತವ್ಯಗಳು :**

1. ಸರ್ಕಾರಿ ಪ್ರಾಥಮಿಕ ಕೆಲಸ ನಿರ್ವಹಣೆಗೆ ತೊಂದರೆಯಾಗದಂತೆ ಮಾರ್ಗಸೂಚಿಯಂತೆ ಶೈಕ್ಷಣಿಕ ಉದ್ದೇಶಕ್ಕಾಗಿ ಹೆಚ್ಚುವರಿ ಶಿಕ್ಷಕರನ್ನು ಅವಶ್ಯವಿರುವ ಇತರೆ ಶಾಲೆಗಳಿಗೆ 15 ದಿನಗಳ ಅವಧಿಗೆ ನಿಯೋಜಿಸುವಿಕೆ. ಯಾವುದೇ ಕಾರಣಕ್ಕೂ ವೈಯಕ್ತಿಕ ಕಾರಣಗಳಿಗೆ ನಿಯೋಜನೆ ಮಾಡಬಾರದು. 15 ದಿನಗಳ ನಂತರದ ಅವಧಿಯ ನಿಯೋಜನೆಯನ್ನು ಮಾರ್ಗಸೂಚಿಗಳಂತೆ ಸಂಬಂಧಿಸಿದ ಅಧಿಕಾರಿ ಆದೇಶಿಸತಕ್ಕದ್ದು. (ಶಾಲಾ ಸಂಕೀರ್ಣದ ಮುಖ್ಯೋಪಾಧ್ಯಾಯರ ಮನವಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸಿ ವ್ಯವಸ್ಥಿತ ಏರ್ಪಾಡು ಮಾಡುವುದು) 2. ತಮ್ಮ ಕಾರ್ಯಕ್ಷೇತ್ರದ ಸಮೂಹಸಂಪನ್ಮೂಲ ವ್ಯಾಪ್ತಿಯ ಪ್ರವಾಸ/ತನಿಖಾ ವರದಿಗಳನ್ನು ಪರಿಶೀಲಿಸಿ ಅನುಮೋದಿಸುವುದು. ಅವರ ಕಾರ್ಯನಿರ್ವಹಣಾ ವರದಿ ಬರೆಯುವುದು. 3. ತಮ್ಮ ಕಾರ್ಯ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿಗಳ ಸಂಸ್ಥೆಗಳ ಕೋರ್ಟ್ ಕೇಸ್, ಕಳ್ಳತನ ವಗೈರೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು. 4. ವಲಯದೊಳಗಿನ ಶಾಲಾ ಶಿಕ್ಷಕರ ಹಾಗೂ ಮುಖ್ಯ ಶಿಕ್ಷಕರ ಕಾರ್ಯನಿರ್ವಹಣೆಯ ಬಗ್ಗೆ ವರದಿ ಮಾಡುವುದು. 5. ಶಾಲೆಗಳನ್ನು ನಡೆಸಲು ಸೂಕ್ತ ಕಟ್ಟಡ ನಿರ್ಮಿಸಲು ಅಥವಾ ಬಾಡಿಗೆ ಕಟ್ಟಡ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ನೆರವಿನಿಂದ ಶಾಲೆಗಳು ಕೈಗೊಂಡ ಕ್ರಮಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವುದು. 6. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯ ಪ್ರತಿ ಪ್ರಾಥಮಿಕ ಶಾಲೆಯಲ್ಲಿನ ಸರ್ಕಾರೇತರ ನಿಧಿಗಳಿಂದ ಖರೀದಿಸಿದ, ದೇಣಿಗೆಯಿಂದ ಪಡೆದ ಅನುಪಯುಕ್ತ ಪದಾರ್ಥಗಳನ್ನು ಒಂದು ಬಾರಿಗೆ ರೂ. 5000 ರಂತೆ ಗರಿಷ್ಠ ರೂ. 25000 ಮಿತಿಗೊಳಪಟ್ಟು ಪ್ರತಿ ವರ್ಷ ವಿಲೇವಾರಿ ಮಾಡಲು ಅನುಮತಿ ನೀಡುವುದು. 7. ಪ್ರತಿ ತಿಂಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಮತ್ತು ಬಿ.ಆರ್.ಪಿ.ಗಳ ಸಭೆ ನಡೆಸಿ ಇಡೀ ವಲಯದಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಕಲಿಕಾ ಮಟ್ಟವನ್ನು ಸಮೀಕ್ಷಿಸುವುದು, ಇತರ ಶೈಕ್ಷಣಿಕ ಕಾರ್ಯಗಳ ಸಮೀಕ್ಷೆ ನಡೆಸುವುದು ಹಾಗೂ ಬಾಕಿ ಇರುವ ಕಾರ್ಯಗಳ ಶೀಘ್ರ ಸಮಾಪ್ತಿಗೆ ಕ್ರಮ ಕೈಗೊಳ್ಳುವುದು. 8.ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಶಿಕ್ಷಣದ ವಿವಿಧ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ಪೂರಕವಾದ ಪರಿಶಿಷ್ಟ ಜಾತಿ/ ಪಂಗಡಗಳ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಆರೋಗ್ಯ, ಯುವಜನ ಸೇವಾ ಇಲಾಖೆ ಇನ್ನಿತರ ಮತ್ತು ಸರ್ಕಾರೇತರ ಸಂಸ್ಥೆಗಳೊಡನೆ ಅಂತಹ ಇಲಾಖೇ ಸಂಯೋಜನೆ ಮತ್ತು ಅಭಿವೃದ್ಧಿಗಾಗಿ ಸಮನ್ವಯದಿಂದ ಕಾರ್ಯನಿರ್ವಹಿಸುವುದು. 9.ಸರ್ಕಾರ, ಇಲಾಖೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ

ಪಂಚಾಯತ್‌ಗಳಿಂದ ಆಗಿಂದಾಗ್ಗೆ ಬರುವ ನಿರ್ದೇಶನಗಳನ್ನು ಪಾಲಿಸುವುದು ಮತ್ತು ಅವರು ಯೋಜಿಸುವ ಕಾರ್ಯಗಳನ್ನು ಅಳವಡಿಸುವ ಸೂಕ್ತ ಕ್ರಮ ಕೈಗೊಳ್ಳುವುದು.

**ಆರ್ಥಿಕ ಅಧಿಕಾರ ಮತ್ತು ಕರ್ತವ್ಯಗಳು :**

1. ಸಮೂಹದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪ್ರಾಥಮಿಕ ಶಾಲೆಗಳ ನೌಕರರುಗಳಿಗೆ ಸರ್ಕಾರ ಅಥವಾ ಮೇಲಾಧಿಕಾರಿಗಳು ಒದಗಿಸುವ ವಂಟನಕ್ಕೆ (ಅಲಾಟ್‌ಮೆಂಟ್) ಮಿತಿಗೊಳಿಸಿ, ಆದೇಶಿಸಿರುವ ಮುಂಗಡಗಳನ್ನು ನಿಯಮ ರೀತ್ಯಾ ಮಂಜೂರು ಮಾಡುವ ಅಧಿಕಾರ ನೀಡಿದೆ. 2. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಬೋದಕೇತರ ನೌಕರರುಗಳ ವೇತನ ಡ್ರಾ ಮಾಡುವುದು ಹಾಗೂ ಅವರುಗಳಿಗೆ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವುದು ಹಾಗೂ ಅವರುಗಳಿಗೆ ನಿಯಮಗಳ ರೀತ್ಯ ಗಳಿಕೆ ರಜೆ ಮತ್ತು ಅರ್ಧ ವೇತನದ ರಜೆ ಕಾಲಮಿತಿ ವೇತನ ಬಡ್ತಿ ಮಂಜೂರಾತಿ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಇರುವ ಮಿತಿಯೊಳಗೆ ವೈದ್ಯಕೀಯ ವೆಚ್ಚ ಮರುಪಾವತಿಗಳ ಮಂಜೂರು ಮಾಡುವ ಅಧಿಕಾರ ನೀಡಿದೆ. 3. ಸಹಾಯಕ ಶಿಕ್ಷಣಾಧಿಕಾರಿ ಹಾಗೂ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರನ್ನು ಒಬ್ಬ ತಾಲ್ಲೂಕು ಮಟ್ಟದ ಅಧಿಕಾರಿಯೆಂದು ಗುರುತಿಸಿ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 2 ಟಿಪಿಎಫ್ 98, ದಿನಾಂಕ : 17.05.1999 ರಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ನೀಡಿರುವ /ಪ್ರತ್ಯಾಯೋಜಿತ ಆರ್ಥಿಕ ಅಧಿಕಾರಗಳನ್ನು ನೀಡಿರುವುದರಿಂದ, ಸದರಿ ಆದೇಶದಲ್ಲಿನ ಅಧಿಕಾರ ಹೊಂದಿರತಕ್ಕದ್ದು ಹಾಗೂ ಅದನ್ನು ಪ್ರಯೋಗಿಸತಕ್ಕದ್ದು. ಸದರಿ ಆದೇಶದ ಉದ್ಧೃತ ಭಾಗವನ್ನು ಅನುಬಂಧ–1ರಲ್ಲಿ ನೀಡಲಾಗಿದೆ. ಹಾಗೂ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿ 1957ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರವನ್ನು ಪ್ರಯೋಗಿಸತಕ್ಕದ್ದು.

**– ಟಿ. ಎಂ. ವಿಜಯ ಭಾಸ್ಕರ್**
ಸರ್ಕಾರದ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

**ಸರ್ಕಾರಿ ಆದೇಶ ಸಂಖ್ಯೆ : ಇಡಿ 109 ಡಿಪಿಐ 2007 ದಿನಾಂಕ : 01.08.2007 ರ**

## ಅನುಬಂಧ – 5

### ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು

ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶಗಳಲ್ಲಿ ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಯಶಸ್ವಿ ಅಳವಡಿಕೆಗೆ ಜವಾಬ್ದಾರರಾಗಿರುತ್ತಾರೆ. ಅವರ ಕರ್ತವ್ಯಗಳನ್ನು ಶೈಕ್ಷಣಿಕ, ಆಡಳಿತಾತ್ಮಕ, ಆರ್ಥಿಕ ಹಾಗೂ ಇತರ ಶೀರ್ಷಿಕೆಗಳಲ್ಲಿ ಕೆಳಕಂಡಂತೆ ವರ್ಗೀಕರಿಸಲಾಗಿದೆ.

**ಶೈಕ್ಷಣಿಕ ಕರ್ತವ್ಯಗಳು**

1. ಕ್ಷೇತ್ರದಲ್ಲಿನ ಎಲ್ಲಾ ಮಕ್ಕಳು 8 ವರ್ಷಗಳ ಕಡ್ಡಾಯ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ಪಡೆಯುವ ಸಲುವಾಗಿ ಎಲ್ಲಾ ಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಕಲಿಕಾ ಮಟ್ಟವನ್ನು ಹೆಚ್ಚಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು. 2. ಸಮೂಹಗಳ ಮುಖ್ಯ ಶಿಕ್ಷಕರು ಉಪಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಗಳು ಸಿದ್ಧಪಡಿಸಿ ಸಲ್ಲಿಸಿದ ಶಾಲಾ ನಕ್ಷೆಯನ್ನು ಪರಿಶೀಲಿಸಿ ಶಾಲಾ ರಹಿತ ಹಳ್ಳಿಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳುವುದು. 3. ಹೊಸ ಪ್ರೌಢಶಾಲೆಗಳ ಮಂಜೂರಾತಿಗಾಗಿ ಬರುವ ಪ್ರಸ್ತಾವನೆಗಳ ಸ್ಥಳ ಪರಿಶೀಲನೆ ಮತ್ತು ಶಾಲಾ ನಕ್ಷೆಯನ್ವಯ ಹೊಸ ಪ್ರೌಢಶಾಲೆಯ ಸ್ಥಾಪನೆಯ ಸಾಧಕ–ಬಾಧಕಗಳ ಬಗ್ಗೆ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. 4.ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯೊಳಗೆ ಹಾಗೂ ಹೊರಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಪ್ರಸಕ್ತ ನಿಯಮಗಳ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ಅನುಮತಿಯನ್ನು ಖ.ಆ.ಒ. ಶಿಫಾರಸ್ಸಿನ ಮೇರೆಗೆ ನೀಡುವುದು. 5. ಪ್ರೌಢಶಾಲೆಗಳ ಶಾಲಾ ಶಿಕ್ಷಣ ಸಮಿತಿಯ ವತಿಯಿಂದ ನಡೆಸುವ ಶಾಲಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಆ ಸಮಿತಿಗಳು ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ, ದೇಣಿಗೆ ಸಂಗ್ರಹಿಸಿ ಶಾಲೆಗಳ ಹಿತಕಕಾಗಿ ಬಳಸಲು ಸೂಕ್ತ ಮಾರ್ಗದರ್ಶನ ಹಾಗೂ ನಿಯಮಾವಳಿಗಳ ರೀತ್ಯಾ ಅವಶ್ಯಕ ಅನುಮತಿ ನೀಡುವುದು. 6.ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯೊಳಗೆ ಯಾವುದೇ ಅನಧಿಕೃತ ಪ್ರೌಢಶಾಲೆಗಳು ಕಾರ್ಯ ನಿರ್ವಹಿಸದಂತೆ ಎಚ್ಚರಿಕೆ ವಹಿಸಿ ವಿದ್ಯಾರ್ಥಿಗಳ/ಪೋಷಕರ ತೊಂದರೆಗಳನ್ನು ನಿವಾರಿಸುವುದು. ಅನಧಿಕೃತ ಪ್ರಾಥಮಿಕ ಶಾಲೆಗಳ ಬಗ್ಗೆ ಮುಖ್ಯ ಶಿಕ್ಷಕರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಗಳು ನೀಡುವ ವರದಿಯಂತೆ ಅನಧಿಕೃತ ಶಾಲೆಗಳ ಕೆಲಸ ನಿರ್ವಹಿಸುತ್ತಿರುವುದನ್ನು ಗುರುತಿಸಿದ ಕೂಡಲೇ ಅವುಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳುವುದು.

7. ಪ್ರೌಢಶಾಲಾ ವಿದ್ಯಾರ್ಥಿಗಳ ಹಾಜರಾತಿಯ ಕೊರತೆಯನ್ನು ನಿಯಮಗಳಿಗನುಸಾರ ವಿನಾಯಿತಿ ನೀಡಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡುವುದು. 8. ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳದಿಂದಾಗುವ ಸ್ವಾಭಾವಿಕ ಬೆಳವಣಿಗೆಯಿಂದಾಗಿ ಅವಶ್ಯಕವಾದ ಹೆಚ್ಚುವರಿ ಶಿಕ್ಷಕರ ಹುದ್ದೆ ಮಂಜೂರಾತಿ ಹಾಗೂ ಭರ್ತಿಗಾಗಿ ಮೇಲಾಧಿಕಾರಿಗಳಿಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳುವುದು. 9. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಹಾಜರಾತಿ, ಶಿಕ್ಷಣದಲ್ಲಿ ಅಪವ್ಯಯ ನಿವಾರಿಸಲು ಸರ್ಕಾರ, ಶಾಲಾ ಅಭಿವೃದ್ಧಿ ಸಮಿತಿಗಳ ಹಾಗೂ ಶಿಕ್ಷಣ ಇಲಾಖೆ ಸೂಚಿಸಿದಂತೆ ಸಕಾಲಿಕ ಕ್ರಮ ಕೈಗೊಳ್ಳುವುದು. ಇದಕ್ಕಾಗಿ ಸರ್ಕಾರದಿಂದ ದೊರಕುವ ವಿವಿಧ ಪ್ರೋತ್ಸಾಹಿಕ ಕಾರ್ಯಕ್ರಮಗಳನ್ನು ಅಂದರೆ ಮಧ್ಯಾಹ್ನ ಉಪಹಾರ ಯೋಜನೆ, ಉಚಿತ ಪಠ್ಯಪುಸ್ತಕ ವಿತರಣೆ, ಉಚಿತ ಸಮವಸ್ತ್ರ ವಿತರಣೆ, ವಿದ್ಯಾರ್ಥಿಗಳ ಹಾಜರಾತಿ ಹಾಗೂ ವಿದ್ಯಾರ್ಥಿ ವೇತನಗಳ ವಿತರಣೆಯ ಸಮರ್ಪಕವಾಗಿ ಅಳವಡಿಸಲು ಕ್ರಮ ಕೈಗೊಳ್ಳುವುದು. 10. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಕನಿಷ್ಠ 10 ಪ್ರೌಢಶಾಲೆಗಳ ಹಾಗೂ 15 ಹಿರಿಯ ಪ್ರಾಥಮಿಕ ಶಾಲೆಗಳ ವಾರ್ಷಿಕ ತಪಾಸಣೆ ನಡೆಸುವುದು ಹಾಗೂ ತನ್ನ ವ್ಯಾಪ್ತಿಯ ಎಲ್ಲಾ ಪ್ರೌಢಶಾಲೆಗಳಿಗೂ ವರ್ಷಕ್ಕೆ ಕನಿಷ್ಠ ಒಮ್ಮೆಯಾದರೂ ಸಂದರ್ಶನ ನೀಡುವುದು. 11. ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯೊಳಗಿನ ಪ್ರೌಢಶಾಲೆಗಳಿಗೆ ಭೇಟಿ ನೀಡಿ ಸಂದರ್ಭದಲ್ಲಿ ಮಕ್ಕಳ ಕಲಿಕಾ ಗುಣಮಟ್ಟವನ್ನು ಪರೀಕ್ಷಿಸಿ ಹೆಚ್ಚಳಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು

ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು. 12. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳಿಗಾಗಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ರಾಜ್ಯ ಶಿಕ್ಷಣ ಸಂಶೋಧನೆ ತರಬೇತಿ ಇಲಾಖೆ, ಡಯಟ್ ಹಾಗೂ ಇತರೆ ಸಂಸ್ಥೆಗಳು ನಡೆಸುವ ಸೆಮಿನಾರ್, ವರ್ಕ್‌ಶಾಪ್‌ಗಳಲ್ಲಿ ಶಿಕ್ಷಕರು ಭಾಗವಹಿಸಲು ಹಾಗೂ ಈ ರೀತಿ ಪಡೆದ ಹೊಸ ಜ್ಞಾನವನ್ನು ಶಾಲೆಗಳಲ್ಲಿ ಅಳವಡಿಸಲು ವ್ಯವಸ್ಥೆ ಮಾಡುವುದು ಮತ್ತು ತರಬೇತಿ ನಿಯೋಜಿಸುವುದು. 13. ಪ್ರೌಢಶಾಲಾ ಶಿಕ್ಷಕರು ನವೀನ ಪ್ರಯೋಗ ನಡೆಸಲು ಪ್ರೋತ್ಸಾಹ ನೀಡಿ ಕ್ರಿಯಾತ್ಮಕ ಸಂಶೋಧನೆ ನಡೆಸಲು ಸಿಟಿಇ, ಶಿಕ್ಷಕರ ಕ್ಷೇಮ ನೀತಿಗಳ ಮೂಲಕ ನೆರವಿನ ವ್ಯವಸ್ಥೆ ಮಾಡುವುದು. 14.ಪ್ರೌಢಶಾಲೆಗಳ ಶಿಕ್ಷಕರುಗಳ ಮಾಹಿತಿ ಸಂಗ್ರಹಿಸಿ ಅವರುಗಳ ಕಾರ್ಯ ಪರಿಶೀಲಿಸಿ ಪ್ರತಿ ವರ್ಷ ಪ್ರಶಸ್ತಿಗೆ ಅರ್ಹರಾದ ಉತ್ತಮ ಶಿಕ್ಷಕರ ಆಯ್ಕೆಗೆ ಸೂಕ್ತ ಪ್ರಸ್ತಾವನೆ ಸಲ್ಲಿಸುವುದು. 15. ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯಲ್ಲಿ ನೆರವಾಗಲು ಕ್ರೀಡಾ ಕೂಟಗಳು, ಪ್ರತಿಭಾ ಕಾರಂಜಿ ಹಾಗೂ ಇತರೆ ಸಾಂಸ್ಕೃತಿಕ, ಸಾಹಿತ್ಯಿಕ ಕ್ರೀಡಾ ಸ್ಪರ್ಧೆಗಳ ವ್ಯವಸ್ಥೆ ಮಾಡುವುದು, ಬೇಸಿಗೆ ಹಾಗೂ ರಜೆ ಶಿಬಿರಗಳಲ್ಲಿ ವೈಜ್ಞಾನಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ವ್ಯವಸ್ಥೆ ಮಾಡುವುದು. ವಿದ್ಯಾರ್ಥಿಗಳಿಗೆ ವಿವಿಧ ವೃತ್ತಿಗಳ ಪರಿಚಯ ಮೂಡಿಸುವ ಕಾರ್ಯಕ್ರಮ ಅಳವಡಿಸುವುದು. 16. ತಮ್ಮ ಕಾರ್ಯಕ್ಷೇತ್ರದಲ್ಲಿ ನಡೆಸಿದ ಶೈಕ್ಷಣಿಕ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಪ್ರಕಟಿಸಲು ವಾರ್ಷಿಕ ಸಂಚಿಕೆ ಹೊರಡಿಸುವುದು ಹಾಗೂ ಈ ವಾರ್ಷಿಕ ಸಂಚಿಕೆಯಲ್ಲಿ ಶೈಕ್ಷಣಿಕ ಪ್ರಬಂಧವನ್ನು ಪ್ರಕಟಿಸುವುದು. 17. ಶಿಕ್ಷಣದ ಕಾರ್ಯಕ್ರಮ ವ್ಯಾಪಾರಕ್ಕೊಳಪಡಿಸುವುದು ತಡೆಗಟ್ಟಲು ಸಮಗ್ರ ಶಿಕ್ಷಣ ಕಾಯ್ದೆಯ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ಕೈಗೊಳ್ಳುವುದು. 18. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸ ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತ ದರ್ಜೆಗೇರಿಸಲು ಮುಖ್ಯ ಶಿಕ್ಷಕರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ಉಪನಿರ್ದೇಶಕರುಗಳಿಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು. 19. ಸಮೂಹ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಶೈಕ್ಷಣಿಕ ಕಾರ್ಯದ ಬಗ್ಗೆ ಮೇಲ್ವಿಚಾರಣೆ, ಮಾರ್ಗದರ್ಶನ ನೀಡುವುದು ಅವರ ಪ್ರಸ್ತಾವನೆಗಳನ್ನು ವರದಿಗಳನ್ನು ಪರಿಶೀಲಿಸಿ ಮುಂದಿನ ಸೂಕ್ತ ಕ್ರಮ ಜರುಗಿಸುವುದು.

## ಆಡಳಿತಾತ್ಮಕ ಕರ್ತವ್ಯಗಳು :

1. ಸರ್ಕಾರಿ ಪ್ರೌಢಶಾಲೆಗಳ ಕೆಲಸ ನಿರ್ವಹಣೆಗೆ ತೊಂದರೆಯಾಗದಂತೆ ಹೆಚ್ಚುವರಿ ಶಿಕ್ಷಕರನ್ನು ಅವಶ್ಯವಿರುವ ಇತರೆ ಶಾಲೆಗಳಿಗೆ ನಿಯೋಜಿಸುವಿಕೆ. (ಶಾಲಾ ಸಂಕೀರ್ಣದ ಮುಖ್ಯೋಪಾಧ್ಯಾಯರ ಮನವಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸಿ ವ್ಯವಸ್ಥಿತ ಏರ್ಪಾಡು ಮಾಡುವುದು) 2. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಶೈಕ್ಷಣಿಕ ಅಗತ್ಯತೆ ಉದ್ದೇಶಕ್ಕೆ ಮಾತ್ರ 15 ದಿನಗಳ ಅವಧಿಗಿಂತ ಹೆಚ್ಚಿಗೆ ಮಾರ್ಗಸೂಚಿಯಂತೆ ನಿಯೋಜಿಸುವುದು (ಸಹಾಯಕ ಶಿಕ್ಷಣಾಧಿಕಾರಿ ವರದಿ ಪರಿಗಣಿಸಿ ವ್ಯವಸ್ಥೆ ಮಾಡುವುದು) 3.ವಲಯದ ವ್ಯಾಪ್ತಿಯೊಳಗೆ ಸರ್ಕಾರ ಮತ್ತು ಇಲಾಖೆ ಆಗಿಂದಾಗ್ಗೆ ನೀಡುವ ಆದೇಶಗಳನ್ನು ಆಧರಿಸಿ ತಾಲ್ಲೂಕು ಮಟ್ಟದ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಗಳ ಬಗ್ಗೆ ಕ್ರಮ ಕೈಗೊಳ್ಳುವುದು. 4. ಪದವೀಧರ ಶಾಲಾ ತನಿಖಾಧಿಕಾರಿಗಳು, ಸಹಾಯಕ ಶಿಕ್ಷಣಾಧಿಕಾರಿಗಳು ಮತ್ತು ಶಾಲಾ ಸಂಕೀರ್ಣದ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಪ್ರವಾಸ / ದಿನಚರಿ ವರದಿಗಳನ್ನು ಪರಿಶೀಲಿಸಿ ಅನುಮೋದಿಸುವುದು. 5. ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿಗಳು ಮತ್ತು ಸಂಸ್ಥೆಗಳ ಕೋರ್ಟ್ ಕೇಸ್, ಕಳ್ಳತನ, ಇತ್ಯಾದಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು. 6. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯ ಪ್ರೌಢ ಶಾಲೆಗಳಲ್ಲಿನ ಸರ್ಕಾರೇತರ ನಿಧಿಗಳಿಂದ ಖರೀದಿಸಿದ, ದೇಣಿಗೆಯಿಂದ ಪಡೆದ ಅನುಪಯುಕ್ತ ಪದಾರ್ಥಗಳನ್ನು ಒಂದು ಬಾರಿಗೆ ರೂ. 5000 ರಂತೆ ಗರಿಷ್ಠ ರೂ. 50,000 ಮಿತಿಗೊಳಪಟ್ಟು ಪ್ರತಿ ವರ್ಷ ವಿಲೇವಾರಿ ಮಾಡಲು ಅನುಮತಿ ನೀಡುವುದು. 7. ಪ್ರತಿ ತಿಂಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಸಮೂಹಗಳ ಮುಖ್ಯೋಪಾಧ್ಯಾಯರು ಮತ್ತು ಸಹಾಯಕ ಶಿಕ್ಷಣಾಧಿಕಾರಿ ಹಾಗೂ ಶಾಲಾ ತನಿಖಾಧಿಕಾರಿಗಳ ಸಭೆ ನಡೆಸಿ ಇಡೀ ಕ್ಷೇತ್ರದಲ್ಲಿ ನಡೆದ ಕಾರ್ಯಗಳ ಸಮೀಕ್ಷೆ ನಡೆಸುವುದು ಹಾಗೂ ಬಾಕಿ ಇರುವ ಕಾರ್ಯಗಳ ಶೀಘ್ರ ಸಮಾಪ್ತಿಗೆ ಕ್ರಮ ಕೈಗೊಳ್ಳುವುದು. 8. ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಶಿಕ್ಷಣದ ವಿವಿಧ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ಪೂರಕವಾದ ಪರಿಶಿಷ್ಟ ಜಾತಿ / ಪಂಗಡಗಳ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಆರೋಗ್ಯ ಇಲಾಖೆ, ಯುವಜನ ಸೇವಾ ಇಲಾಖೆ ಇನ್ನಿತರ ಮತ್ತು ಸರ್ಕಾರೇತರ ಸಂಸ್ಥೆಗಳೊಡನೆ ಅಂತಹ ಇಲಾಖೆ ಸಂಯೋಜನೆ ಮತ್ತು ಅಭಿವೃದ್ಧಿಗಾಗಿ ಸಮನ್ವಯದಿಂದ ಕಾರ್ಯನಿರ್ವಹಿಸುವುದು. 9. ಸರ್ಕಾರ, ಇಲಾಖೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಿಂದ ಆಗಿಂದಾಗ್ಗೆ ಬರುವ ನಿರ್ದೇಶನಗಳನ್ನು ಪಾಲಿಸುವುದು ಮತ್ತು ಅವರು ಯೋಜಿಸುವ ಕಾರ್ಯಗಳನ್ನು ಅಳವಡಿಸಲು ಸೂಕ್ತಕ್ರಮ ಕೈಗೊಳ್ಳುವುದು.

## ಆರ್ಥಿಕ ಅಧಿಕಾರ ಮತ್ತು ಕರ್ತವ್ಯಗಳು :

1. ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ / ಅನುದಾನಿತ ಅಂಗೀಕೃತ ಪ್ರೌಢಶಾಲೆಗಳ ಮುಂಗಡ ವೇತನ ಬಿಲ್ಲುಗಳಿಗೆ ನಿಯಮಗಳಿಗನುಸಾರವಾಗಿ ಮೇಲು ಸಹಿ ಮಾಡುವ ಅಧಿಕಾರ ಹೊಂದಿರುತ್ತಾರೆ. 2. ಸಮೂಹ ಶಿಕ್ಷಣಾಧಿಕಾರಿಯ ಅಧಿಕಾರ ಮೀರಿ ತಮ್ಮ ಕಾರ್ಯಕ್ಷೇತ್ರದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಶಿಕ್ಷಕರು, ಮತ್ತು ಕಛೇರಿ ನೌಕರರುಗಳ ವೇತನ/ಬಡ್ತಿ ನಿಯಮಗಳ ರೀತ್ಯಾ ಗಳಿಕೆ ರಜೆ, ವೇತನ ರಜೆ ಕಾಲಮಿತಿ ವೇತನ ಬಡ್ತಿ ಮಂಜೂರಾತಿ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಇರುವ ಮಿತಿಯೊಳಗೆ ವೈದ್ಯಕೀಯ ವೆಚ್ಚ ಮರುಪಾವತಿಗಳ ಮಂಜೂರು ಮಾಡುವ ಅಧಿಕಾರ ಹೊಂದಿರುತ್ತಾರೆ. 3. ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಮೂಹ ಹಂತದಲ್ಲಿ ಜಾರಿ ಮಾಡುತ್ತಿರುವ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಮಾರ್ಗದರ್ನ ನೀಡುವುದು. 4. ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳ ಸಮರ್ಪಕ ಅನುಷ್ಠಾನದ ಜವಾಬ್ದಾರಿ ಹೊಂದಿರುತ್ತಾರೆ. 5. ತಾಲ್ಲೂಕು ಹಂತದಲ್ಲಿ ವಿವಿಧ ಯೋಜನೆಗಳ ಮಾಹಿತಿ ಕ್ರೋಢೀಕರಣ ಕೆಲಸ ನಿರ್ವಹಿಸುವರು. 6. ತಾಲ್ಲೂಕಿನ ಎಲ್ಲಾ ಅಭಿವೃದ್ಧಿ ಯೋಜನೆಗಳ ಮೇಲುಸ್ತುವಾರಿ ನೋಡಿಕೊಳ್ಳುವುದು.

**– ಟಿ. ಎಂ. ವಿಜಯ ಭಾಸ್ಕರ್**
ಸರ್ಕಾರದ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

# ಚಿತ್ರಸುದ್ದಿ

ವಿಧಾನ ಪರಿಷತ್ ಸಭಾಪತಿಗಳಾದ ಪ್ರೊ. ಬಿ.ಕೆ. ಚಂದ್ರಶೇಖರ್‌ರವರ ನೇತೃತ್ವದಲ್ಲಿ ದಿನಾಂಕ 14.7.07ರಂದು ಟಿ. ರಮೇಶ್ ಮಾಜಿ ನಗರಸಭಾ ಸದಸ್ಯರು ಬ್ಯಾಟರಾಯನಪುರ ಇವರಿಂದ ಸ.ಕಿ.ಪ್ರಾ. ಶಾಲೆ ನಾಗವಾರ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಿದರು.

– ಮುಖ್ಯೋಪಾಧ್ಯಾಯರು




ಶಿಕಾರಿಪುರ : ಸಿದ್ಧಲಿಂಗೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಶಾಲಾ ವಿದ್ಯಾರ್ಥಿಗಳನ್ನು ಪೋಷಕರು ಮೀನು ಮಾರಲು ಬಳಸಿಕೊಳ್ಳುತ್ತಿದ್ದರು. ಅವರ ಮನ ಪರಿವರ್ತಿಸಿ ಮತ್ತೆ ಮರಳಿ ಶಾಲೆಗೆ ಕರೆತರಲಾಯಿತು. ಚಿತ್ರದಲ್ಲಿ ರಾಷ್ಟ್ರಪ್ರಶಸ್ತಿ ಪುರಸ್ಕೃತ ಮುಖ್ಯೋಪಾಧ್ಯಾಯ ಸುಭಾಷ್ ಚಂದ್ರ ಸ್ವಾನಿಕ್ ಎಸ್.ಡಿ.ಎಂ.ಸಿ. ಸದಸ್ಯರಾದ ಅಂಚೇರ ಮೂರ್ತಪ್ಪ, ರಿಯಾಜ್ ಅಹಮ್ಮದ್‌ರವರನ್ನು ಕಾಣಬಹುದು.

– ಸುಭಾಷ್ ಚಂದ್ರ ಸ್ವಾನಿಕ್
ಮು.ಶಿ.



ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕೆ 20 ಅಂಶದ ಕಾರ್ಯಕ್ರಮಗಳು ಹೇಗೆ ಸಹಕಾರಿಯಾಗಬಲ್ಲವು ಎಂಬುದಕ್ಕೆ ಬೆಳಗಾವಿ ಜಿಲ್ಲೆ, ಸೌದತ್ತಿ ತಾ. ಸುಬ್ಬಾಪೂರದ ಸ.ಕಿ.ಪ್ರಾ.ಶಾಲೆ, ಒಳ್ಳೆಯ ಉದಾಹರಣೆ. ಇಲ್ಲಿ ಸುಭಾಷಿತ, ಕವಿಗಳು, ಕಲಾವಿದರು, ವೀರಯೋಧರು ಹೀಗೆ ಹಲವಾರು ವಿಶೇಷಗಳನ್ನೊಳಗೊಂಡ 20 ಅಂಶದ ಕಲಿಕಾ ಕಾರ್ಯಕ್ರಮಗಳನ್ನು ಹಾಗೂ 15ಕ್ಕೂ ಹೆಚ್ಚು ವಿವಿಧ ವಿಷಯಗಳನ್ನು ಬಿಂಬಿಸುವ ಕಿರುಹೊತ್ತಿಗೆಗಳನ್ನು ತಯಾರಿಸಿ ಮಕ್ಕಳಿಗಾಗಿ ಇಡಲಾಗಿದೆ. ಇವುಗಳ ಮೂಲಕ ಮಕ್ಕಳಲ್ಲಿ ಸದ್ಭಾವನೆ ಮೂಡಿ, ನಾಡು-ನುಡಿ, ಸಂಸ್ಕೃತಿಯ ಬಗ್ಗೆ ತಿಳಿದುಕೊಂಡು ಸುಸಂಸ್ಕೃತರಾಗಲು ಇದು ಸಹಕಾರಿಯಾಗಿದೆ.

– ಕು.ದೀಪ ಶಂ. ಗುರನಗೌಡ್ರ, ಸ.ಶಿ.



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕ್ಯಾದಿಗೆರೆ ಕಡೂರು ತಾ॥ ಚಿಕ್ಕಮಗಳೂರು ಜಿಲ್ಲೆಯ ಶಾಲೆಯ 1 ರಿಂದ 7ನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತವಾಗಿ ನೋಟು ಬುಕ್‌ಗಳನ್ನು ಬೆಂಗಳೂರಿನ ಕೆ.ಆರ್.ಪುರದ ವಾಸಿಗಳಾದ ಶ್ರೀಯುತ ಎಮ್.ಶ್ರೀನಿವಾಸ್‌ರವರು ನೀಡಿದ್ದು ಆ ಪುಸ್ತಕಗಳನ್ನು ದಿನಾಂಕ:7-7-2007ರಂದು ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಸದಸ್ಯರು ಮತ್ತು ಊರಿನ ಪೋಷಕ ವರ್ಗ, ಗ್ರಾಮಸ್ಥರ ಸಭೆ ಕರೆದು ವಿತರಿಸಲಾಯಿತು. ಈ ಸಭೆಯಲ್ಲಿ ಶಿಕ್ಷಣ ಸಂಯೋಜಕರು ಕುಮಾರಪ್ಪ, ಸಿ.ಆರ್.ಪಿ.ಕುಬೇಂದ್ರಾಚಾರ್ ಮತ್ತು ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ಹಾಗೂ ಈ ನೋಟ್‌ಪುಸ್ತಕ ವಿತರಣಾ ಮೇಲ್ವಿಚಾರಕ ಕೆ.ಟಿ. ಓಂಕಾರಪ್ಪನವರು ಉಪಸ್ಥಿತರಿದ್ದರು.

– ಹೆಚ್. ಸಿ. ಕುಬೇರಪ್ಪ
ಮುಖ್ಯೋಪಾಧ್ಯಾಯರು, ಸ.ಹಿ.ಪ್ರಾ ಶಾಲೆ ಕ್ಯಾದಿಗೆರೆ, ಕಡೂರು ತಾ.



# ತಿಂಗಳ ಪದ









## ಓ ನಮ್ಮ ಬಾವುಟ

ಓ. ನಮ್ಮ ಬಾವುಟ
ಓ. ನಮ್ಮ ಬಾವುಟ
ಸ್ವತಂತ್ರ ಭಾವ ಮೆರೆಯುತ
ಜೈ ಅಖಂಡ ಭಾರತ

ಹಸಿರುಕಾನು ಜಲಧಾರೆಯ
ಸಮೃದ್ಧಿಯ ಒಡಲಿಗೆ
ತ್ಯಾಗಶಕ್ತಿ ಅಹಿಂಸೆ ಸತ್ಯ
ಬೆಳಗಿದಂಥ ನಾಡಿಗೆ

ಸಂಕೇತವು ನೀನೇ..................
ಚೈತನ್ಯವು ನೀನೇ.....................

ಹಿಮಗಿರಿಯ ಕಂದರದಲ್ಲಿ
ಪರ್ವತಾಗ್ರ ಶಿಖರದಲ್ಲಿ
ವಸುಂಧರೆಯ ಗರ್ಭದಲ್ಲಿ
ಹರಿವ ನದಿಯ ತಾನದಲ್ಲಿ
ಮಿಡಿಯುತಿರುವ ಭಾವಕೆ

ಸ್ಫೂರ್ತಿಯು ನೀನೇ.............
ಆತ್ಮ ಶಕ್ತಿ ನೀನೇ.................

ಇತಿಹಾಸಕೆ ನಮಿಸುತ
ರಾಷ್ಟ್ರಪ್ರೇಮ ಮೆರೆಯುತ
ಮಾತೃಭೂಮಿಗಾಗಿ ದುಡಿದ
ಧೀರ ಸುತರ ಸ್ಮರಿಸುತ
ಹರುಷ ಹೆಮ್ಮೆಯಿಂದೇ

ವಂದಿಸುವೆವು ಇಂದೇ.........
ಜೈ ಭಾರತ ಎಂದೇ............



ಕಲಾವತಿ ಕೆ.ಜಿ.
ಸಹ ಸಂಪಾದಕರು, ಶಿಕ್ಷಣವಾರ್ತೆ

ವಾಘಾ ಗಡಿಯಲ್ಲಿ ೬೦ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ

www.schooleducation.kar.nic.in
Published by : commissioner for Public Instruction and State Project Director, Sarva Shikshana Abhiyana, Karnataka
Krupatunga Road, Bengaluru-560 001. Ph : 080 - 2224 6976
Printed at : Abhimaani Publication Ltd., Dr. Rajkumar Road, Rajajinagar, Bengaluru - 560 010, Ph : 23123141